೭೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು

ಕಾನೂನು ದೀಪಿಕಾ

ಎಸ್. ಎಚ್. ಮಿಟ್ಟಲ ಕೋಡ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

BVP-1211-27/2/17
1254-(5)

೭೭ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಬೆಂಗಳೂರು

ಕಾನೂನು ದೀಪಿಕಾ

ಎಸ್. ಎಚ್. ಮಿಟ್ಟಲ ಕೋಡ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KANOONU DEEPIKAA- by : **S.H. Mittala Kod**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vi + 48 Price : **Rs. 25=00 ; 2011**

ಮುದ್ರಣದ ವರ್ಷ : ೨೦೧೧
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಮುಖಪುಟ ವಿನ್ಯಾಸ : ಶ್ರೀ ಶಿವು ವಿ. ಹೂಗಾರ

ಮುದ್ರಣ : ಬಿ.ಎಂ. ಶ್ರೀ ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚೆಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ–ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೧೦ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ವಿವಿಧ ಪ್ರಕಾರದ ಪುಸ್ತಕಗಳಿಗೆ ರಿಯಾಯಿತಿ ನೀಡಿದ್ದರ ಪರಿಣಾಮವಾಗಿ ಒಟ್ಟು ೧೦ ಲಕ್ಷ ರೂಪಾಯಿ ಮೌಲ್ಯದ ವಹಿವಾಟು ನಡೆದಿರುವುದು ಪರಿಷತ್ತಿನ ಪುಸ್ತಕಗಳ ಮಾರಾಟ ಇತಿಹಾಸದಲ್ಲಿ ಸಾರ್ವಕಾಲಿಕ ದಾಖಲೆಯಾಗಿದೆ. ಬಹುಕಾಲದ ನಂತರ ಮರುಮುದ್ರಣಗೊಂಡ ಬೃಹತ್ ಕನ್ನಡ – ಕನ್ನಡ ನಿಘಂಟಿನ ಎಂಟು ಸಂಪುಟಗಳ ಮಾರಾಟವೂ ರಭಸವಾಗಿ ನಡೆಯುತ್ತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೧ ಫೆಬ್ರವರಿ ೪ ರಿಂದ ೬ ರವರೆಗೆ ಮೂರು ದಿನಗಳ ಕಾಲ ಬೆಂಗಳೂರಿನಲ್ಲಿ ನಡೆಯಲಿರುವ ೭೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ಹಲವು ಮೌಲಿಕ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ–ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್ ಆರ್.ಕೆ.
ಅಧ್ಯಕ್ಷರು

ಲೇಖಕರ ನುಡಿ

"ಕಾನೂನು ಅಜ್ಞಾನ ಕ್ಷಮಾರ್ಹವಲ್ಲ" ಎಂಬುದೊಂದು ಉಕ್ತಿ. ಇದರ ಅರ್ಥ ಎಲ್ಲರಿಗೂ ಕಾನೂನು ತಿಳಿದಿದೆ ಎಂದಲ್ಲ. ಆದರೆ ಎಲ್ಲರೂ ಕಾನೂನು ತಿಳಿದುಕೊಳ್ಳಬೇಕು ಎನ್ನುವುದು. ಆದರೆ, ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲ ಕಾನೂನುಗಳು ಆಂಗ್ಲ ಭಾಷೆಯಲ್ಲಿಯೇ ರಚಿತವಾಗುತ್ತವೆ. ಬಹಳಷ್ಟು ಜನ ನಿರೀಕ್ಷರಿಗಳಿರುವ ಇಲ್ಲಿ ಆಂಗ್ಲ ಭಾಷೆಯಲ್ಲಿರುವ ಕಾನೂನನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಕಾರಣ ಕಾನೂನುಗಳು ಜನರಾಡುವ ಭಾಷೆಯಲ್ಲಿಯೇ ಇರಬೇಕು ಎಂದು ಈಚೆಗೆ ಜನರಾಡುವ ಭಾಷೆಯಲ್ಲಿ ಕಾನೂನು ರಚನೆಗೆ ಕ್ರಮ ಕೈಕೊಳ್ಳಲಾಗಿದೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಕನ್ನಡದಲ್ಲಿ ಕಾನೂನು ಸಾಹಿತ್ಯ ನಿರೀಕ್ಷಿತ ಮಟ್ಟದಲ್ಲಿ ಬೆಳೆದಿಲ್ಲ.

ಶ್ರೀಸಾಮಾನ್ಯನಿಗೆ ಕಾನೂನು ತಿಳುವಳಿಕೆ ನೀಡುವಲ್ಲಿ ಸಹಾಯಕವಾಗಲು ಕನ್ನಡದಲ್ಲಿ ಕಾನೂನು ಸಾಹಿತ್ಯ ರಚನೆ ಅನಿವಾರ್ಯ. ಈ ವಿಚಾರದಲ್ಲಿ ಕನ್ನಡದಲ್ಲಿ ಕಾನೂನು ಪುಸ್ತಕ ರಚಿಸುವ ಉದ್ದೇಶ ನನ್ನಲ್ಲಿದ್ದರೂ ನನ್ನ ಕಾರ್ಯಬಾಹುಳ್ಯದ ಕಾರಣ ಅದನ್ನು ಕಾರ್ಯರೂಪಕ್ಕೆ ತರಲಾಗಲಿಲ್ಲ. ಆದರೆ ಒಂದು ದಿನ ಕನ್ನಡ ಸಾಹಿತ್ಯ ಪರಿಷತ್ತಿನ ಹಿಂದಿನ ಅಧ್ಯಕ್ಷರಾದ ಡಾ. ಸಾ. ಶಿ. ಮರುಳಯ್ಯ ಅವರನ್ನು ಭೇಟಿಯಾದಾಗ ಶ್ರೀಸಾಮಾನ್ಯನಿಗೆ ಅನುಕೂಲವಾಗುವ ಕನ್ನಡ ಕಾನೂನು ಪುಸ್ತಕ ಬರೆದುಕೊಡಲು ಪ್ರೇರೇಪಿಸಿದರು. ಅದರ ಪರಿಣಾಮವಾಗಿ ಈ ನನ್ನ "ಕಾನೂನು ದೀಪಿಕಾ" ಪುಸ್ತಕ ರಚನೆಯಾಯಿತು.

ಈ ಪುಸ್ತಕದಲ್ಲಿ ಜನಸಾಮಾನ್ಯರಿಗೆ ದೈನಂದಿನ ಜೀವನದಲ್ಲಿ ಬೇಕಾಗುವ ಕಾಯಿದೆಗಳ ಕೆಲವು ಮಹತ್ವದ ಅಂಶಗಳನ್ನು ಮಾತ್ರ ಬಿಂಬಿಸಲಾಗಿದೆ. ಈ ಪುಸ್ತಕ ರಚನೆ ಆದ ಮೇಲೆ ಇದರ ಪ್ರಕಟಣೆಗೆ ಅನುಮತಿ ಪಡೆಯಲು ವಿಳಂಬ ಆಯಿತು. ಈ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಶ್ರೀ ಎನ್. ಬಸವಾರಾಧ್ಯರು ಆಯ್ಕೆಯಾದರು. ದೂರದ ಕೊಪ್ಪಳದಿಂದ ಬೆಂಗಳೂರಿಗೆ ದೂರವಾಣಿಯಲ್ಲಿ ಶ್ರೀ ಎನ್. ಬಸವಾರಾಧ್ಯರನ್ನು ಸಂಪರ್ಕಿಸಿದಾಗ ಅವರು ನನ್ನ ಪುಸ್ತಕ ಪ್ರಕಟಣೆಗೆ ವೈಯಕ್ತಿಕ ಗಮನ ಹರಿಸಿ, ಈ ಪುಸ್ತಕ ಪ್ರಕಟಣೆಗೆ ಸಾಹಿತ್ಯ ಪರಿಷತ್ ಅನುಮೋದಿಸಿದೆ ಅಂತಾ ಮಾಹಿತಿ ನೀಡಿದರು.

ಈ ಪುಸ್ತಕ ರಚನೆಗೆ ಪ್ರೇರಣೆ ನೀಡಿದ ಡಾ. ಸಾ. ಶಿ. ಮರುಳಯ್ಯ ಅವರಿಗೆ ನಾನು ಕೃತಜ್ಞ, ಅದೇ ರೀತಿ, ಈ ಪುಸ್ತಕ ಪ್ರಕಟಣೆಗೆ ಅನುಮತಿ ನೀಡಿದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯಕ್ಕೆ ನಾನು ಕೃತಜ್ಞ. ಈ ಪುಸ್ತಕ ಪ್ರಕಟಣೆಯ ಹೊಣೆ ಹೊತ್ತ ಕನ್ನಡ ಸಾಹಿತ್ಯ ಪರಿಷತ್ ಮತ್ತು ಅದರ ಅಧ್ಯಕ್ಷ ಶ್ರೀ ಎನ್. ಬಸವಾರಾಧ್ಯರಿಗೂ ನಾನು ಆಭಾರಿ. ಬಿ.ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ವಿಭಾಗದ ಮೇಲ್ವಿಚಾರಕರಾದ ಶ್ರೀ ಕೆ. ಶಿವರಾಮಯ್ಯ ಹಾಗೂ ಸಿಬ್ಬಂದಿ ವರ್ಗ ನಮಗೆ ನೆರವಾಗಿದೆ. ಇವರೆಲ್ಲರಿಗೂ ವಂದನೆಗಳು ಸಲ್ಲುತ್ತವೆ.

ಕಾನೂನು ಅಂಧಕಾರದಲ್ಲಿ ತೊಂದರೆಗೊಳಗಾಗುವ ಶ್ರೀಸಾಮಾನ್ಯನಿಗೆ ಈ ಪುಸ್ತಕ ಕಿಂಚತ್ ಸಹಾಯ ಮಾಡಿದರೂ ಸಾಕು, ನನ್ನ ಶ್ರಮ ಸಾರ್ಥಕ.

ಎಸ್. ಎಚ್. ಮಿಟ್ಟಲಕೋಡ

ಸಿವಿಲ್ ನ್ಯಾಯಾಧೀಶರು (ಹಿ. ಶ್ರೇಣಿ) ಹಾಗೂ

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು. ಕೊ.

ಪರಿವಿಡಿ

ಅಧ್ಯಾಯ - ಒಂದು

"ನ್ಯಾಯಾಲಯಕ್ಕೆ ದಾರಿ ಯಾವುದಯ್ಯಾ?"

: ಅಂದು :

ಒಂದು ದಿನ ನ್ಯಾಯಾಲಯದ ಅಮೀನ ಬಸಪ್ಪನ ಮನೆಗೆ ಬಂದು ಬಸಪ್ಪನನ್ನು ವಿಚಾರಿಸಲಾಗಿ, ಬಸಪ್ಪನೇ ಹೊರಗೆ ಬಂದು ವಿಷಯವೇನೆಂದು ಕೇಳಿದ. ಆಗ ಅಮೀನನು "ನಿಮ್ಮ ಮೇಲೆ ಒಂದು ಕೋರ್ಟಿನ ಸಮನು ಇದೆ" ಎಂದು ಹೇಳಿದಾಗ ಬಸಪ್ಪನ ಜಂಘಾಬಲ ಉಡುಗಿ ಹೋಯಿತು. ಬಸಪ್ಪನು ಮಲ್ಲಪ್ಪನಿಂದ ವಚನಪತ್ರದ (ಪ್ರಾಮಿಸರಿ ನೋಟ್) ಮೇಲೆ ಪಡೆದ ಸಾಲದ ಹಣದ ವಸೂಲಿಗಾಗಿ ಹಾಕಿದ ದಾವೆಯ ಸಮನು ಅದಾಗಿತ್ತು. ಸಾಲ ವಸೂಲಿಗೆ ದಾವಾ ಹಾಕಿದರೆ ಆತನನ್ನು 'ಜಗಳಗಂಟ' ಎನ್ನುವ ಮತ್ತು ಸಾಲ ವಸೂಲಿಯ ದಾವೆಯನ್ನು ಎದುರಿಸುವವನಿಗೆ ಅದು 'ಅವಮಾನಕರ' ಎನ್ನುವ ಕಾಲ ಅದಾಗಿತ್ತು. ನ್ಯಾಯಾಲಯದ ದಾರಿ ಅಂದು ಬಹಳ ಜನರಿಗೆ ಅಪರಿಚಿತವಾಗಿತ್ತು.

ಇಂದು

"ನ್ಯಾಯಾಲಯಕ್ಕೆ ದಾರಿ ಯಾವುದು? ನಾನು ಅಲ್ಲಿಗೆ ಹೋಗಿ ಪರಿಹಾರ ಪಡೆಯಬೇಕಾಗಿದೆ ಎಂದು ಬಹಳ ಜನ ನ್ಯಾಯಾಕಾಂಕ್ಷಿಗಳು ಇಂದು ಕೇಳುತ್ತಿರುವುದು ಎಲ್ಲರಿಗೂ ಇಂದು ನ್ಯಾಯಾಲಯವು ಸುಪರಿಚಿತವಾಗಿದೆ ಎಂಬುದನ್ನು ಸೂಚಿಸುತ್ತದೆ. ಸ್ವಾತಂತ್ರ್ಯಾನಂತರ ಹಲವಾರು ಸಾಮಾಜಿಕ ಸುಧಾರಣಾ ಕಾನೂನುಗಳು ರಚಿತ ಗೊಂಡಿದ್ದರಿಂದ ಜನರು ಒಂದಿಲ್ಲೊಂದು ರೀತಿಯಲ್ಲಿ ನ್ಯಾಯಾಲಯದ ಬಾಗಿಲನ್ನು ತಟ್ಟುವ ಸಂದರ್ಭಗಳು ಬರುತ್ತಲೇ ಇವೆ. ನಾಗರಿಕ - ನಾಗರಿಕರ ನಡುವೆ, ಸರಕಾರ ನಾಗರಿಕರ ನಡುವೆ, ನಾಗರಿಕರು - ಸ್ವಯಂ ಸಂಸ್ಥೆಗಳ ಮಧ್ಯೆ ಏಳುವ ಹಲವಾರು ಸಮಸ್ಯೆಗಳು ಇಂದು ಜನರನ್ನು ನ್ಯಾಯಾಲಯದತ್ತ ಪರಿಹಾರ ಹುಡುಕಿ ಹೋಗುವಂತೆ ಮಾಡುತ್ತಲಿವೆ.

ಯಾವುದೇ ಹಗರಣ ನಡೆಯಲಿ, ಯಾವುದೇ ಅಕ್ರಮ ನಡೆಯಲಿ, "ನ್ಯಾಯಾಂಗ ವಿಚಾರಣೆ ನಡೆಯಬೇಕು" ಎಂದು ಜನ ಒತ್ತಾಯಿಸುವುದು ನ್ಯಾಯಾಂಗ ವ್ಯವಸ್ಥೆಯಲ್ಲಿ

ಅವರಿಗಿರುವ ಬಲವಾದ ವಿಶ್ವಾಸವನ್ನು ಸೂಚಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಹಿತಾಸಕ್ತಿಯ ದಾವೆಗಳು ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯದಲ್ಲಿ ಮತ್ತು ವಿವಿಧ ಉಚ್ಚ ನ್ಯಾಯಾಲಯಗಳಲ್ಲಿ ದಾಖಲಾಗುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ಹಲವಾರು ಪ್ರಖ್ಯಾತ ಪ್ರಕರಣಗಳಲ್ಲಿನ ತೀರ್ಪುಗಳು ನ್ಯಾಯಾಂಗದ ಕ್ರಿಯಾಶೀಲತೆಯ ದ್ಯೋತಕವಾಗಿದೆ.

ಎಲ್ಲ ರಾಜ್ಯಗಳಲ್ಲಿಯೂ ಒಂದು ಉಚ್ಚ ನ್ಯಾಯಾಲಯ ಇರುತ್ತದೆ. ಈ ನ್ಯಾಯಾಲಯಕ್ಕೆ ಅಧೀನ ನ್ಯಾಯಾಲಯಗಳಿಂದ ಬರುವ ಮೇಲ್ಮನವಿ, ಪುನರೀಕ್ಷಣಾ ಅರ್ಜಿಗಳನ್ನು ವಿಚಾರಣೆ ಮಾಡುವ ಅಧಿಕಾರ ಇದೆ. ಭಾರತದ ಸಂವಿಧಾನದ ೨೨೬ನೆಯ ಅನುಚ್ಛೇದದನ್ವಯ ರಿಟ್ ಅರ್ಜಿಗಲನ್ನು ವಿಚಾರಣೆ ಮಾಡುವ ಅಧಿಕಾರ ಉಂಟು. ಸಾರ್ವಜನಿಕ ಹಿತಾಸಕ್ತಿಯ ದಾವೆಗಳನ್ನು ರಿಟ್ ಅರ್ಜಿಯ ಮೂಲಕವೇ ವಿಚಾರಣೆಗೆ ಸ್ವೀಕರಿಸಲಾಗುತ್ತದೆ. ರಾಜ್ಯದ ಎಲ್ಲ ಅಧೀನ ನ್ಯಾಯಾಲಯಗಳ ಮೇಲಿನ ಆಡಳಿತಾತ್ಮಕ ನಿಯಂತ್ರಣ ಕೂಡಾ ಈ ನ್ಯಾಯಾಲಯಕ್ಕೆ ಇರುತ್ತದೆ.

ಪ್ರತಿ ಉಚ್ಚ ನ್ಯಾಯಾಲಯಕ್ಕೆ ಒಬ್ಬ ಮುಖ್ಯ ನ್ಯಾಯಾಧೀಶರು ಇರುತ್ತಾರೆ ಮತ್ತು ನಿಗದಿತ ಸಂಖ್ಯೆಯ ಅನ್ಯ ನ್ಯಾಯಾಧೀಶರಿರುತ್ತಾರೆ. ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿರುವ ನ್ಯಾಯಾಧೀಶರ ಸಂಖ್ಯೆ ೪೦. ಇವರ ನಿವೃತ್ತಿ ವಯಸ್ಸು ೬೨ ವರ್ಷಗಳು.

ಜನರ ಮನೆ ಬಾಗಿಲಿಗೆ ನ್ಯಾಯವನ್ನು ಒದಗಿಸಬೇಕು ಎನ್ನುವ ಸರ್ಕಾರದ ನೀತಿಗನುಗುಣವಾಗಿ ಇಂದು ರಾಜ್ಯದ ಬಹುತೇಕ ಎಲ್ಲ ತಾಲ್ಲೂಕುಗಳಲ್ಲಿ ನ್ಯಾಯಾಲಯದ ಸ್ಥಾಪನೆ ಆಗಿದೆ. ಆಸ್ತಿಯ ತಕರಾರು, ಜಮೀನು ಗಡಿ ವಿವಾದ, ನೆರೆಹೊರೆಯವರ ಉಪದ್ರವ, ಬಡಿದಾಟ, ಕಳ್ಳತನ, ಕೊಲೆ, ದರೋಡೆ, ಅಪಘಾತ, ಹೀಗೆ ಹಲವಾರು ಘಟನೆಗಳು ಬಾಧಿತರನ್ನು ನ್ಯಾಯಾಲಯದ ಬಾಗಿಲಿನತ್ತ ಹೊರಳುವಂತೆ ಮಾಡುತ್ತವೆ. ಯಾರು ಯಾವ ನ್ಯಾಯಾಲಯಕ್ಕೆ ಹೋಗಬೇಕು ಎನ್ನುವುದನ್ನು ತಿಳಿಯದೆ ಪರದಾಡುವ ಪ್ರಸಂಗಗಳು ಹಲವಾರು. ನಮ್ಮ ನ್ಯಾಯಾಲಯಗಳ ರಚನೆ ಹೇಗಿದೆ ಎನ್ನುವುದನ್ನು ನೋಡೋಣ.

ನಮ್ಮ ನ್ಯಾಯಾಂಗ ವ್ಯವಸ್ಥೆ ; ನ್ಯಾಯಾಲಯಗಳ ರಚನೆ

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಮ್ಮಲ್ಲಿ ಯಾವ ರೀತಿಯ ಸರ್ಕಾರ ಇರಬೇಕು ಎನ್ನುವ ಬಗ್ಗೆ ಪರಿಶೀಲಿಸಿ ಆ ಬಗ್ಗೆ ಒಂದು ಸಂವಿಧಾನವನ್ನು ರಚಿಸಲು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರನ್ನೊಳಗೊಂಡ ಹಲವಾರು ಪರಿಣಿತರ ಒಂದು ಘಟನಾ ಸಮಿತಿ ರಚನೆಯಾಗಿ ಅವರೆಲ್ಲರ ಹಲವಾರು ತಿಂಗಳುಗಳ ಪರಿಶ್ರಮದ ಫಲವಾಗಿ ನಮ್ಮ ಇಂದಿನ ಸಂವಿಧಾನ ರಚನೆಯಾಗಿ ೧೯೫೦ನೇ ಇಸವಿಯ ಜನವರಿ ೨೬ನೇ ದಿನಾಂಕದಿಂದ ಜಾರಿಗೆ ಬಂದಿದೆ.

ಈ ಸಂವಿಧಾನದಲ್ಲಿ ನಮ್ಮ ದೇಶಕ್ಕೆ ಪ್ರಜಾಪ್ರಭುತ್ವದ ಮಾದರಿಯ ಸರ್ಕಾರ ಇರಬೇಕು, ಈ ಸರ್ಕಾರದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎನ್ನುವ ಮೂರು ಅಂಗಗಳು ಇರಬೇಕೆಂದು ಸಂವಿಧಾನದಲ್ಲಿ ರೂಪಿಸಿದ್ದಾರೆ. ಈ ಪ್ರಸ್ತುತ ಅಧ್ಯಾಯದಲ್ಲಿ ನಮ್ಮ ನ್ಯಾಯಾಂಗದ ರಚನೆ ಹೇಗಿದೆ, ನ್ಯಾಯಾಲಯಗಳ ವ್ಯಾಪ್ತಿ ಏನು, ಎನ್ನುವುದನ್ನು ಶ್ರೀ ಸಾಮಾನ್ಯರಿಗೆ ತಿಳಿಸಿಕೊಡುವ ಒಂದು ಕಿರು ಪ್ರಯತ್ನವನ್ನು ಮಾಡಲಾಗಿದೆ. ಒಂದು ಸುಭದ್ರ ರಾಷ್ಟ್ರಕ್ಕೆ ಸ್ವತಂತ್ರ ನ್ಯಾಯಾಂಗ ಇರಬೇಕು ಮತ್ತು ನ್ಯಾಯಾಂಗದ ಮೇಲೆ ಕಾರ್ಯಾಂಗದ ಅಥವಾ ಶಾಸಕಾಂಗದ ಯಾವುದೇ ಹಿಡಿತ ಇರಬಾರದು ಎನ್ನುವುದು ಸಂವಿಧಾನದ ೫೦ನೇ ಅನುಚ್ಛೇದದಲ್ಲಿ ಸ್ಪಷ್ಟವಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ ನಮ್ಮಲ್ಲಿ ನ್ಯಾಯಾಲಯಗಳ ರಚನೆ ಹೇಗೆ ಆಗಿದೆ ಮತ್ತು ಅವುಗಳ ಅಧಿಕಾರ ವ್ಯಾಪ್ತಿ ಏನು ಎನ್ನುವುದನ್ನು ನೋಡೋಣ. ಸ್ಥೂಲವಾಗಿ ನ್ಯಾಯಾಲಯಗಳ ರಚನೆ ಎರಡು ವಿಧವಾಗಿದೆ. ಮೊದಲನೆಯದಾಗಿ ಸಿವಿಲ್ ಅಥವಾ ದಿವಾಣಿ ನ್ಯಾಯಾಲಯಗಳು, ಎರಡನೆಯದಾಗಿ ಅಪರಾಧಿಕ ಅಥವಾ ಕ್ರಿಮಿನಲ್ ನ್ಯಾಯಾಲಯಗಳು. ನಮ್ಮ ದೇಶದಲ್ಲಿ ನ್ಯಾಯಾಲಯಗಳು ಸ್ಥೂಲವಾಗಿ ಮೂರು ಹಂತದಲ್ಲಿವೆ. ಮೊದಲನೆಯದು, ನಮ್ಮ ದೇಶದ ರಾಜಧಾನಿ ದಿಲ್ಲಿಯಲ್ಲಿರುವ ಸರ್ವೋಚ್ಚ ನ್ಯಾಯಾಲಯ. ಎರಡನೆಯದು, ಪ್ರತಿಯೊಂದು ರಾಜ್ಯದಲ್ಲಿಯೂ ಒಂದೊಂದು ಉಚ್ಚ ನ್ಯಾಯಾಲಯ. ಮೂರನೆಯದು, ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿ ಮೂರು ಹಂತಗಳಲ್ಲಿ ಅಧೀನ ನ್ಯಾಯಾಲಯಗಳು ಇವೆ. ನಮ್ಮ ರಾಜ್ಯದಲ್ಲಿ ದಿವಾಣಿ ಮತ್ತು ಅಪರಾಧಿಕ ನ್ಯಾಯಾಲಯಗಳು ಮೂರು ಹಂತಗಳಲ್ಲಿ ರಚಿತವಾಗಿವೆ.

ದಿವಾಣಿ ನ್ಯಾಯಾಲಯಗಳ ರಚನೆ ಮತ್ತು ಅವುಗಳ ವಿಚಾರಣಾ ವ್ಯಾಪ್ತಿ

೧೯೬೪ನೇ ಕರ್ನಾಟಕ ದಿವಾಣಿ ನ್ಯಾಯಾಲಯಗಳ ಅಧಿನಿಯಮದ ಮೇರೆಗೆ ದಿವಾಣಿ ನ್ಯಾಯಾಲಯಗಳನ್ನು ರಚಿಸಲಾಗಿದೆ. ಈ ಕಾಯ್ದೆಯ ಕಲಂ ೩ರಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿ ಜಿಲ್ಲಾ ನ್ಯಾಯಾಲಯ, ಸಿವಿಲ್ ನ್ಯಾಯಾಲಯ ಮತ್ತು ಮುನ್ಸಿಫ್ ನ್ಯಾಯಾಲಯಗಳು ರಚಿತವಾಗಿವೆ. ಈಗ ಸಿವಿಲ್ ನ್ಯಾಯಾಲಯಗಳನ್ನು ಹಿರಿಯ ವಿಭಾಗದ ಸಿವಿಲ್ ನ್ಯಾಯಾಲಯಗಳೆಂದೂ, ಮುನ್ಸಿಫ್ ನ್ಯಾಯಾಲಯಗಳನ್ನು ಕಿರಿಯ ವಿಭಾಗದ ಸಿವಿಲ್ ನ್ಯಾಯಾಲಯಗಳೆಂದೂ ಕರೆಯಲಾಗುತ್ತಿದೆ.

(ಅ) ಮುನ್ಸಿಫ್ ನ್ಯಾಯಾಲಯಗಳ ವಿಚಾರಣಾ ವ್ಯಾಪ್ತಿ

ಈ ನ್ಯಾಯಾಲಯಗಳು ಮೂಲ ದಾವೆಗಳನ್ನು ವಿಚಾರಣೆ ಮಾಡುವ ಮೊದಲ ಹಂತದ ದಿವಾಣಿ ನ್ಯಾಯಾಲಯಗಳಾಗಿವೆ. ಈ ನ್ಯಾಯಾಲಯಗಳಿಗೆ ಯಾವುದೇ ಮೇಲ್ಮನವಿಯ ವಿಚಾರಣಾಧಿಕಾರವಿಲ್ಲ. ಈ ನ್ಯಾಯಾಲಯಗಳಿಗೆ ರೂ. ೫೦,೦೦೦-೦೦

ದವರೆಗಿನ ಮೌಲ್ಯದ ದಿವಾಣಿ ಸ್ವರೂಪದ ಪ್ರಕರಣಗಳನ್ನೂ ಮತ್ತು ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಯ ಪ್ರಕರಣಗಳನ್ನೂ ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ ಇದೆ. ಕೆಲವು ತಾಲ್ಲೂಕುಗಳನ್ನು ಹೊರತುಪಡಿಸಿದರೆ, ನಮ್ಮ ರಾಜ್ಯದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಮುನ್ಸಿಫ್ ನ್ಯಾಯಾಲಯಗಳು ರಚನೆಯಾಗಿವೆ.

(ಆ) ಸಿವಿಲ್ ನ್ಯಾಯಾಲಯಗಳ ವಿಚಾರಣಾ ವ್ಯಾಪ್ತಿ

ಈ ನ್ಯಾಯಾಲಯಗಳು ರೂ. ಐವತ್ತು ಸಾವಿರಕ್ಕಿಂತ ಅಧಿಕ ಮೊತ್ತದ ಮೂಲ ದಾವೆಗಳನ್ನು ವಿಚಾರಣೆ ಮಾಡುವ ಅಧಿಕಾರ ಹೊಂದಿವೆ. ಈ ನ್ಯಾಯಾಲಯಗಳಿಗೆ ಮುನ್ಸಿಫ್ ನ್ಯಾಯಾಲಯದ ತೀರ್ಪು ಮತ್ತು ಡಿಕ್ರಿಗಳ ಮೇಲ್ಮನವಿಗಳ ವಿಚಾರಣಾ ಅಧಿಕಾರವಿದೆ. ಈ ಸಿವಿಲ್ ನ್ಯಾಯಾಲಯಗಳು ಮೊದಲು ಕಂದಾಯ ಉಪ ವಿಭಾಗಗಳ ಮಟ್ಟದಲ್ಲಿ ಇದ್ದುವು. ಈಗ ಆಯಾ ಸ್ಥಳಗಳಲ್ಲಿ ಇರತಕ್ಕ ಕೆಲಸದ ಒತ್ತಡದಿಂದಾಗಿ ಬೇರೆ ತಾಲ್ಲೂಕುಗಳಲ್ಲಿಯೂ ಇಂತಹ ನ್ಯಾಯಾಲಯಗಳು ರಚಿತವಾಗಿವೆ.

(ಇ) ಜಿಲ್ಲಾ ನ್ಯಾಯಾಲಯಗಳ ವಿಚಾರಣಾ ವ್ಯಾಪ್ತಿ

ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಜಿಲ್ಲಾ ನ್ಯಾಯಾಲಯವು ರಚಿತವಾಗಿದೆ. ಇದು ಆ ಜಿಲ್ಲೆಯ ಪ್ರಧಾನ ಸಿವಿಲ್ ನ್ಯಾಯಾಲಯವಾಗಿದ್ದು ಮುನ್ಸಿಫ್ ಮತ್ತು ಸಿವಿಲ್ ನ್ಯಾಯಾಲಯಗಳ ಆಡಳಿತ ನಿಯಂತ್ರಣವನ್ನೂ ಹೊಂದಿದೆ. ಕೆಲವು ಪ್ರಕರಣಗಳ ಅಸಲು ದಾವೆಗಳನ್ನು ವಿಚಾರಣೆ ಮಾಡುವ ಅಧಿಕಾರವಿದೆ. ಸಿವಿಲ್ ನ್ಯಾಯಾಲಯಗಳಿಂದ ಬರುವ ರೂ. ಒಂದು ಲಕ್ಷದವರೆಗಿನ ದಿವಾಣಿ ಸ್ವರೂಪದ ತೀರ್ಪು ಮತ್ತು ಡಿಕ್ರಿಗಳ ಮೇಲ್ಮನವಿಯ ವಿಚಾರಣಾಧಿಕಾರವಿದೆ. ಇದಲ್ಲದೆ, ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆಯ ಪ್ರಕರಣಗಳಲ್ಲಿ ಮುನ್ಸಿಫ್ ನ್ಯಾಯಾಲಯವು ನೀಡುವ ತೀರ್ಪಿನ ವಿರುದ್ಧ ಸಲ್ಲಿಸಿದ ಪುನರೀಕ್ಷಣಾ ಅರ್ಜಿಯ ವಿಚಾರಣಾಧಿಕಾರವೂ ಇದೆ.

ಅಪರಾಧಿಕ ನ್ಯಾಯಾಲಯಗಳ ರಚನೆ ಮತ್ತು ವಿಚಾರಣಾ ವ್ಯಾಪ್ತಿ

ಅಪರಾಧಿಕ ನ್ಯಾಯಾಲಯಗಳೂ ಕೂಡ ಮೂರು ಹಂತಗಳಲ್ಲಿ ರಚಿತವಾಗಿವೆ. ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೬ರಲ್ಲಿ ಇದನ್ನು ಕಾಣಬಹುದಾಗಿದೆ.

ಮೊದಲನೇ ಹಂತದಲ್ಲಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಬರುತ್ತದೆ. ಇವುಗಳು ಸಾಮಾನ್ಯವಾಗಿ ಪ್ರತಿ ತಾಲ್ಲೂಕಿನಲ್ಲಿಯೂ ರಚಿತಗೊಂಡಿವೆ. ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಿದ ಭಾರತೀಯ ದಂಡ ಸಂಹಿತೆಯ ಎಲ್ಲಾ ಅಪರಾಧಗಳು ಮತ್ತು ಇತರ ಅಪರಾಧಿಕ ಕಾನೂನಿನ ಅನ್ವಯದ ಪ್ರಕರಣಗಳು ಈ ನ್ಯಾಯಾಲಯಗಳ ವಿಚಾರಣಾ ವ್ಯಾಪ್ತಿಯಲ್ಲಿ ಬರುತ್ತವೆ. ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೨೯ರ ಪ್ರಕಾರ ಈ ನ್ಯಾಯಾಲಯವು ಗರಿಷ್ಠ ಮೂರು ವರ್ಷಗಳವರೆಗಿನ ಕಾರಾಗೃಹವಾಸವನ್ನು ಮತ್ತು ರೂ. ಐದು ಸಾವಿರದ ವರೆಗಿನ ದಂಡವನ್ನು ವಿಧಿಸುವ ಅಧಿಕಾರವನ್ನು ಹೊಂದಿದೆ.

ಎರಡನೇ ಹಂತದಲ್ಲಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯವು ರಚಿತವಾಗಿದೆ. ಈ ನ್ಯಾಯಾಲಯದವು ಪ್ರತಿ ಜಿಲ್ಲಾ ಕೇಂದ್ರದಲ್ಲಿ ಮತ್ತು ಎಲ್ಲಾ ಸಿವಿಲ್ ನ್ಯಾಯಾಲಯಗಳ ವ್ಯಾಪ್ತಿಯಲ್ಲಿ ರಚಿತವಾಗಿವೆ. ಈ ನ್ಯಾಯಾಲಯಗಳೂ ಕೂಡ ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಿದ ಭಾರತೀಯ ದಂಡ ಸಂಹಿತೆಯ ಎಲ್ಲ ಪ್ರಕರಣಗಳನ್ನೂ ಮತ್ತು ಇತರ ಅಪರಾಧಿಕ ಪ್ರಕರಣಗಳನ್ನೂ ವಿಚಾರಣೆ ಮಾಡುವ ಅಧಿಕಾರ ಹೊಂದಿದೆ. ಈ ನ್ಯಾಯಾಲಯಗಳು ಗರಿಷ್ಠ ಏಳು ವರ್ಷಗಳವರೆಗಿನ ಕಾರಾಗೃಹವಾಸವನ್ನೂ ಮತ್ತು ಯಾವುದೇ ಮೊತ್ತದ ದಂಡವನ್ನೂ ವಿಧಿಸುವ ಅಧಿಕಾರವನ್ನು ಹೊಂದಿದೆ. ಈ ನ್ಯಾಯಾಲಯಗಳಿಗೆ ಅದರ ಅಧೀನದಲ್ಲಿರುವ ಎಲ್ಲಾ ಪ್ರಥಮ ದರ್ಜೆ ದಂಡಾಧಿಕಾರಿಗಳ ನ್ಯಾಯಾಲಯಗಳ ಮೇಲೆ ಉಸ್ತುವಾರಿ ಅಧಿಕಾರ ಇರುತ್ತದೆ.

ಮೂರನೆಯ ಹಂತದಲ್ಲಿ ಸತ್ರ ನ್ಯಾಯಾಲಯಗಳು ಬರುತ್ತವೆ. ಈ ನ್ಯಾಯಾಲಯಗಳು ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಿದ ಭಾರತೀಯ ದಂಡ ಸಂಹಿತೆಯ ಎಲ್ಲಾ ಪ್ರಕರಣಗಳನ್ನು ಮತ್ತು ಇತರೆ ಅಪರಾಧಿಕ ಕಾನೂನಿನಲ್ಲಿ ನಿಗದಿಪಡಿಸಿದ ಎಲ್ಲಾ ಪ್ರಕರಣಗಳನ್ನು ವಿಚಾರಣೆ ಮಾಡಬಹುದಾಗಿದೆ. ಈ ನ್ಯಾಯಾಲಯವು ಮರಣ ದಂಡನೆ ಮತ್ತು ಜೀವಾವಧಿ ಶಿಕ್ಷೆಯನ್ನು ಮತ್ತು ಯಾವುದೇ ಮೊತ್ತದ ದಂಡವನ್ನು ವಿಧಿಸಬಹುದಾಗಿದೆ. ಕೊಲೆ, ದರೋಡೆ ಮತ್ತು ಮಾನಭಂಗಗಳಂತಹ ಪ್ರಕರಣಗಳನ್ನು ಈ ನ್ಯಾಯಾಲಯಗಳು ವಿಚಾರಣೆ ಮಾಡುತ್ತವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲೆ ನಡೆಯುವ ದೌರ್ಜನ್ಯದ ಕಾನೂನಿನ ಅನ್ವಯದ ಪ್ರಕರಣಗಳನ್ನು ಮತ್ತು ಮಾದಕ ದ್ರವ್ಯಗಳ ಕಾನೂನಿನಡಿಯ ಪ್ರಕರಣಗಳನ್ನು ವಿಚಾರಣೆ ಮಾಡುವ ವಿಶಿಷ್ಟ ಅಧಿಕಾರವನ್ನು ಈ ನ್ಯಾಯಾಲಯಗಳು ಹೊಂದಿವೆ. ಈ ನ್ಯಾಯಾಲಯಕ್ಕೆ ಸಂಬಂಧಪಟ್ಟ ಜಿಲ್ಲೆಯ ಎಲ್ಲಾ ಅಪರಾಧಿಕ ವಿಚಾರಣಾ ನ್ಯಾಯಾಲಯಗಳು ಅಧೀನವಾಗಿರುತ್ತವೆ.

ಬೆಂಗಳೂರು ಮಹಾನಗರದ ಮಟ್ಟಿಗೆ ಇರುವ ನ್ಯಾಯಾಲಯಗಳ ರಚನೆ

೧. ದಿವಾಣಿ ನ್ಯಾಯಾಲಯಗಳು : ನಮ್ಮ ರಾಜ್ಯದಲ್ಲಿ ಉಚ್ಚ ನ್ಯಾಯಾಲಯಕ್ಕೆ ಅಧೀನವಾಗಿ ಮೂರು ಹಂತದ ನ್ಯಾಯಾಲಯಗಳು ಇರುವುದನ್ನು ಈ ಮೇಲೆ ವಿವರಿಸಲಾಗಿದೆ. ಆದರೆ, ಬೆಂಗಳೂರು ಮಹಾನಗರದ ಮಟ್ಟಿಗೆ ನ್ಯಾಯಾಲಯಗಳ ರಚನೆ ಸ್ವಲ್ಪ ಭಿನ್ನವಾಗಿದೆ. ಬೆಂಗಳೂರು ನಗರ ಸಿವಿಲ್ ನ್ಯಾಯಾಲಯಗಳ ಕಾನೂನಿನನ್ವಯ ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯಗಳು ರಚನೆಯಾಗಿವೆ. ಇವುಗಳು ಜಿಲ್ಲಾ ನ್ಯಾಯಾಲಯದ ದರ್ಜೆಯದಾಗಿವೆ. ಇಲ್ಲಿ ದಿವಾಣಿ ವ್ಯಾಪ್ತಿಯನ್ನು ಹೊಂದಿದ ಮುನ್ಸಿಫರ ಮಟ್ಟದ ನ್ಯಾಯಾಲಯಗಳು ಇಲ್ಲ. ಬಾಡಿಗೆ ನಿಯಂತ್ರಣದ ಪ್ರಕರಣಗಳನ್ನು ಮತ್ತು ರೂ. ಇಪ್ಪತ್ತೈದು ಸಾವಿರಕ್ಕಿಂತ ಕಡಿಮೆ ಮೌಲ್ಯದ ಸಾದಾ ಹಣ ವಸೂಲಿ ಪ್ರಕರಣಗಳನ್ನು ಹೊರತುಪಡಿಸಿ, ದಿವಾಣಿ ಸ್ವರೂಪದ ಎಲ್ಲಾ ಪ್ರಕರಣಗಳನ್ನು ವಿಚಾರಣೆ ಮಾಡುವ ಅಧಿಕಾರವನ್ನು ಈ ನ್ಯಾಯಾಲಯಗಳು ಹೊಂದಿವೆ. ಈ ನ್ಯಾಯಾಲಯಗಳ

ತೀರ್ಪಿನ ವಿರುದ್ಧ ಮೇಲ್ಮನವಿ ಅಥವಾ ಪುನರೀಕ್ಷಣಾ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮಾತ್ರ ಸಲ್ಲಿಸಬಹುದಾಗಿದೆ.

೨. ಲಘು ವ್ಯಾಜ್ಯಗಳ ನ್ಯಾಯಾಲಯ : ಬೆಂಗಳೂರು ಮಹಾನಗರದ ವ್ಯಾಪ್ತಿಯಲ್ಲಿ ಮುನ್ಸಿಫ್ ನ್ಯಾಯಾಲಯದ ಬದಲು ಲಘು ವ್ಯಾಜ್ಯಗಳ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆ. ಇವುಗಳು ಬಾಡಿಗೆ ನಿಯಂತ್ರಣ ಕಾಯ್ದೆಯ ಪ್ರಕರಣಗಳು ಮತ್ತು ರೂ. ಇಪ್ಪತ್ತೈದು ಸಾವಿರಕ್ಕಿಂತ ಕಡಿಮೆ ಮೌಲ್ಯದ ಸಾದಾ ಹಣ ವಸೂಲಿ ಪ್ರಕರಣಗಳನ್ನು ವಿಚಾರಣೆ ಮಾಡಬಹುದಾಗಿದೆ. ಈ ನ್ಯಾಯಾಲಯಗಳ ತೀರ್ಪುಗಳು ಮತ್ತು ಡಿಕ್ರಿಗಳ ವಿರುದ್ಧ ಪುನರೀಕ್ಷಣಾ ಅರ್ಜಿಯನ್ನು ಕೇವಲ ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ಮಾತ್ರ ಸಲ್ಲಿಸಬಹುದಾಗಿದೆ. ಈ ಲಘು ವ್ಯಾಜ್ಯಗಳ ಆಡಳಿತ ನಿಯಂತ್ರಣವನ್ನು ಲಘು ವ್ಯಾಜ್ಯಗಳ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಹೊಂದಿರುತ್ತಾರೆ.

೩. ಅಪರಾಧಿಕ ನ್ಯಾಯಾಲಯಗಳು : ಬೆಂಗಳೂರು ಮಹಾನಗರದ ಮಟ್ಟಿಗೆ ಮೂರು ಹಂತಗಳಲ್ಲಿ ಅಪರಾಧಿಕ ನ್ಯಾಯಾಲಯಗಳು ರಚನೆಯಾಗಿವೆ.

(ಅ) ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ

ಈ ನ್ಯಾಯಾಲಯದಲ್ಲಿ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ದರ್ಜೆಯ ನ್ಯಾಯಾಧೀಶರಿರುತ್ತಾರೆ. ಇಲ್ಲಿ ಮೋಟಾರು ವಾಹನ ಕಾಯ್ದೆಯನ್ವಯ ಬರುವ ಅಪರಾಧಗಳು ಮತ್ತು ಇತರ ಕಾಯ್ದೆಯನ್ವಯದ ಅಪರಾಧದ ಪ್ರಕರಣಗಳು ವಿಚಾರಣೆಗೆ ಬರುತ್ತವೆ.

(ಆ) ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ

ಈ ನ್ಯಾಯಾಲಯದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರ ದರ್ಜೆಯ ನ್ಯಾಯಾಧೀಶರು ಇರುತ್ತಾರೆ. ಇವರು ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಿದ ಭಾರತೀಯ ದಂಡ ಸಂಹಿತೆಯ ಎಲ್ಲ ಅಪರಾಧಗಳ ಪ್ರಕರಣಗಳನ್ನು ಮತ್ತು ಇತರ ಕಾನೂನಿನ್ವಯದ ಅಪರಾಧಿಕ ಪ್ರಕರಣಗಳನ್ನು ವಿಚಾರಣೆ ಮಾಡಬಹುದಾಗಿದೆ.

(ಇ) ಸತ್ರ ನ್ಯಾಯಾಲಯಗಳು

ಈ ನ್ಯಾಯಾಲಯಗಳಲ್ಲಿ ಜಿಲ್ಲಾ ನ್ಯಾಯಾಧೀಶರ ದರ್ಜೆಯವರು ಇರುತ್ತಾರೆ. ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಿದ ಭಾರತೀಯ ದಂಡ ಸಂಹಿತೆಯ ಎಲ್ಲ ಪ್ರಕರಣಗಳು ಮತ್ತು ಇತರ ಕಾನೂನಿನನ್ವಯದ ಪ್ರಕರಣಗಳನ್ನು ಇವರು ವಿಚಾರಣೆ ಮಾಡಬಹುದಾಗಿದೆ. ಮಹಾನಗರ ದಂಡಾಧಿಕಾರಿಗಳ ಮತ್ತು ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯಗಳು ಬೆಂಗಳೂರು ನಗರದ

ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರಿಗೆ ಅಧೀನವಾಗಿ ಕಾರ್ಯ ನಿರ್ವಹಿಸುತ್ತಿವೆ.

ಆರ್ಥಿಕ ಅಪರಾಧಗಳ ವಿಚಾರಣಾ ವಿಶೇಷ ನ್ಯಾಯಾಲಯ

ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ನಡೆಯುವ ಆರ್ಥಿಕ ಅಪರಾಧಗಳ ಬಗ್ಗೆ ವಿಚಾರಣೆ ನಡೆಸಲು ಪ್ರತ್ಯೇಕ ಮುಖ್ಯ ಮಹಾ ದಂಡಾಧಿಕಾರಿ ಮಟ್ಟದ ವಿಶೇಷ ನ್ಯಾಯಾಲಯವು ರಚಿತವಾಗಿದೆ. ಈ ನ್ಯಾಯಾಲಯದಲ್ಲಿ ತೆರಿಗೆ ವಂಚನೆ ಪ್ರಕರಣಗಳು, ರೈಲ್ವೆ ಆಸ್ತಿಗೆ ಸಂಬಂಧಿಸಿದ ಪ್ರಕರಣಗಳು, ಕೇಂದ್ರ ಅಬಕಾರಿ ಮತ್ತು ಸುಂಕದ ಅಪರಾಧಿಕ ಪ್ರಕರಣಗಳು, ಇತ್ಯಾದಿಗಳ ವಿಚಾರಣೆಯನ್ನು ನಡೆಸಲಾಗುತ್ತಿದೆ.

ಕೌಟುಂಬಿಕ ನ್ಯಾಯಾಲಯಗಳು

ಕರ್ನಾಟಕ ರಾಜ್ಯದಲ್ಲಿ ವಿಶೇಷ ಕೌಟುಂಬಿಕ ನ್ಯಾಯಾಲಯಗಳನ್ನು ರಚಿಸಲಾಗಿದೆ. ಬೆಂಗಳೂರು ನಗರವೂ ಸೇರಿದಂತೆ, ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಈ ನ್ಯಾಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಈ ನ್ಯಾಯಾಲಯಕ್ಕೆ ಜಿಲ್ಲಾ ನ್ಯಾಯಾಧೀಶರು ಮುಖ್ಯಸ್ಥರಾಗಿರುತ್ತಾರೆ. ಈ ನ್ಯಾಯಾಲಯಕ್ಕೆ ವೈವಾಹಿಕ ಪ್ರಕರಣಗಳಾದ ವಿವಾಹ ವಿಚ್ಛೇದನ, ವೈವಾಹಿಕ ಹಕ್ಕುಗಳ ಪುನರ್ ಸ್ಥಾಪನೆ, ಪೋಷಕರು ಮತ್ತು ಪಾಲಿತರ ಕಾನೂನು, ಜೀವನಾಂಶಕ್ಕೆ ಸಂಬಂಧಿಸಿದ ಪ್ರಕರಣಗಳು ಮತ್ತು ಇತರ ಕೌಟುಂಬಿಕ ವ್ಯಾಜ್ಯಗಳ ವಿಚಾರಣಾ ವ್ಯಾಪ್ತಿ ಇದೆ.

ಅಧ್ಯಾಯ - ಎರಡು

ನ್ಯಾಯ ನಿಮ್ಮದು : ನೆರವು ಸರ್ಕಾರದ್ದು

ನಮ್ಮ ನ್ಯಾಯಾಲಯಗಳನ್ನು ಕಾನೂನು ನ್ಯಾಯಾಲಯಗಳೆಂದು ಕರೆಯುತ್ತಾರೆ. ಕಾನೂನು ಎಂದ ತಕ್ಷಣ ಅದು ಕಬ್ಬಿಣದ ಕಡಲೆ ಎನ್ನುವ ಭಾವನೆ ಇದೆ. ಆದರೆ, ಕಾನೂನಿನ ಮೂಲ ಉದ್ದೇಶ ಶಾಂತಿಯನ್ನುಂಟು ಮಾಡುವುದಾಗಿದೆ. ಕಾನೂನು ಪಾಲನೆ ಮಾಡುವುದರಿಂದ ಶಾಂತಿ, ನೆಮ್ಮದಿಯು ಸಮಾಜದಲ್ಲಿ ನೆಲೆಸುತ್ತದೆ. ಎಲ್ಲರೂ ಕಾನೂನನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಆದರೆ, "ಕಾನೂನಿನ ಅಜ್ಞಾನ ಕ್ಷಮಾರ್ಹವಲ್ಲ" ಎಂಬುದಾಗಿ ಒಂದು ಲ್ಯಾಟಿನ್ ಉಕ್ತಿ ಇದೆ. ಹಾಗಾದರೆ "ಶ್ರೀಸಾಮಾನ್ಯ ನ್ಯಾಯಾಲಯದಲ್ಲಿ ಹೇಗೆ ಪರಿಹಾರ ಪಡೆಯಬಲ್ಲ?" ಎನ್ನುವ ಪ್ರಶ್ನೆ ಬರುತ್ತದೆ. ಇದಕ್ಕೆ ಉತ್ತರವೂ ಎಲ್ಲರಿಗೂ ತಿಳಿದಿದೆ. ನ್ಯಾಯಾಲಯಕ್ಕೆ ಬರುವ ಕಕ್ಷಿದಾರರ ಪರ ವಾದಿಸಲು ನ್ಯಾಯವಾದಿ ಅಥವಾ ವಕೀಲರಿರುತ್ತಾರೆ.

ವೈದ್ಯರ ಹತ್ತಿರ ಹೋಗಿ ಚಿಕಿತ್ಸೆ ಮಾಡಿಸಿಕೊಂಡು ಶುಲ್ಕವನ್ನು ಕೊಡುವಂತೆ ವಕೀಲರಿಗೂ ಕೂಡಾ ಕಕ್ಷಿದಾರರು ತಮ್ಮ ಪರವಾಗಿ ವಕಾಲತ್ತು ನಡೆಸಲು ಶುಲ್ಕವನ್ನು ಕೊಡಬೇಕಾಗುತ್ತದೆ. ಆದರೆ, ನಮ್ಮ ದೇಶದಲ್ಲಿ ಆರ್ಥಿಕವಾಗಿ ಎಲ್ಲರೂ ಪ್ರಬಲರಲ್ಲ. "ಅತ್ಯಂತ ಶ್ರೀಮಂತನಿಗೆ ಸಿಗುವ ನ್ಯಾಯವೇ ಕಡು ಬಡವನಿಗೂ ಸಿಗಬೇಕು" ಎನ್ನುವುದು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಕನಸಾಗಿತ್ತು. ಹಣವಂತರು ದುಡ್ಡು ಖರ್ಚು ಮಾಡಿ ತಮಗೆ ಬೇಕಾದ ಹೆಸರಾಂತ ನ್ಯಾಯವಾದಿಗಳನ್ನು ನೇಮಿಸಿಕೊಂಡು ತಮ್ಮ ಪ್ರಕರಣವನ್ನು ಬಲವಾಗಿ ಮಂಡಿಸಿ, ಅದನ್ನು ಗೆಲ್ಲಲೂಬಹುದು. ಆದರೆ, ಕಡು ಬಡವರು ತಮ್ಮ ಆರ್ಥಿಕ ದುರ್ಬಲತೆಯಿಂದಾಗಿ ವಕೀಲರನ್ನು ನೇಮಿಸಿಕೊಳ್ಳಲಾಗದೆ ತನ್ನ ಬಲಯುತವಾದ ಪ್ರಕರಣವನ್ನು ಸರಿಯಾಗಿ ಮಂಡಿಸಲಾಗದೆ ಸೋಲಬಹುದು. ಇಂತಹ ಸಂದರ್ಭಗಳು ಪ್ರಜಾಪ್ರಭುತ್ವದ ಸಮಾನತೆಯ ನೀತಿಗೆ ಚ್ಯುತಿ ತರುತ್ತವಲ್ಲವೆ?

ಈ ಸಮಸ್ಯೆಗೆ ಸೂಕ್ತ ಪರಿಹಾರವನ್ನು ಸರ್ಕಾರ ಮಾಡಿದೆ. ೧೯೭೭ರಲ್ಲಿ ನಮ್ಮ ದೇಶದ ಸಂವಿಧಾನಕ್ಕೆ ತಿದ್ದುಪಡಿ ಮಾಡಿ ೩೯ಎ ಅನುಚ್ಛೇದವನ್ನು ಸೇರಿಸಿ, ಎಲ್ಲಾ ನಾಗರಿಕರಿಗೆ ಸಮಾನತೆಯ ಆಧಾರದಿಂದ ನ್ಯಾಯಾಲಯಗಳಲ್ಲಿ ನ್ಯಾಯವನ್ನು ಪಡೆಯಲು

ಅನುಕೂಲವಾಗುವಂತೆ, ಬಡವರಿಗೆ ಉಚಿತ ಕಾನೂನು ನೆರವು ನೀಡುವ ವ್ಯವಸ್ಥೆಯನ್ನು ಮಾಡಿದೆ. ಇದರ ಪರಿಣಾಮವಾಗಿ, ಕಾನೂನು ನೆರವು ಮಂಡಳಿಗಳು ರಚಿತವಾಗಿವೆ.

ಕಾನೂನು ನೆರವು ಪ್ರಾಧಿಕಾರ

ಮಾನವನು ಸ್ವತಂತ್ರನಾಗಿ ಹುಟ್ಟಿದ್ದಾನೆ. ಆದರೆ, ನಂತರ ಅವನು ಸಾಮಾಜಿಕ ಹಾಗೂ ಕಾನೂನಿನ ಹಲವಾರು ಕಟ್ಟಳೆಗಳಲ್ಲಿ ಬಂಧಿತನಾಗುತ್ತಾನೆ. ಕಾನೂನಿನಿಂದ ಶಾಂತಿ ಮತ್ತು ಸುವ್ಯವಸ್ಥಿತ ಸಮಾಜದ ನಿರ್ಮಾಣವು ಆಗಬೇಕಾದರೆ ಅದನ್ನು ಪ್ರತಿಯೊಬ್ಬರೂ ಪರಿಪಾಲಿಸುವುದು ಅಗತ್ಯ. ತಿಳಿದೋ, ತಿಳಿಯದೆಯೋ ಕಾನೂನನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಪಾತ್ರರಾಗಬೇಕಾದಂತಹ ಸಂದರ್ಭ ಬರುತ್ತದೆ.

"ಮನುಷ್ಯನ ಜೀವನವು ಹುಟ್ಟು ಮತ್ತು ಸಾವು ಎಂಬ ದಡಗಳ ಮಧ್ಯೆ ಹರಿಯುವ ನದಿಯಂತೆ!" ಎಂದು ಹಿರಿಯರು ಉದ್ಗರಿಸಿದ್ದಾರೆ. ಕಾನೂನು ರೀತ್ಯಾ ಹೇಳುವುದಾದರೆ, "ಮನುಷ್ಯನ ಜೀವನವು ಜನನ ಮತ್ತು ಮರಣ ನೋಂದಣಿ ಕಾನೂನಿನ ಎರಡು ಪ್ರಮಾಣ ಪತ್ರಗಳ ನಡುವೆ ಇರುವ ಒಂದು ಅವಧಿ" ಎನ್ನಬಹುದು. ಒಬ್ಬ ವ್ಯಕ್ತಿ ಹುಟ್ಟಿದ ತಕ್ಷಣ ಜನನ ಮತ್ತು ಮರಣ ಕಾಯ್ದೆಯನ್ವಯ ಆತನ ಹೆಸರು ನೋಂದಾವಣೆಯಾಗುವ ಮೂಲಕ ಕಾನೂನಿನ ಚೌಕಟ್ಟನ್ನು ಪ್ರವೇಶಿಸಿ, ನಂತರ ಜೀವನದುದ್ದಕ್ಕೂ ತನ್ನ ಆಸ್ತಿ, ಹಕ್ಕು, ವಗೈರೆಗಳ ವಿಷಯದಲ್ಲಿ ಹಲವು ಕಾನೂನುಗಳ ಕಕ್ಷೆಯಲ್ಲಿ ಬರುತ್ತಾನೆ. ಆದರೆ, ಬಹಳಷ್ಟು ಜನ ನಿರಕ್ಷರಿಗಳಿರುವ ನಮ್ಮ ದೇಶದಲ್ಲಿ ಎಲ್ಲರೂ ಕಾನೂನನ್ನು ತಿಳಿದುಕೊಳ್ಳುವುದು ಸಾಧ್ಯವಿಲ್ಲ. ಅಷ್ಟೇ ಏಕೆ, ವಿದ್ಯಾವಂತರಿಗೂ ಕೂಡ ಕಾನೂನು ಗೊತ್ತಿದೆ ಎಂದು ಹೇಳಲಾಗದು. ಆದ್ದರಿಂದ, ಯಾರಿಗೇ ಆಗಲಿ, ಅವರ ಹಕ್ಕು ಆಸ್ತಿ ಮತ್ತು ಇತರೆ ವಿಷಯಗಳಲ್ಲಿ ಕಾನೂನಿನ ಸಹಾಯ, ಸಲಹೆ ನೀಡಲು ಒಬ್ಬ ಕಾನೂನು ತಜ್ಞರ ಅಗತ್ಯವಿರುತ್ತದೆ.

ಕೇಂದ್ರ ಸರ್ಕಾರವು ೧೯೮೭ರಲ್ಲಿ ಕಾನೂನು ಸೇವೆಗಳ ಪ್ರಾಧಿಕಾರದ ಕಾಯ್ದೆಯನ್ನು ರಚಿಸಿದೆ. ಈ ಕಾನೂನು ಕರ್ನಾಟಕದಲ್ಲಿ ೦೬-೦೩-೧೯೯೭ ರಿಂದ ಜಾರಿಗೆ ಬಂದಿದೆ. ಇದರ ಅನ್ವಯ ಕರ್ನಾಟಕ ಸರ್ಕಾರವು ನಿಯಮಾವಳಿಗಳನ್ನು ರಚಿಸಿ, ವಿವಿಧ ಹಂತದಲ್ಲಿ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸ್ಥಾಪಿಸಿದೆ. ಈವರೆಗೂ ಅಭಿಯೋಗ ಇಲಾಖೆಯ ಮೂಲಕ ಕಾರ್ಯ ನಿರ್ವಹಿಸುತ್ತಿದ್ದ ಕರ್ನಾಟಕ ಕಾನೂನು ನೆರವು ಮಂಡಳಿಯು ಈಗ ಪ್ರಾಧಿಕಾರದಲ್ಲಿ ವಿಲೀನಗೊಂಡಿದೆ.

ಈ ಕಾನೂನು ಪ್ರಾಧಿಕಾರದ ವಿವಿಧ ಹಂತಗಳನ್ನು ಈಗ ನೋಡೋಣ. ಈ ಕಾಯ್ದೆಯ ಕಲಂ ೩ರ ಅನ್ವಯ ಒಂದು ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಕೇಂದ್ರ ಪ್ರಾಧಿಕಾರಕ್ಕೆ ಭಾರತದ ಮುಖ್ಯ ನ್ಯಾಯಾಧೀಶರು ಮಹಾ ಪೋಷಕರಾಗಿರುತ್ತಾರೆ. ಸೇವಾನಿರತ ಅಥವಾ ನಿವೃತ್ತಿ ಹೊಂದಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಕಾರ್ಯ ನಿರ್ವಾಹಕ ಅಧ್ಯಕ್ಷರಾಗಿರುತ್ತಾರೆ. ಅಲ್ಲದೇ

ಒಬ್ಬ ಸದಸ್ಯ ಕಾರ್ಯದರ್ಶಿಯವರೂ ಮತ್ತು ವಿವಿಧ ಕ್ಷೇತ್ರಗಳ ಕೆಲವು ಪರಿಣಿತರು ಸದಸ್ಯರಾಗಿಯೂ ಇರುತ್ತಾರೆ.

ಇದೇ ಕಾಯ್ದೆಯ ಕಲಂ ೩ ಎ ಅನ್ವಯ ಕೇಂದ್ರ ಪ್ರಾಧಿಕಾರವು ಸರ್ವೋಚ್ಚ ನ್ಯಾಯಾಲಯದ ಕಾನೂನು ಸೇವೆಗಳ ಸಮಿತಿಯನ್ನು ರಚಿಸಿದೆ. ಈ ಸಮಿತಿಯಲ್ಲಿ ಸರ್ವೋಚ್ಚನ್ಯಾಯಾಲಯದ ಸೇವಾ ನಿರತ ನ್ಯಾಯಾಧೀಶರು ಅಧ್ಯಕ್ಷರಾಗಿರುತ್ತಾರೆ. ವಿವಿಧ ಕ್ಷೇತ್ರಗಳ ಕೆಲವು ಪರಿಣಿತರು ಸದಸ್ಯರಾಗಿರುತ್ತಾರೆ. ಒಬ್ಬ ಕಾರ್ಯದರ್ಶಿಯವರಿರುತ್ತಾರೆ.

ಈ ಕಾಯ್ದೆಯ ಕಲಂ ೬ರ ಪ್ರಕಾರ ರಾಜ್ಯ ಸೇವಾ ಪ್ರಾಧಿಕಾರ ರಚಿತಗೊಂಡಿದೆ. ಇದರಲ್ಲಿ ಸಂಬಂಧಪಟ್ಟ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮಹಾ ಪೋಷಕರಾಗಿಯೂ ಉಚ್ಚ ನ್ಯಾಯಾಲಯದ ಸೇವಾ ನಿರತ ಅಥವಾ ನಿವೃತ್ತ ನ್ಯಾಯಾಧೀಶರು ಕಾರ್ಯ ನಿರ್ವಾಹಕ ಅಧ್ಯಕ್ಷರಾಗಿಯೂ ಮತ್ತು ಒಬ್ಬ ಜಿಲ್ಲಾ ನ್ಯಾಯಾಧೀಶರ ದರ್ಜೆಯವರು ಸದಸ್ಯ ಕಾರ್ಯದರ್ಶಿಯಾಗಿಯೂ ಇರುತ್ತಾರೆ. ಇವರ ಜೊತೆ ಕೆಲವು ಸದಸ್ಯರನ್ನು ಮುಖ್ಯ ನ್ಯಾಯಾಧೀಶರು ನೇಮಿಸುತ್ತಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ

ಈ ಕಾಯ್ದೆಯ ಕಲಂ ೯ರ ಅನ್ವಯ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ರಚಿತಗೊಂಡು ಇದಕ್ಕೆ ಸಂಬಂಧಪಟ್ಟ ಜಿಲ್ಲಾ ನ್ಯಾಯಾಧೀಶರು ಅಧ್ಯಕ್ಷರಾಗಿರುತ್ತಾರೆ ; ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರ ದರ್ಜೆಯವರು ಕಾರ್ಯದರ್ಶಿಯವರಾಗಿರುತ್ತಾರೆ ಮತ್ತು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ನೇಮಿಸಿದ ಕೆಲವರು ಸದಸ್ಯರಾಗಿರುತ್ತಾರೆ.

ತಾಲ್ಲೂಕು ಕಾನೂನು ಸೇವಾ ಸಮಿತಿ

ಈ ಕಾಯ್ದೆಯ ಕಲಂ ೧೧ಎ ಪ್ರಕಾರ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರು ತಮ್ಮ ನ್ಯಾಯಾಲಯದ ಪ್ರಾದೇಶಿಕ ವ್ಯಾಪ್ತಿಗೆ ಸಂಬಂಧಪಟ್ಟ ಪದನಿಮಿತ್ತ ತಾಲ್ಲೂಕು ಕಾನೂನು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ನಂತರ ಕೆಲವರನ್ನು ಸದಸ್ಯರನ್ನಾಗಿ ಮುಖ್ಯ ನ್ಯಾಯಾಧೀಶರು ನೇಮಿಸುತ್ತಾರೆ.

ಈ ಕಾಯ್ದೆಯ ಕಲಂ ೧೨ರ ಪ್ರಕಾರ ಕಾನೂನು ನೆರವನ್ನು ಪಡೆಯಲು ಇವರುಗಳು ಅರ್ಹರು.

೧. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು,

೨. ಜೀತ ಪದ್ಧತಿ ಅಥವಾ ಮಾನವ ವ್ಯಾಪಾರದಲ್ಲಿ ಬಾಧಿತರಾದವರು,

೩. ಮಹಿಳೆ ಅಥವಾ ಮಕ್ಕಳು,

೪. ಮಾನಸಿಕ ಅಸ್ವಸ್ಥರು ಅಥವಾ ಇತರೇ ಕಾರಣಗಳಿಂದ ದುರ್ಬಲರಾಗಿರುವ ವ್ಯಕ್ತಿಗಳು.

೫. ಮತೀಯ ಗಲಭೆ, ಜಾತಿ ಆಧಾರದ ಅತ್ಯಾಚಾರ, ನೆರೆ, ಬರ, ಭೂಕಂಪ, ಔದ್ಯಮಿಕ ದುರಂತ- ಇವುಗಳಿಂದ ಬಾಧಿತರಾದವರು,

೬. ಔದ್ಯಮಿಕ ಕಾರ್ಮಿಕ,

೭. ನ್ಯಾಯಾಂಗ ಬಂಧನದಲ್ಲಿ ಅಥವಾ ಇತರೆ ಬಂಧನದಲ್ಲಿರತಕ್ಕ ವ್ಯಕ್ತಿಗಳು, ಹಾಗೂ

೮. ಯಾರ ವಾರ್ಷಿಕ ಆದಾಯವು ರೂ. ೬,೦೦೦-೦೦ಕ್ಕಿಂತ ಕಡಿಮೆ ಇರುತ್ತದೆಯೋ ಅಥವಾ ಸಂಬಂಧಪಟ್ಟ ರಾಜ್ಯ ಸರ್ಕಾರ ನಿಗದಿಪಡಿಸಿರುವ ಆದಾಯ ಮಿತಿಗೆ ಒಳಪಟ್ಟಿರುವವರು. ಕರ್ನಾಟಕ ಸರ್ಕಾರವು ವಾರ್ಷಿಕ ಆದಾಯದ ಮಿತಿಯನ್ನು ರೂ. ೧೮,೦೦೦-೦೦ಕ್ಕೆ ನಿಗದಿಪಡಿಸಿದೆ.

ಈವರೆಗೂ ಕರ್ನಾಟಕದಲ್ಲಿ ಅಭಿಯೋಜನ ಇಲಾಖೆಯ ಮೂಲಕ ಕರ್ನಾಟಕ ಕಾನೂನು ಮಂಡಳಿಯು ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿತ್ತು. ಈಗ ಕಾನೂನು ನೆರವಿನ ಕೆಲಸವನ್ನು ನ್ಯಾಯಾಂಗವೇ ವಹಿಸಿಕೊಂಡಿದೆ. ಇದರಿಂದ ಅರ್ಹ ವ್ಯಕ್ತಿಗಳು ಯಾವ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲು ಮಾಡಬಹುದೋ ಅಥವಾ ಯಾವ ನ್ಯಾಯಾಲಯದಲ್ಲಿ ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿದೆಯೋ ಅಲ್ಲಿ ಸಂಬಂಧಪಟ್ಟ ನ್ಯಾಯಾಧೀಶರ ಸಮಿತಿಯನ್ನು ಸಂಪರ್ಕಿಸಿ ಕಾನೂನು ನೆರವನ್ನು ಪಡೆಯಬಹುದಾಗಿದೆ.

ಅಧ್ಯಾಯ - ಮೂರು

ಜೀವನದ ಬಹು ಮುಖ್ಯ ಪ್ರಮಾಣ ಪತ್ರಗಳು

ಸತೀಶ ತನ್ನ ಆರು ವರ್ಷಗಳ ಮಗುವನ್ನು ಕರೆದುಕೊಂಡು ಪ್ರಥಮ ಬಾರಿಗೆ ಶಾಲೆಗೆ ಸೇರಿಸಲು ಬಂದ. ಅಲ್ಲಿ ಉಪಾಧ್ಯಾಯರು ಬಾಲಕನ ವಿವರಗಳನ್ನು ಕೇಳಿ, ನಂತರ ಅವನ ಜನನ ಪ್ರಮಾಣ ಪತ್ರವನ್ನು ತೋರಿಸಲು ಹೇಳಿದಾಗ ಸತೀಶ ಕಂಗಾಲಾದ. ಏಕೆಂದರೆ ಆತ ತನ್ನ ಮಗನ ಜನನ ದಿನಾಂಕವನ್ನು ಜನನ ಮರಣ ನೋಂದಣಾಧಿಕಾರಿಗಳ ಕಛೇರಿಯಲ್ಲಿ ದಾಖಲು ಮಾಡಿರಲಿಲ್ಲ. ಜನನ ಪ್ರಮಾಣ ಪತ್ರ ಇಲ್ಲದೇ ಶಾಲೆಗೆ ಪ್ರವೇಶವಿಲ್ಲ ಎಂದಾಗ ಆತ ನಿರಾಶನಾದ.

ರಂಗಪ್ಪನ ತಂದೆ ಸಾಕಷ್ಟು ಆಸ್ತಿಯನ್ನು ಬಿಟ್ಟು ಮರಣಿಸಿದ. ನಂತರ, ರಂಗಪ್ಪನು ತನ್ನ ತಂದೆಯ ಆಸ್ತಿಯನ್ನು ಪಡೆಯಲು ಗ್ರಾಮ ಲೆಕ್ಕಿಗರಲ್ಲಿ ಅರ್ಜಿಯನ್ನು ಕೊಟ್ಟ. "ನಿಮ್ಮ ತಂದೆಯ ಮರಣ ಪ್ರಮಾಣ ಪತ್ರವನ್ನು ಕೊಡಿ" ಎಂದು ಅವರು ಕೇಳಿದಾಗ ರಂಗಪ್ಪ ದಿಗಿಲುಗೊಂಡ. ಏಕೆಂದರೆ, ಆತ ತನ್ನ ತಂದೆಯ ಮರಣವನ್ನು ನೋಂದಾಯಿಸಿರಲಿಲ್ಲ.

ಜನನ ಮರಣಗಳ ನೋಂದಣಿ

೧೯೬೯ನೇ ಇಸವಿಯ ಜನನ ಮರಣಗಳ ನೋಂದಣಿ ಕಾನೂನಿನ ಅಧಿನಿಯಮದನ್ವಯ ಈ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜನನ, ಮರಣವನ್ನು ದಾಖಲಿಸುವುದು ಕಡ್ಡಾಯವಾಗಿದೆ. ಜನನ, ಮರಣವನ್ನು ದಾಖಲಿಸುವುದು ಹಲವಾರು ರೀತಿಯಿಂದ ಅನುಕೂಲವನ್ನು ಉಂಟು ಮಾಡುತ್ತದೆ. ಒಬ್ಬ ವ್ಯಕ್ತಿ ಯಾವ ತಾರೀಖಿನಲ್ಲಿ ಹುಟ್ಟಿದ ಮತ್ತು ಅವನ ವಯಸ್ಸು ಎಷ್ಟು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಒಬ್ಬ ವ್ಯಕ್ತಿ ಮೃತ್ಯು ಪತ್ರ ಬರೆದಿಟ್ಟು ಮರಣಿಸಿದರೆ ಆ ಮೃತ್ಯು ಪತ್ರದ ಪ್ರಕಾರ ಆಸ್ತಿ ಪಡೆಯಲು ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು ಅಗತ್ಯ. ಮಗುವನ್ನು ಶಾಲೆಗೆ ಸೇರಿಸಲು ಜನನ ಪ್ರಮಾಣ ಪತ್ರವು ಅಗತ್ಯ. ಒಂದು ಕುಟುಂಬದಲ್ಲಿ ಯಜಮಾನನು ಸತ್ತರೆ ಆತನ ವಾರಸುದಾರರು ಮೃತನ ಆಸ್ತಿಯನ್ನು ಪಡೆಯಲು ಕೂಡ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಬೇಕಾಗುತ್ತದೆ. ಇದರಿಂದ ಜನನ, ಮರಣದ ನೋಂದಣಿಯು ಒಂದು ಮಹತ್ವದ ನಾಗರಿಕ ಕರ್ತವ್ಯವಾಗಿದೆ.

ಜನನ, ಮರಣವನ್ನು ಎಷ್ಟು ಅವಧಿಯೊಳಗೆ ನೋಂದಾಯಿಸಬೇಕು, ನಿಗದಿತ ಅವಧಿಯಲ್ಲಿ ನೋಂದಾಯಿಸದೇ ಇದ್ದರೆ ಯಾವ ಕ್ರಮ ಕೈಗೊಳ್ಳಬೇಕು ಮತ್ತು ಜನನ, ಮರಣದ ನೋಂದಣಿಯನ್ನು ವರದಿ ಮಾಡುವ ಹೊಣೆ ಯಾರದು ಮತ್ತು ಯಾರಿಗೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯ.

೧೯೬೯ನೇ ಇಸವಿಯ ಕರ್ನಾಟಕ ಜನನ ಮರಣಗಳ ನೋಂದಣಿ ನಿಯಮಾವಳಿ ೫ರ ಪ್ರಕಾರ ಪುರಸಭೆ ಅಥವಾ ದಂಡು ಪ್ರದೇಶ ಅಥವಾ ಯಾವುದೇ ಯೋಜನಾ ಪ್ರದೇಶದಲ್ಲಿ ಅಥವಾ ಯಾವುದೇ ಪ್ರದೇಶದಲ್ಲಿ ಜನನ ಸಂಭವಿಸಿದಾಗ ಜನನದ ದಿನಾಂಕದಿಂದ ೧೪ ದಿನಗಳೊಳಗಾಗಿ ಮತ್ತು ಮರಣ ಸಂಭವಿಸಿದಾಗ ೭ ದಿನಗಳೊಳಗಾಗಿ ವರದಿ ಮಾಡಬೇಕು.

ಒಂದು ವೇಳೆ ಈ ಮೊದಲೇ ಹೇಳಿದ ಅವಧಿಯಲ್ಲಿ ಜನನ ಮತ್ತು ಮರಣಗಳನ್ನು ನೋಂದಾಯಿಸದೇ ಹೋದಲ್ಲಿ ೩೦ ದಿನಗಳ ಒಳಗೆ ಸಂಬಂಧಪಟ್ಟ ನೋಂದಣಾಧಿಕಾರಿಯವರಿಗೆ ಮಾಹಿತಿ ಕೊಟ್ಟು ಮತ್ತು ದಂಡ ಶುಲ್ಕವನ್ನು ಕೊಟ್ಟು ನೋಂದಾಯಿಸಬೇಕು. ೩೦ ದಿನಗಳ ಮೇಲ್ಪಟ್ಟು ಒಂದು ವರ್ಷದ ಒಳಗೆ ನೋಂದಣಿಯನ್ನು ತಹಸೀಲ್ದಾರ್ ಅಥವಾ ಆಯುಕ್ತರು ಅಥವಾ ಪುರಸಭೆಯ ಮುಖ್ಯಾಧಿಕಾರಿಗಳ ಪೂರ್ವಾನುಮತಿಯಿಂದ ಮಾಡಬೇಕು. ಒಂದು ವರ್ಷದೊಳಗೆ ಮಾಡಿಸದೇ ಇದ್ದಲ್ಲಿ ಸಂಬಂಧಪಟ್ಟವರು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಅವರ ಆದೇಶವನ್ನು ಪಡೆಯಬೇಕಾಗುತ್ತದೆ.

ರಾಜ್ಯ ಸರ್ಕಾರವು ಮಹಾ ನಗರ ಸಭೆ, ಪುರಸಭೆ, ಪಂಚಾಯಿತಿ ಮತ್ತು ಸ್ಥಳೀಯ ಪ್ರಾಧಿಕಾರಗಳಲ್ಲಿರತಕ್ಕಂಥ ಮುಖ್ಯಾಧಿಕಾರಿಗಳನ್ನು ಜನನ ಮತ್ತು ಮರಣಗಳ ನೋಂದಣಾಧಿಕಾರಿಯನ್ನಾಗಿ ನೇಮಿಸಿದ್ದಾರೆ. ಇದರಿಂದ ಜನನ, ಮರಣವನ್ನು ಸಂಬಂಧಪಟ್ಟ ಪ್ರದೇಶದ ನೋಂದಣಾಧಿಕಾರಿಗೆ ವರದಿ ಮಾಡಬೇಕು. ವರದಿ ಮಾಡುವ ಹೊಣೆಗಾರಿಕೆಯು ದಾದಿ, ಸೂಲಗಿತ್ತಿ, ಅಥವಾ ಇತರೆ ವೈದ್ಯಕೀಯ ಅಥವಾ ಆರೋಗ್ಯ ಸಹಾಯಕರು, ಶವಾಗಾರದ ಉಸ್ತುವಾರಿಯನ್ನು ಹೊಂದಿರುವ ವ್ಯಕ್ತಿ ಅಥವಾ ಸಂಬಂಧಪಟ್ಟ ವ್ಯಕ್ತಿಗಳು, ಇವರುಗಳ ಮೇಲಿರುತ್ತದೆ. ಅಂತಹ ಸಂದರ್ಭಗಳಲ್ಲಿ ಬಂಧು ಬಾಂಧವರೂ ಕೂಡ ವರದಿ ಮಾಡಬಹುದು.

ಅಧ್ಯಾಯ - ನಾಲ್ಕು

ಕಾನೂನಿನ ನ್ಯಾಯ ಮತ್ತು ನೈತಿಕ ನ್ಯಾಯ

ನ್ಯಾಯದಾನದ ವ್ಯವಸ್ಥೆ ಪುರಾತನ ಕಾಲದಿಂದಲೂ ಇದ್ದೇ ಇದೆ. ಮೊದಲು ರಾಜರ ಮೂಲಕ ನ್ಯಾಯದಾನ ನಡೆಯುತ್ತಿತ್ತು. ಆಗ ಈಗಿನಂತೆ ಯಾವುದೇ ಲಿಖಿತ ಕಾನೂನು ಕಟ್ಟಳೆಗಳು ಇರಲಿಲ್ಲ. ರಾಜರು ಉಭಯ ಪಕ್ಷಗಳ ಅಹವಾಲುಗಳನ್ನು ಕೇಳಿದ ನಂತರ ಆಸ್ಥಾನದಲ್ಲಿರುವ ಪಂಡಿತರ ಸಲಹೆಗಳನ್ನು ಪಡೆದು, ತಮ್ಮ ಜಾಣ್ಮೆ ಮತ್ತು ವಿವೇಚನೆಯಿಂದ ತೀರ್ಪನ್ನು ನೀಡುತ್ತಿದ್ದರು. ಆಗ ರಾಜನ ತೀರ್ಪೇ ಅಂತಿಮವಾಗಿರುತ್ತಿತ್ತು. ಅಂತಹ ತೀರ್ಪುಗಳು ಧರ್ಮ, ನೀತಿ, ಸತ್ಯ, ಇವುಗಳ ಆಧಾರದಿಂದ ಹೊರಬರುತ್ತಿದ್ದುವು.

ಈಗ ನ್ಯಾಯ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದೆ. ಹಲವಾರು ಕಾನೂನುಗಳು ರಚನೆಗೊಂಡಿರುವುದರಿಂದ ಕಾನೂನಿನನ್ವಯ ತೀರ್ಪನ್ನು ನೀಡಬೇಕಾಗಿದೆ. ಆದ್ದರಿಂದ ಈಗಿನ ನ್ಯಾಯಕ್ಕೆ 'ಕಾನೂನಿನ ನ್ಯಾಯ' ಎಂದು ಕರೆಯುತ್ತಾರೆ. ಇಲ್ಲಿ ನೈತಿಕತೆಯ ಆಧಾರದಿಂದ ತೀರ್ಪನ್ನು ಕೊಡುವಂತಿಲ್ಲ.

ಒಂದು ಅಪರಾಧವು ನೀತಿ ಮತ್ತು ಧರ್ಮದ ದೃಷ್ಟಿಯಲ್ಲಿ ಸದಾ ಕಾಲವೂ ಅಪರಾಧವೇ ಆಗಿರುತ್ತದೆ. ಆದರೆ, ಕಾನೂನಿನ ದೃಷ್ಟಿಯಲ್ಲಿ ಒಂದು ಅಪರಾಧವು ಒಂದು ಕಾಲದಲ್ಲಿ ಅಪರಾಧವೆನಿಸಿದ್ದರೆ, ಇನ್ನೊಂದು ಕಾಲದಲ್ಲಿ ಅದು ಅಪರಾಧವೆನಿಸದಿರಬಹುದು.

ಉದಾಹರಣೆಗೆ ಹೇಳುವುದಾದರೆ, ಮನುಷ್ಯ ಸಾರಾಯಿ ಕುಡಿಯುವುದು ಧರ್ಮ ಮತ್ತು ನೀತಿಯ ದೃಷ್ಟಿಯಲ್ಲಿ ಎಲ್ಲಾ ಕಾಲಗಳಲ್ಲಿಯೂ ಒಂದು ಅಪರಾಧವೆಂದು ಗಣಿಸಲ್ಪಟ್ಟಿದೆ. ಆದರೆ ಕಾನೂನಿನ ದೃಷ್ಟಿಯಲ್ಲಿ, ಪಾನ ಪ್ರತಿಬಂಧಕಾಜ್ಞೆ ಜಾರಿಯಲ್ಲಿದ್ದಾಗ ಮಾತ್ರ ಮದ್ಯಪಾನ ಮಾಡುವುದು ಅಪರಾಧವಾಗುತ್ತದೆ ; ಅಂತಹ ಕಾನೂನು ಜಾರಿಯಲ್ಲಿಲ್ಲದೇ ಇದ್ದಾಗ ಅದು ಅಪರಾಧವಾಗುವುದಿಲ್ಲ. ಆದರೆ, ಕುಡಿದು ಗಲಾಟೆ ಮಾಡಿದರೆ ಅದು ಅಪರಾಧವಾಗುತ್ತದೆ ಎನ್ನುವುದು ನೆನಪಿನಲ್ಲಿರಬೇಕು. ಇದರಿಂದ ನೈತಿಕ ನ್ಯಾಯ ಮತ್ತು ಕಾನೂನಿನ ನ್ಯಾಯದ ಮಧ್ಯೆ ಇರುವ ಅಂತರವನ್ನು ನಾವು ಕಾಣಬಹುದು.

ಧರ್ಮದ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯು ಇನ್ನೊಬ್ಬನ ಆಸ್ತಿ ಅಥವಾ ಹಕ್ಕು-

ಇವುಗಳನ್ನು ಕಸಿದುಕೊಳ್ಳಬಾರದು ಮತ್ತು ಅದರ ಮೇಲೆ ಅತಿಕ್ರಮಣ ಮಾಡಬಾರದು. ಆದರೆ, ಕಾನೂನಿನ ರಕ್ಷಣೆಯು ತನ್ನ ಆಸ್ತಿ ಮತ್ತು ಹಕ್ಕುಗಳ ಬಗ್ಗೆ ಜಾಗೃತವಾಗಿ ಸದಾ ಕಾಲ ಅವುಗಳನ್ನು ರಕ್ಷಿಸುವ ವ್ಯಕ್ತಿಗೆ ಮಾತ್ರ ಸಿಗುತ್ತದೆಯೇ ಹೊರತು ನಿರ್ಲಕ್ಷ್ಯ ತೋರುವವರಿಗೆ ಸಿಗುವುದಿಲ್ಲ.

ಹಿಂದೂ ಧರ್ಮದ ಪ್ರಕಾರ ಒಬ್ಬ ವ್ಯಕ್ತಿ ತಾನು ಸಾಲ ಕೊಟ್ಟ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಬಡ್ಡಿಯನ್ನು ವಸೂಲು ಮಾಡಲು ಅವಕಾಶವಿಲ್ಲ. ಇದಕ್ಕೆ 'ದಾಂ ದುಪ್ಪಟ್ಟು' ಎಂದು ಹೆಸರಿದೆ. ಆದರೆ, ಈಗ ಕಾನೂನಿನ ಪ್ರಕಾರ ಸಾಲ ಕೊಟ್ಟವರು ಅಸಲಿಗಿಂತ ಎಷ್ಟೋ ಪಟ್ಟು ಹೆಚ್ಚಿನ ಬಡ್ಡಿಯನ್ನು ವಸೂಲು ಮಾಡಬಹುದಾಗಿದೆ. ಹಿಂದೂ ಧರ್ಮದ ಪ್ರಕಾರ, ಕೊಟ್ಟ ಸಾಲವನ್ನು ವಸೂಲು ಮಾಡಲು ಯಾವುದೇ ಅವಧಿ ಪರಿಮಿತಿಯ ಬಂಧನ ಇಲ್ಲ. ಆದರೆ, ಈಗ ಅವಧಿ ಪರಿಮಿತಿ ಕಾನೂನಿನ ಪ್ರಕಾರ ಹಣ ವಸೂಲಿ ಮತ್ತು ಇತರೆ ಹಕ್ಕು ಬಾಧ್ಯತೆಗೆ ಸಂಬಂಧಿಸಿದ ದಾವಾ ಮತ್ತು ಅರ್ಜಿಗಳನ್ನು ಈ ಕಾನೂನಿನಲ್ಲಿ ಹೇಳಿದ ಅವಧಿಯಲ್ಲಿ ಹಾಕಬೇಕು. ಹಾಕದಿದ್ದರೆ, ಸಂಬಂಧಪಟ್ಟ ವಾದಿಯು ನ್ಯಾಯಾಲಯದಿಂದ ಯಾವುದೇ ಹಕ್ಕನ್ನು ಪಡೆಯಲು ಅರ್ಹನಾಗುವುದಿಲ್ಲ.

ಸಾಲ ಕೊಟ್ಟವರು ಕಾನೂನು ಪ್ರಕಾರ ಸಾಲ ವಸೂಲಿ ಮಾಡಲು ಹಣ ಕೊಟ್ಟ ಮೂರು ವರ್ಷಗಳೊಳಗೆ ಅಥವಾ ಹಣ ಕೊಡಲು ಸಾಲಗಾರ ಮಾಡಿಕೊಂಡ ಒಪ್ಪಂದದ ನಿಗದಿತ ಸಮಯದಿಂದ ಮೂರು ವರ್ಷಗಳ ಒಳಗೆ ದಾವೆಯನ್ನು ಹಾಕಬೇಕು. ಹಾಗೆ ಹಾಕದೇ ಇದ್ದರೆ ಸಾಲ ವಸೂಲಿಯನ್ನು ಕಾನೂನುರೀತ್ಯಾ ಮಾಡಲು ಅವಧಿ ಪರಿಮಿತಿ ಕಾಯ್ದೆಯ ಮೂಲಕ ಅಡ್ಡಿಯಾಗುತ್ತದೆ. ಇದು ಕಾನೂನು ನ್ಯಾಯ.

ಪರರ ಆಸ್ತಿಯನ್ನು ಅತಿಕ್ರಮಿಸಿ ಸ್ವಾಧೀನದಲ್ಲಿಟ್ಟುಕೊಂಡು ಅನುಭವಿಸುವುದು ನೈತಿಕವಾಗಿ ಅನುಚಿತವೆನಿಸಬಹುದು. ಆದರೆ, ಪರರ ಆಸ್ತಿಯನ್ನು ಹನ್ನೆರಡು ವರ್ಷಗಳಿಗಿಂತ ಹೆಚ್ಚು ಕಾಲ ಅದರ ಯಜಮಾನನ ಹಕ್ಕನ್ನು ನಿರಾಕರಿಸಿ ಅದನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಅನುಭವಿಸುವ ವ್ಯಕ್ತಿಗೆ ಕಾನೂನು ರೀತ್ಯಾ ಮಾಲೀಕತ್ವ ದೊರೆಯುತ್ತದೆ ಎನ್ನುವುದು ಸೋಜಿಗದ ಸಂಗತಿಯಾದರೂ ಸತ್ಯ. ಇಂತಹ ಸ್ವಾಧೀನಕ್ಕೆ ವಿರುದ್ಧ ಸ್ವಾಧೀನವೆಂದು ಕರೆಯುತ್ತಾರೆ. ಆದರೆ, ಈ ರೀತಿ ಮಾಲೀಕತ್ವ ಪಡೆಯಲು ಅಕ್ರಮ ಸ್ವಾಧೀನದಲ್ಲಿದ್ದಂತಹ ವ್ಯಕ್ತಿ ಕೆಲವು ಅಂಶಗಳನ್ನು ಕಡ್ಡಾಯವಾಗಿ ರುಜುವಾತುಪಡಿಸಬೇಕಾಗುತ್ತದೆ. ಅಂದರೆ, ಅಕ್ರಮ ಸ್ವಾಧೀನದಲ್ಲಿದ್ದವರು ೧೨ ವರ್ಷಗಳವರೆಗೆ ಅವ್ಯಾಹತವಾಗಿ ಅಸಲು ಮಾಲೀಕರಿಗೆ ಗೊತ್ತಿರುವಂತೆ ಅವರ ಹಕ್ಕನ್ನು ನಿರಾಕರಿಸಿ, ನಿರಾತಂಕವಾಗಿ, ಶಾಂತಿಯುತವಾಗಿ ಅಂತಹ ಸ್ಥಿರಾಸ್ತಿಯನ್ನನುಭವಿಸಿರಬೇಕು. ಆಗ ಮಾತ್ರ ವಿರುದ್ಧ ಸ್ವಾಧೀನದಿಂದ ಮಾಲೀಕತ್ವ ಉಂಟಾಗುತ್ತದೆ. ಈ ಮೇಲೆ ಹೇಳಿದ ಯಾವುದೇ ಒಂದು ಅಂಶವನ್ನು ರುಜುವಾತುಪಡಿಸಲು ವಿಫಲರಾದರೆ, ಇಂತಹ ಮಾಲೀಕತ್ವವನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಅರ್ಥ, ಅಸಲು

ಮಾಲೀಕರು ತಮ್ಮ ಆಸ್ತಿಯ ಬಗ್ಗೆ ಜಾಗೃತರಾಗಿ ಅವುಗಳ ರಕ್ಷಣೆಯನ್ನು ಮಾಡಬೇಕು ಮತ್ತು ಯಾರು ತಮ್ಮ ಹಕ್ಕು ಮತ್ತು ಆಸ್ತಿಗಳ ಬಗ್ಗೆ ಜಾಗೃತರಾಗಿರುತ್ತಾರೋ ಅವರ ಸಹಾಯಕ್ಕೆ ಕಾನೂನು ಬರುತ್ತದೆಯೇ ಹೊರತು ಯಾರು ನಿರ್ಲಕ್ಷಿಸುತ್ತಾರೋ ಅವರ ಸಹಾಯಕ್ಕೆ ಬರುವುದಿಲ್ಲ.

"೧೨ ವರ್ಷಗಳವರೆಗೆ ಅವ್ಯಾಹತವಾಗಿ ಸ್ಥಿರಾಸ್ತಿ ಸ್ವಾಧೀನ ಹೊಂದಿದರೆ ಮಾಲೀಕತ್ವ ಬರುತ್ತದೆ" ಎಂದು ಹೇಳಿದಾಗ ಹಲವು ಪ್ರಶ್ನೆಗಳು ಏಳಬಹುದು. ಒಬ್ಬ ವ್ಯಕ್ತಿಯ ಆಸ್ತಿಯನ್ನು ಅಡ ಹಾಕಿಸಿಕೊಂಡವರು ೧೨ ವರ್ಷಗಳಿಗೂ ಹೆಚ್ಚು ಕಾಲ ಆಸ್ತಿಯ ಸ್ವಾಧೀನದಲ್ಲಿದ್ದರೆ ಅವರು ವಿರುದ್ಧ ಸ್ವಾಧೀನದಿಂದ ಮಾಲೀಕರಾಗಬಹುದೇ? ಎಂದರೆ, ಖಂಡಿತವಾಗಿಯೂ ಇಲ್ಲ. ಏಕೆಂದರೆ ಅಸಲು ಮಾಲೀಕರ ಅನುಮತಿಯಿಂದ ಅವರು ಆಸ್ತಿಯ ಸ್ವಾಧೀನವನ್ನು ಪಡೆದಿರುತ್ತಾರೆ. ಆದ್ದರಿಂದ, ಅವರು ಎಷ್ಟೇ ವರ್ಷ ಮುಂದುವರೆದರೂ ಮಾಲೀಕರಾಗುವ ಸಾಧ್ಯತೆ ಇಲ್ಲ.

ಈ ಮೇಲಿನ ದೃಷ್ಟಾಂತಗಳನ್ನು ನೋಡಿದಾಗ ಅವಧಿ ಪರಿಮಿತಿಯ ಕಾನೂನಿನಿಂದ ತಮ್ಮ ಹಕ್ಕು ಮತ್ತು ಆಸ್ತಿಗಳ ಬಗ್ಗೆ ನಿರ್ಲಕ್ಷ್ಯ ತೋರಿದರೆ ಹೇಗೆ ಚ್ಯುತಿ ಬರುತ್ತದೆ ಎನ್ನುವುದು ತಿಳಿಯುತ್ತದೆ. ಇದರಿಂದ, ಹಲವಾರು ಕಾನೂನುಗಳಿಂದ ಬಂಧಿತರಾದ ನಾವು ನಮ್ಮ ಸಮಸ್ಯೆಗಳನ್ನು ಕಾನೂನಿನ ಚೌಕಟ್ಟಿನಲ್ಲಿಯೇ ಪರಿಹರಿಸಿಕೊಳ್ಳಲು, ಸಮಸ್ಯೆ ಗಮನಕ್ಕೆ ಬಂದ ತಕ್ಷಣ ಕಾನೂನು ತಜ್ಞರ ಸಹಾಯ ಪಡೆದು ಅವುಗಳಿಗೆ ಪರಿಹಾರ ಕಂಡುಕೊಳ್ಳುವುದು ಸೂಕ್ತ.

ಅಧ್ಯಾಯ - ಐದು

ಆಸ್ತಿ ಹಸ್ತಾಂತರದ ನೋಂದಣಿ ಮತ್ತು ಮುದ್ರಾಂಕ

ವೀರಭದ್ರಪ್ಪ ಒಂದು ಲಕ್ಷ ರೂಪಾಯಿ ತೆತ್ತು ಮನೆಯನ್ನು ಖರೀದಿಸಿ, "ತಲೆಯ ಮೇಲೊಂದು ಸೂರು ಬೇಕು" ಎನ್ನುವ ತನ್ನ ಬಹು ದಿನಗಳ ಆಸೆಯನ್ನು ಈಡೇರಿಸಿಕೊಂಡ. ಆದರೆ ಆ ಸಂತಸ ಬಹು ದಿನ ಉಳಿಯಲಿಲ್ಲ. ಏಕೆಂದರೆ, ಇವನಿಗೆ ಮನೆಯನ್ನು ಮಾರಿದ ಕಲ್ಲಪ್ಪನಿಗೆ ಆ ಮನೆಯ ಮೇಲೆ ಯಾವುದೇ ಹಕ್ಕು ಇರಲಿಲ್ಲ. ಬಹಳ ವರ್ಷಗಳ ಹಿಂದೆ ಮನೆಯನ್ನು ಕಲ್ಲಪ್ಪ ಖರೀದಿಸಿದಾಗ, ಆ ಬಗ್ಗೆ ಕ್ರಯ ಪತ್ರವನ್ನು ನೋಂದಾಯಿಸಿರಲಿಲ್ಲ. ಆ ಕಲ್ಲಪ್ಪನಿಗೆ ಮನೆ ಮಾರಿದ್ದ ಭೀಮಪ್ಪ ತೀರಿಕೊಂಡ ಬಳಿಕ, ಅವನ ಮಗ "ತಮ್ಮ ತಂದೆ ಕಲ್ಲಪ್ಪನಿಗೆ ಮನೆ ಮಾರಿಲ್ಲ, ಯಾವುದೇ ಕ್ರಯ ಪತ್ರ ಬರೆದುಕೊಟ್ಟಿಲ್ಲ, ಆದ್ದರಿಂದ, ಈಗ ಕಲ್ಲಪ್ಪನಿಂದ ಖರೀದಿಸಿದ ಮನೆಯ ಮೇಲೆ ವೀರಭದ್ರಪ್ಪನಿಗೆ ಯಾವ ಹಕ್ಕೂ ಇಲ್ಲ" ಎಂದು ಹೇಳಿ, ವೀರಭದ್ರಪ್ಪನಿಗೆ ನೋಟೀಸ್ ಕೊಡಿಸಿದ. ಆಗ, ವೀರಭದ್ರಪ್ಪ ತನ್ನ ಕ್ರಯ ಪತ್ರ ನೋಂದಾಯಿಸಲ್ಪಟ್ಟಿದೆ ಎಂದು ಪ್ರತಿವಾದ ಮಂಡಿಸಿದ. ಆದರೆ, ಹಿಂದೆ ಕಲ್ಲಪ್ಪನು ಮನೆಯನ್ನು ಖರೀದಿಸಿದಾಗ ಅವನಿಗೆ ಕ್ರಯಪತ್ರದ ಮೂಲಕ ಹಕ್ಕು ವರ್ಗಾವಣೆ ಆಗದ ಕಾರಣ, ವೀರಭದ್ರಪ್ಪನ ಕ್ರಯಪತ್ರ ನೋಂದಾಗಿದ್ದರೂ ಅದು ನಿರ್ಜೀವ ಕ್ರಯಪತ್ರವಾಗಿತ್ತು. ನೂರು ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಯಾವುದೇ ಸ್ಥಿರಾಸ್ತಿಯನ್ನು ಮಾರಬೇಕಾದರೆ ಅಥವಾ ಖರೀದಿಸಬೇಕಾದರೆ, ಅದು ನೋಂದಾದ ಕ್ರಯಪತ್ರದ ಮೂಲಕವೇ ಆಗಬೇಕು. ಕೇವಲ ಮುದ್ರಾಂಕ (ಸ್ಟ್ಯಾಂಪ್) ಕಾಗದದ ಮೇಲೆ ಕ್ರಯ ಪತ್ರ ಬರೆದ ಮಾತ್ರಕ್ಕೆ ಅದರಿಂದ ಯಾವುದೇ ಹಕ್ಕು ವರ್ಗಾವಣೆಯಾಗುವುದಿಲ್ಲ. ಇಂತಹ ಕ್ರಯಪತ್ರವನ್ನು ನ್ಯಾಯಾಲಯದಲ್ಲಿ ಸಾಕ್ಷ್ಯವನ್ನಾಗಿ ಸ್ವೀಕರಿಸುವುದಿಲ್ಲ. ರೂ. ನೂರಕ್ಕಿಂತ ಹೆಚ್ಚಿನ ಬೆಲೆಯ ಸ್ಥಿರಾಸ್ತಿಯ ಕ್ರಯಪತ್ರ ನೋಂದಾಗದೇ ಇದ್ದಾಗಲೂ ಅದನ್ನು 'ನಿರ್ಜೀವ ಕ್ರಯಪತ್ರ' ಎಂದೇ ಹೇಳಬೇಕಾಗುತ್ತದೆ. ಆದ್ದರಿಂದ, ಹಸ್ತಾಂತರ, ಮುದ್ರಾಂಕ ಮತ್ತು ನೋಂದಣಿಯ ಬಗ್ಗೆ ತಿಳಿಯುವಾ.

ಆಸ್ತಿಗಳ ಕ್ರಯ ವಿಕ್ರಯ ಸಾಮಾನ್ಯವಾಗಿ ನಡೆಯುವ ಕಾರ್ಯ. ಈ ಸಮಯದಲ್ಲಿ ಆಸ್ತಿಯ ಮೇಲಿನ ಹಕ್ಕುಗಳನ್ನು ವರ್ಗಾಯಿಸಲು ಕ್ರಯ ಪತ್ರಗಳನ್ನು ಮಾಡಬೇಕಾಗುತ್ತದೆ. ಆದರೆ, ಯಾವ ಬೆಲೆಯುಳ್ಳ ಆಸ್ತಿಯ ಕ್ರಯ ಪತ್ರವನ್ನು ಎಷ್ಟು ಮುಂದ್ರಾಂಕದ ಮೇಲೆ ಬರೆಯಬೇಕು ಮತ್ತು ಕ್ರಯಪತ್ರದ ನೋಂದಣಿ ಅಗತ್ಯವೇ ಎಂಬ ಬಗ್ಗೆ ತಿಳಿದುಕೊಳ್ಳುವುದು

ಅವಶ್ಯಕ. ಒಬ್ಬ ವ್ಯಕ್ತಿಯು ತನ್ನ ಸ್ವಯಾರ್ಜಿತ ಆಸ್ತಿಯನ್ನು ತನಗೆ ಬೇಕಾದಂತೆ ವಿಲೇ ಮಾಡಬಹುದು, ಅಂದರೆ, ಮಾರಬಹುದು, ದಾನ ಮಾಡಬಹುದು, ಅಥವಾ ಮೃತ್ಯು ಪತ್ರದ ಮೂಲಕ ಯಾರಿಗಾದರೂ ನೀಡಬಹುದು. ಒಟ್ಟು ಕುಟುಂಬದ ಆಸ್ತಿಯಾಗಿದ್ದರೆ, ಅದರ ಕರ್ತನು ಕುಟುಂಬದ ಅವಶ್ಯಕತೆಗೆ ಅನುಗುಣವಾಗಿ ಆಸ್ತಿಯನ್ನು ಮಾರಾಟ ಮಾಡಬಹುದು, ಆದರೆ, ಅದನ್ನು ದಾನ ಅಥವಾ ಮೃತ್ಯು ಪತ್ರದ ಮೂಲಕ ಬೇರೆಯವರಿಗೆ ನೀಡುವಂತಿಲ್ಲ.

ಈಗ ಒಂದು ಸ್ಥಿರಾಸ್ತಿಯನ್ನು ಮಾರಾಟ ಮಾಡಿದರೆ, ಅದರ ಬೆಲೆ ರೂ. ನೂರಕ್ಕಿಂತಲೂ ಹೆಚ್ಚಿದ್ದರೆ, ಅಂತಹ ಕ್ರಯ ಪತ್ರವನ್ನು ನೋಂದಾಯಿಸಬೇಕು ಎನ್ನುವುದು 'ಆಸ್ತಿ ಹಸ್ತಾಂತರ ಕಾಯ್ದೆಯ ಕಲಂ ೫೪ರಿಂದ ಸ್ಪಷ್ಟವಾಗುತ್ತದೆ. ಅದೇ ರೀತಿ, ಯಾವುದೇ ಸ್ಥಿರಾಸ್ತಿಯನ್ನು ಅಡ ಹಾಕಿದರೂ ಕೂಡ ಅದನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು. ಇಂತಹ ಸಂದರ್ಭಗಳಲ್ಲಿ ಅವುಗಳನ್ನು ಎಷ್ಟು ಮೊತ್ತದ ಮುದ್ರಾಂಕ ಕಾಗದದ ಮೇಲೆ ಬರೆಯಬೇಕು ಎನ್ನುವುದನ್ನು ಕೂಡ ಗಮನಿಸಬೇಕು. ಇದಕ್ಕಾಗಿ ಕರ್ನಾಟಕ ಮುದ್ರಾಂಕ ಕಾಯ್ದೆಯನ್ನು ಪರಿಶೀಲಿಸಬಹುದು. ಪ್ರತಿ ವರ್ಷ ದಸ್ತಾವೇಜುಗಳ ನೋಂದಣಿ ಶುಲ್ಕ ಮತ್ತು ಮುದ್ರಾಂಕದ ದರಗಳು ಬದಲಾವಣೆಯಾಗುವುದರಿಂದ ನೋಂದಣಿ ಮಾಡುವ ಕಾಲದಲ್ಲಿ ಜಾರಿಯಲ್ಲಿರುವ ದರವನ್ನು ಕೊಡಬೇಕಾಗುತ್ತದೆ.

ನೋಂದಣಿ ಕಾಯ್ದೆ ಕಲಂ ೧೭ರಲ್ಲಿ ದಾನ ಪತ್ರ ಮತ್ತು ರೂ. ನೂರಕ್ಕಿಂತ ಹೆಚ್ಚು ಮೌಲ್ಯವುಳ್ಳ ಇತರೆ ಹಕ್ಕು ಸೃಷ್ಟಿಸುವ ಅಥವಾ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಪತ್ರಗಳನ್ನು ಕಡ್ಡಾಯವಾಗಿ ನೋಂದಾಯಿಸಿರಬೇಕು.

ಈ ಕಾಯ್ದೆಯ ಕಲಂ ೧೭ರ ಅನ್ವಯ ಯಾವ ವ್ಯವಹಾರಗಳ ಬಗ್ಗೆ ದಸ್ತಾವೇಜು ನೋಂದಣಿ ಕಡ್ಡಾಯವಾಗಿದೆಯೋ ಅಂಥವುಗಳನ್ನು ನೋಂದಣಿ ಮಾಡಿಸದಿದ್ದಲ್ಲಿ ಅಂಥ ವ್ಯವಹಾರಗಳ ಮೂಲಕ ಯಾವುದೇ ಹಕ್ಕು ವರ್ಗಾವಣೆ ಆಗುವುದಿಲ್ಲ ಮತ್ತು ಅವುಗಳನ್ನು ನ್ಯಾಯಾಲಯದಲ್ಲಿ ಪುರಾವೆಯನ್ನಾಗಿ ಸ್ವೀಕರಿಸಲಾಗುವುದಿಲ್ಲ.

ಯಾವುದೇ ಒಂದು ದಸ್ತಾವೇಜನ್ನು ಕಡಿಮೆ ಮುದ್ರಾಂಕದ ಮೇಲೆ ತಯಾರಿಸಿದರೆ ಅದನ್ನೂ ಕೂಡ ಪುರಾವೆಯಲ್ಲಿ ಸ್ವೀಕರಿಸಲಾಗುವುದಿಲ್ಲ ಎನ್ನುವುದನ್ನು ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ ೩೪ರಲ್ಲಿ ಕಾಣಬಹುದಾಗಿದೆ. ಅಂತಹ ಸಂದರ್ಭಗಳಲ್ಲಿ ಕಡಿಮೆ ಇರುವ ಮುದ್ರಾಂಕದ ಒಂದು ಪಟ್ಟು ಶುಲ್ಕ ಮತ್ತು ಅದರ ಹತ್ತರಷ್ಟು ದಂಡವನ್ನು ನೀಡಿದರೆ ಆ ದಾಖಲೆಯನ್ನು ಪುರಾವೆಯಲ್ಲಿ ಸ್ವೀಕರಿಸಬಹುದಾಗಿದೆ.

ಯಾವುದೇ ಒಂದು ದಸ್ತಾವೇಜನ್ನು ಮುದ್ರಾಂಕದ ಮೇಲೆ ಬರೆಯಬೇಕಾದ ಸಂದರ್ಭ ಬಂದಾಗ ಮುದ್ರಾಂಕದ ಶುಲ್ಕವನ್ನು ಸಾಮಾನ್ಯವಾಗಿ ಯಾರು ಕೊಡಲು ಒಪ್ಪಿಕೊಳ್ಳುತ್ತಾರೋ ಅವರು ಕೊಡಬೇಕು, ಇಲ್ಲದೇ ಇದ್ದಲ್ಲಿ ಯಾರು ಅಂಥ ದಾಖಲೆಗಳನ್ನು ಬರೆದುಕೊಡುತ್ತಾರೋ, ಅಂದರೆ ಆಸ್ತಿಯನ್ನು ಮಾರುತ್ತಾರೋ, ಅವರು ಕೊಡಬೇಕಾಗುತ್ತದೆ.

ಅಧ್ಯಾಯ - ಆರು

ಮನಸ್ವೀ ಮನೆಗಂದಾಯ

ರವಿಶಂಕರ ನಗರದ ಬಡಾವಣೆಯೊಂದರಲ್ಲಿ ಒಂದು ಹೊಸ ಮನೆಯನ್ನು ಕಟ್ಟಿಸಿ, ಬಹಳ ವಿಜೃಂಭಣೆಯಿಂದ ಅದರ ಗೃಹಪ್ರವೇಶ ಸಮಾರಂಭವನ್ನು ನೆರವೇರಿಸಿದ. ಒಂದು ದಿನ ಪುರಸಭೆಯ ಜವಾನ ಬಂದು ಒಂದು ಬಿಲ್ಲನ್ನು ಕೊಟ್ಟು ಅವನ ಸಹಿ ಪಡೆದುಹೋದ. ಅದು, ಮನೆಯ ವಾರ್ಷಿಕ ತೆರಿಗೆಯನ್ನು ರೂ. ೫,೦೮೦-೦೦ ಎಂದು ನಿಗದಿ ಪಡಿಸಿ ಪುರಸಭೆಯವರು ನೀಡಿದ ಮನೆಗಂದಾಯದ ಬಿಲ್ಲಾಗಿತ್ತು. ರವಿಶಂಕರನ ಪ್ರಕಾರ ಈ ರೀತಿ ತೆರಿಗೆ ನಿಗದಿ ಪಡಿಸಿದ್ದು ಬೇಕಾಬಿಟ್ಟಿ ಕ್ರಮವಾಗಿತ್ತು. ಆದರೆ, ಈಗ ತೆರಿಗೆ ನಿರ್ಧರಣೆಯನ್ನು ಪುರಸಭೆಯವರು ಅಂತಿಮಗೊಳಿಸಿದ್ದ ಕಾರಣ, ಮತ್ತೆ ಅವರಿಗೆ ಅದನ್ನು ಬದಲಾಯಿಸುವ ಅಧಿಕಾರ ಇರಲಿಲ್ಲ.

ಅಂತಿಮ ಬಿಲ್ಲು ಬರುವ ಮೊದಲು ಪುರಸಭೆಯವರು ನೀಡಿದ್ದ ಉದ್ದೇಶಿತ ಕಂದಾಯದ ನೋಟೀಸಿಗೆ ರವಿಶಂಕರನು ತನ್ನ ತಕರಾರನ್ನು ಸಲ್ಲಿಸಿದ್ದ. ಆದರೆ, ಪುರಸಭೆಯ ತೆರಿಗೆ ನಿರ್ಧರಣಾಧಿಕಾರಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ ಅವನಿಚ್ಛೆಯಂತೆ ಕಂದಾಯ ನಿರ್ಧರಿಸಿದ್ದರಿಂದ, ರವಿಶಂಕರನಿಗೆ ಕೊಡಬೇಕಾಗಿದ್ದ ತೆರಿಗೆಗಿಂತ ಅಧಿಕ ಮೊತ್ತದ ತೆರಿಗೆಯನ್ನು ಪಾವತಿ ಮಾಡಬೇಕಾದ ಸ್ಥಿತಿ ಬಂದೊದಗಿತ್ತು.

ಇಂತಹ ಸಮಸ್ಯೆಗೆ ಪರಿಹಾರ ಇದೆ. ಈ ರೀತಿ ಕಂದಾಯ ನಿರ್ಧರಣೆಯ ವಿರುದ್ಧ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ, ಅದನ್ನು ರದ್ದುಪಡಿಸಿಕೊಳ್ಳಬಹುದು. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಈಗ ತಿಳಿಯುವಾ.

ಪುರಸಭೆಯಿಂದ ಆಸ್ತಿ ತೆರಿಗೆ ನಿರ್ಧರಣೆ

ಪ್ರತಿಯೊಬ್ಬ ನಾಗರಿಕನೂ ಒಂದಲ್ಲ ಒಂದು ರೀತಿಯಿಂದ ತೆರಿಗೆಯ ಹೊರೆಯನ್ನು ಹೊರಬೇಕಾಗಿದೆ. ಅದೇ ರೀತಿ, ಪಂಚಾಯಿತಿಯಲ್ಲಿ ಪುರ ಸಭೆ ಮತ್ತು ಮಹಾನಗರ ಸಭೆಯ ವ್ಯಾಪ್ತಿಯೊಳಗೆ ಇರುವ ಜನರು ತಮ್ಮ ಕಟ್ಟಡ ಮತ್ತು ಭೂಮಿಗಳಿಗೆ ತೆರಿಗೆಯನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಕೊಡಬೇಕಾಗುತ್ತದೆ. ೧೯೬೪ರ ಕರ್ನಾಟಕ ಪುರಸಭೆಗಳ

ಕಾಯ್ದೆಯಡಿಯಲ್ಲಿ ಯಾವ ರೀತಿ ತೆರಿಗೆ ನಿರ್ಧರಿಸಬೇಕು ಮತ್ತು ಆ ಸಮಯದಲ್ಲಿ ತೆರಿಗೆ ಕೊಡಬೇಕಾದ ಕಟ್ಟಡ ಅಥವಾ ಭೂ ಮಾಲೀಕರ ಹೊಣೆ ಏನು? ತೆರಿಗೆ ನಿರ್ಧರಣಾಧಿಕಾರಿಯ ಕರ್ತವ್ಯಗಳೇನು?- ಇವುಗಳನ್ನು ಈಗ ನೋಡೋಣ.

ಈ ಕಾಯ್ದೆಯ ಕಲಂ ೧೦೧ರ ಪ್ರಕಾರ ಸಂಬಂಧಪಟ್ಟ ಪುರಸಭೆಯ ವ್ಯಾಪ್ತಿಯಲ್ಲಿ ಇರುವಂತಹ ಎಲ್ಲಾ ಕಟ್ಟಡಗಳು, ನಿವೇಶನಗಳು ಮತ್ತು ಅದಕ್ಕೆ ಹೊಂದಿದ ಎಲ್ಲಾ ಪರಿಕರಗಳ ಮೇಲೆ ತೆರಿಗೆಯನ್ನು ನಿರ್ಧರಿಸಲಾಗುತ್ತದೆ. ಈ ತೆರಿಗೆಯನ್ನು ಸದರಿ ಆಸ್ತಿಗಳ ವಾರ್ಷಿಕ ಬಾಡಿಗೆ ದರದ ಆಧಾರದ ಮೇಲೆ ನಿರ್ಧರಿಸುತ್ತಾರೆ. ಇಂತಹ ಬಾಡಿಗೆ ದರದ ಮೇಲೆ ೧೬ ೨/೩ ರಷ್ಟು ಪ್ರತಿ ಶತ ಬಾಡಿಗೆಯನ್ನು ಕಟ್ಟಡಗಳ ದುರಸ್ತಿ ಮತ್ತು ಇತರೆ ಕಾರ್ಯಗಳಿಗೆಂದು ವಜಾ ಕೊಡಲಾಗುತ್ತದೆ. ಈ ಬಗ್ಗೆ ತೆರಿಗೆ ನಿರ್ಧರಿಸಲು ಸರ್ಕಾರವು ಒಬ್ಬ ಅಧಿಕಾರಿಯನ್ನು ನೇಮಿಸುತ್ತದೆ. ಇವರಿಗೆ ಸಂಬಂಧಪಟ್ಟ ಸಿಬ್ಬಂದಿ ಮತ್ತು ಇತರೆ ಸಹಾಯ ನೀಡಿ, ಅದರ ಖರ್ಚನ್ನು "ತೆರಿಗೆ ನಿರ್ಧರಣಾ ಖರ್ಚು" ಎಂದು ಗಣಿಸುತ್ತಾರೆ.

ತೆರಿಗೆ ನಿರ್ಧರಣಾಧಿಕಾರಿಯು ಪ್ರತಿಯೊಂದು ಆಸ್ತಿಯ ವಿಭಾಗ, ಬೀದಿ, ಸಂಖ್ಯೆ, ಮಾಲೀಕರ ಹೆಸರು, ವಾರ್ಷಿಕ ಬಾಡಿಗೆ ದರ ಮತ್ತು ಉದ್ದೇಶಿತ ತೆರಿಗೆ, ಇವುಗಳನ್ನೊಳಗೊಂಡ ಒಂದು ಪಟ್ಟಿಯನ್ನು ತಯಾರಿಸಿ ಸ್ಥಳ ಪರಿಶೀಲನೆ ಮಾಡುತ್ತಾರೆ.

ಈ ಮೇಲೆ ಹೇಳಿದ ಎಲ್ಲಾ ವಿವರಗಳ ತೆರಿಗೆ ಪಟ್ಟಿ ತಯಾರಾದ ಮೇಲೆ ಅದರ ಬಗ್ಗೆ ಸಾರ್ವಜನಿಕರ ನೋಟೀಸನ್ನು ಕೊಟ್ಟು ಅದರ ಒಂದು ಪ್ರತಿಯನ್ನು ನಿಗದಿತ ಸ್ಥಳದಲ್ಲಿ ಅಥವಾ ಸಂಬಂಧಪಟ್ಟ ಪುರಸಭೆಯ ಕಛೇರಿಯಲ್ಲಿ ಸಾರ್ವಜನಿಕರ ಪರಿಶೀಲನೆಗೆ ಇಡಲಾಗುತ್ತದೆ. ಈ ಪಟ್ಟಿಯನ್ನು ಪ್ರಕಟಿಸಿದ ನಂತರ, ತೆರಿಗೆಯನ್ನು ಪುನರ್ವಿಮರ್ಶಿಸುವ ಮೊದಲು ಕನಿಷ್ಠ ಮೂವತ್ತು ದಿನಗಳ ಕಾಲಾವಕಾಶವನ್ನು ಸಂಬಂಧಪಟ್ಟವರಿಗೆ ಕೊಡಬೇಕು. ಯಾವುದೇ ಆಸ್ತಿಯು ಪ್ರಥಮ ಬಾರಿಗೆ ತೆರಿಗೆಗೆ ಒಳಪಡುತ್ತಿದ್ದರೆ ಅದರ ಮಾಲೀಕರಿಗೆ ಅಥವಾ ಅದರ ಸ್ವಾಧೀನದಲ್ಲಿರುವವರಿಗೆ ನೋಟೀಸನ್ನು ಕೊಡಬೇಕು. ತೆರಿಗೆ ನಿರ್ಧರಣೆಗೆ ಯಾವುದೇ ತಕರಾರುಗಳಿದ್ದರೆ ಅವುಗಳನ್ನು ತೆರಿಗೆ ನಿರ್ಧರಣಾಧಿಕಾರಿಗೆ ಸಲ್ಲಿಸಬೇಕು. ಅವುಗಳ ಬಗ್ಗೆ ಅವರು ವಿಚಾರಣೆ ಮಾಡಿ, ಸೂಕ್ತ ಪರಿಹಾರವನ್ನು ನೀಡಬಹುದು. ಇಂಥ ತೆರಿಗೆಯಲ್ಲಿ ಬದಲಾವಣೆಯಾದರೆ ಅವುಗಳನ್ನು ತೆರಿಗೆ ಪಟ್ಟಿಯಲ್ಲಿ ನಮೂದಿಸಬೇಕಾಗುತ್ತದೆ. ಈ ರೀತಿ ತಯಾರಾದ ತೆರಿಗೆ ಪಟ್ಟಿಯು ನಾಲ್ಕು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ.

ಪ್ರಾಥಮಿಕವಾಗಿ ಪುರಸಭೆ ಆಸ್ತಿ ತೆರಿಗೆಯನ್ನು ಅದರ ಮಾಲೀಕರೇ ಕೊಡಬೇಕಾಗುತ್ತದೆ. ಒಂದು ವೇಳೆ ಆಸ್ತಿಯ ಮಾಲೀಕರಿಂದ ತೆರಿಗೆ ವಸೂಲಿ ಮಾಡಲು

ಸಾಧ್ಯವಾಗದಿದ್ದಲ್ಲಿ ಆಸ್ತಿಯ ಸ್ವಾಧೀನದಲ್ಲಿ ಇರುವವರಿಂದ ಅದನ್ನು ವಸೂಲು ಮಾಡಬಹುದಾಗಿದೆ.

ಆಸ್ತಿ ತೆರಿಗೆಯ ನಿರ್ಧರಣೆಯಲ್ಲಿ ತಮಗೆ ಅನ್ಯಾಯವಾಗಿದೆ ಎಂದು ಯಾವುದೇ ತೆರಿಗೆದಾರನಿಗೆ ಅನ್ನಿಸಿದರೆ, ಆತ ಪುರಸಭೆ ಕಾಯ್ದೆ ಕಲಂ ೧೫೦ ರ ಅನ್ವಯ ಸಕ್ಷಮ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಮೇಲ್ಮನವಿ (ಅಪೀಲ್) ಹಾಕಬಹುದು. ಇಂತಹ ಮೇಲ್ಮನವಿ ಹಾಕುವ ಮೊದಲು ಈ ಕೆಳಗಿನ ಪೂರ್ವ ಶರತ್ತುಗಳನ್ನು ಪೂರೈಸುವುದು ಅಗತ್ಯ :

೧. ಉದ್ದೇಶಿತ ತೆರಿಗೆಯ ನೋಟೀಸು ಜಾರಿಯಾದ ೩೦ ದಿನಗಳ ಒಳಗೆ ಮೇಲ್ಮನವಿ (ಅಪೀಲ್)ಯನ್ನು ಹಾಕಬೇಕು :

೨. ತೆರಿಗೆ ನಿರ್ಧರಣಾಧಿಕಾರಿಯು ಕಲಂ ೧೦೬ ಅಥವಾ ೧೦೭ರ ಅನ್ವಯ ಕೊಟ್ಟ ನೋಟೀಸಿಗೆ ತಕರಾರುಗಳನ್ನು ಹಾಕಿರಬೇಕು ; ಮತ್ತು

೩. ಒಪ್ಪಿಕೊಂಡಂತಹ ತೆರಿಗೆಯನ್ನು ಪುರಸಭೆಯ ಕಛೇರಿಯಲ್ಲಿ ಜಮಾ ಮಾಡಿರಬೇಕು.

ಇಂತಹ ಮೇಲ್ಮನವಿಯನ್ನು ದಂಡಾಧಿಕಾರಿಯವರು ವಿಚಾರಣೆ ಮಾಡಿ ನೀಡುವ ಆದೇಶವು ಪುನರೀಕ್ಷಣಾ ಅಧಿಕಾರಕ್ಕೆ ಒಳಪಟ್ಟು ಅಂತಿಮವಾಗುತ್ತದೆ. ಈ ಕಾನೂನಿನಲ್ಲಿ ಹೇಳಿದ ವಿಧಾನದ ಹೊರತು ತೆರಿಗೆ ಪಟ್ಟಿಯಲ್ಲಿ ನಮೂದಿಸಿರುವ ವಿಷಯಗಳ ಬಗ್ಗೆ ಬೇರೆ ಯಾವುದೇ ನ್ಯಾಯಾಲಯದ ಅಥವಾ ಪ್ರಾಧಿಕಾರದ ಮುಂದೆ ಪ್ರಶ್ನಿಸುವಂತಿಲ್ಲ.

ಅಧ್ಯಾಯ - ಏಳು

ಮೃತ ಮೃತ್ಯು ಪತ್ರ

ರಾಜೇಶ ಮತ್ತು ರಮೇಶ ಇಬ್ಬರೂ ಶ್ರೀಮಂತ ರಾಮಪ್ಪನ ಮಕ್ಕಳು. ರಾಮಪ್ಪ ತನ್ನ ಸ್ವಯಂ ದುಡಿಮೆಯಿಂದ ಅಪಾರ ಆಸ್ತಿಯನ್ನು ಸಂಪಾದಿಸಿಟ್ಟಿದ್ದ. ರಾಮಪ್ಪ ತನ್ನ ಆಸ್ತಿಯನ್ನು ತನಗೆ ಸೂಕ್ತ ಕಂಡಂತೆ ವಿಲೇ ಮಾಡಿ ಒಂದು ಮೃತ್ಯು ಪತ್ರವನ್ನು ಬರೆದಿಟ್ಟಿದ್ದ. ರಾಮಪ್ಪ ಸತ್ತ ಮೇಲೆ ಅವನ ವಕೀಲರು ಇಬ್ಬರು ಮಕ್ಕಳನ್ನೂ ಕರೆದು ರಾಮಪ್ಪನ ಮೃತ್ಯುಪತ್ರದ ವಿಷಯವನ್ನು ತಿಳಿಸಿದರು. ಅದರ ಪ್ರಕಾರ, ರಾಮಪ್ಪ ತನ್ನ ಎಲ್ಲ ಆಸ್ತಿಯನ್ನು ತನ್ನ ಕಿರಿಯ ಮಗ ರಮೇಶನಿಗೆ ಕೊಟ್ಟಿದ್ದ. ಹಿರಿಯವನಾದ ರಾಜೇಶ ಈ ಮೃತ್ಯು ಪತ್ರಕ್ಕೆ ತಕರಾರು ಮಾಡಿ ತನ್ನ ತಂದೆ ತನಗೆ ಒಂದು ಮೃತ್ಯು ಪತ್ರವನ್ನು ಬರೆದು ಆ ಮೂಲಕ ಎಲ್ಲ ಆಸ್ತಿಯನ್ನು ತನಗೆ ಕೊಟ್ಟಿದ್ದಾರೆಂದು ಪ್ರತಿವಾದಿಸಿದ.

ನಿಜವಾದ ಮೃತ್ಯು ಪತ್ರ ಯಾವುದೆಂಬುದನ್ನು ತಿಳಿಯುವ ಸಲುವಾಗಿ ಈ ವಿಷಯ ನ್ಯಾಯಾಲದ ಕಟ್ಟೆ ಹತ್ತಿತು. ನ್ಯಾಯಾಲಯವು ಎಲ್ಲ ಸಾಕ್ಷ್ಯವನ್ನು ಪರಿಶೀಲಿಸಿ, ರಮೇಶನ ಪರ ಇರುವ ಮೃತ್ಯು ಪತ್ರವು ನೈಜವಾದದ್ದು ಎಂದು ತೀರ್ಪು ನೀಡಿತು. ರಾಜೇಶ ತನ್ನ ತಂದೆಯ ರುಜುಗಳನ್ನು ಖಾಲಿ ಕಾಗದದ ಮೇಲೆ ಪಡೆದು ಸುಳ್ಳು ಮೃತ್ಯು ಪತ್ರವನ್ನು ಸೃಷ್ಟಿಸಿದ್ದಾನೆ ಎನ್ನುವ ವಿಷಯವೂ ನ್ಯಾಯಾಲಯದಲ್ಲಿ ಹೊರಬಿತ್ತು.

ಮೃತ್ಯು ಪತ್ರವನ್ನು ಹೇಗೆ ರಚಿಸಬೇಕು, ಅದಕ್ಕೆ ಯಾವ ಶರತ್ತುಗಳನ್ನು ಪೂರೈಸಬೇಕು, ಎನ್ನುವ ಬಗ್ಗೆ 'ಭಾರತೀಯ ಉತ್ತರಾಧಿಕಾರ ಅಧಿನಿಯಮ'ದ ಎರಡು ಮತ್ತು ಮೂರನೇ ಅಧ್ಯಾಯಗಳು ಮಾರ್ಗದರ್ಶನ ಮಾಡುತ್ತವೆ.

ಮೃತ್ಯು ಪತ್ರದ ರಚನೆ

ಒಬ್ಬ ವ್ಯಕ್ತಿಯು ತನ್ನ ಸ್ವಯಾರ್ಜಿತ ಆಸ್ತಿಯನ್ನು ಯಾವ ರೀತಿಯಲ್ಲಾದರೂ ವಿಲೇ ಮಾಡಲು ಕಾನೂನಿನಲ್ಲಿ ಅವಕಾಶ ಇದೆ. ದಾನ ಅಥವಾ ಕ್ರಯಪತ್ರದ ಮೂಲಕ ಆಸ್ತಿಯನ್ನು ವರ್ಗಾಯಿಸಿದರೆ ಅವುಗಳನ್ನು ಕಡ್ಡಾಯವಾಗಿ ನೋಂದಾಯಿಸಬೇಕಾಗುತ್ತದೆ. ಮೃತ್ಯು ಪತ್ರದ ಮೂಲಕವೂ ಕೂಡ ಆಸ್ತಿಯನ್ನು ಮತ್ತೊಬ್ಬರಿಗೆ ವರ್ಗಾಯಿಸಬಹುದು. ದಾನ ಅಥವಾ ಕ್ರಯ ಪತ್ರದ ಮೂಲಕ ಆಸ್ತಿಯನ್ನು ವರ್ಗಾಯಿಸಿದಾಗ, ಅಂತಹ ಪತ್ರವನ್ನು

ಬರೆದು ಕೊಟ್ಟವನ ಜೀವಿತ ಅವಧಿಯಲ್ಲಿಯೇ, ಆ ಆಸ್ತಿಯು ದಾನ ಪಡೆದವರ ಅಥವಾ ಕ್ರಯಕ್ಕೆ ಪಡೆದವರ ಸ್ವಾಧೀನಕ್ಕೆ ಹೋಗುತ್ತದೆ. ಆದರೆ ಮೃತ್ಯು ಪತ್ರದ ಮೂಲಕ ಆಸ್ತಿಯನ್ನು ಕೊಟ್ಟಾಗ ಮೃತ್ಯು ಪತ್ರದಲ್ಲಿ ಹೇಳಿದ ಬಳುವಳಿದಾರರಿಗೆ ಆಸ್ತಿಯು ಅಂತಹ ಪತ್ರವನ್ನು ಬರೆದುಕೊಟ್ಟವರು ಮೃತರಾದ ನಂತರ ಸಿಗುತ್ತದೆ.

ಈ ಮೃತ್ಯು ಪತ್ರವನ್ನು ಇಂತಹುದೇ ವಿಧಾನದಲ್ಲಿ ಹೀಗೆಯೇ ಬರೆಯಬೇಕು ಎನ್ನುವಂತಹ ಪ್ರಪತ್ರ ಇಲ್ಲ. ಅಲ್ಲದೇ, ಅದನ್ನು ಕಡ್ಡಾಯವಾಗಿ ನೋಂದಾಯಿಸಬೇಕಿಲ್ಲ. ಮೃತ್ಯು ಪತ್ರದ ಮೂಲಕ ಆಸ್ತಿಯನ್ನು ಮರಣಾ ನಂತರ ವರ್ಗಾಯಿಸುವ ವ್ಯಕ್ತಿ ಯಾವ ರೀತಿಯಲ್ಲಿ ಅದನ್ನು ರಚಿಸಬೇಕು, ಅದಕ್ಕೆ ಇರುವ ಇತಿ ಮಿತಿಗಳು ಏನು, ಎನ್ನುವುದನ್ನು ಈಗ ನೋಡೋಣ.

೧೯೨೫ನೇ ಇಸವಿಯ ಭಾರತೀಯ ಉತ್ತರಾಧಿಕಾರ ಕಾಯ್ದೆಯ ಎರಡು ಮತ್ತು ಮೂರನೇ ಅಧ್ಯಾಯಗಳಲ್ಲಿ ನಾಗರಿಕರು ರಚಿಸಬಹುದಾದ ಮೃತ್ಯು ಪತ್ರದ ಬಗ್ಗೆ ಉಪಬಂಧಗಳನ್ನು ಕೊಟ್ಟಿದ್ದಾರೆ. ಅಲ್ಪವಯಿಯಲ್ಲದ, ಸ್ವಸ್ಥ ಮನಸ್ಸಿನ ಪ್ರತಿಯೊಬ್ಬ ವ್ಯಕ್ತಿಯು ತನ್ನ ಆಸ್ತಿಯನ್ನು ಮೃತ್ಯು ಪತ್ರದ ಮೂಲಕ ವರ್ಗಾಯಿಸಬಹುದು. ವಿವಾಹಿತ ಮಹಿಳೆಯೂ ಕೂಡ ತನ್ನ ಸ್ವಯಾರ್ಜಿತ ಆಸ್ತಿಯನ್ನು ಈ ವಿಧಾನದಲ್ಲಿ ವಿಲೇ ಮಾಡಬಹುದು. ಮಾನಸಿಕವಾಗಿ ಸ್ವಸ್ಥರಾಗಿರುವ ಕಿವುಡ, ಮೂಗ, ಅಥವಾ ಅಂಧ ವ್ಯಕ್ತಿಯೂ ಕೂಡ ಮೃತ್ಯು ಪತ್ರವನ್ನು ಮಾಡಬಹುದು. ಸಾಮಾನ್ಯವಾಗಿ ಮಾನಸಿಕವಾಗಿ ಅಸ್ವಸ್ಥನಾಗಿರುವ ವ್ಯಕ್ತಿಯು ಮಧ್ಯಾವಧಿಯಲ್ಲಿ ಮಾನಸಿಕವಾಗಿ ಸ್ವಸ್ಥನಾದರೆ ಆ ಅವಧಿಯಲ್ಲಿ ಆತ ಮೃತ್ಯು ಪತ್ರವನ್ನು ಮಾಡಬಹುದು. ಮದ್ಯಪಾನದ ಮತ್ತಿನಲ್ಲಿ ಅಥವಾ ಇತರೆ ಯಾವುದೇ ಅನಾರೋಗ್ಯದಿಂದ ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು ತಿಳಿಯಲಾಗದ ಸ್ಥಿತಿಯಲ್ಲಿರುವ ವ್ಯಕ್ತಿಯು ಮೃತ್ಯು ಪತ್ರವನ್ನು ಮಾಡುವಂತಿಲ್ಲ, ಒಂದು ವೇಳೆ ಮಾಡಿದರೂ ಅದು ಊರ್ಜಿತವಾಗುವುದಿಲ್ಲ.

ಯಾವುದೇ ಮೃತ್ಯು ಪತ್ರವನ್ನು ಅಥವಾ ಮೃತ್ಯು ಪತ್ರದ ಭಾಗವನ್ನು ಬಲವಂತ, ಮೋಸ, ಅಥವಾ ಸ್ವಇಚ್ಛೆಯಿಂದ ಅಲ್ಲದ ಸಂದರ್ಭಗಳಲ್ಲಿ ರಚಿಸಿದರೆ, ಅದು ಅಸಿಂಧುವಾಗುತ್ತದೆ. ಇಂತಹ ಪತ್ರದ ರಚನೆಯನ್ನು ಮುಕ್ತ ಮನಸ್ಸಿನಿಂದ, ತಾನು ಮಾಡುತ್ತಿರುವ ಕೆಲಸದ ಸಂಪೂರ್ಣ ತಿಳುವಳಿಕೆಯಿಂದ ಅದರ ಕರ್ತೃವು ಮಾಡಬೇಕಾಗುತ್ತದೆ. ಹಾಗಿಲ್ಲದಿದ್ದರೆ, ಅದು ಕಾನೂನಿನ ದೃಷ್ಟಿಯಲ್ಲಿ ಶೂನ್ಯವಾಗುತ್ತದೆ.

ಸಾಮಾನ್ಯವಾಗಿ ಮೃತ್ಯು ಪತ್ರವನ್ನು ಹೀಗೆ ರಚಿಸಬಹುದು

ಬಿಳಿಯ ಕಾಗದದಲ್ಲಿ ಮೃತ್ಯು ಪತ್ರವನ್ನು ಮಾಡಬೇಕಾದ ವ್ಯಕ್ತಿಯು ತಾನು ಯಾರಿಗೆ ಯಾವ ಆಸ್ತಿಯನ್ನು ಕೊಡಬೇಕೆಂದು ಇಚ್ಛಿಸುತ್ತಾನೋ ಅದರ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ತಾನೇ ಬರೆಯಬಹುದು, ಅಥವಾ ಬೇರೆಯವರಿಗೆ ಹೇಳಿ ಬರೆಯಿಸಬಹುದು. ಅದರಲ್ಲಿ ಎಲ್ಲಾ ವಿವರಗಳನ್ನು ಬರೆದ ನಂತರ, ತಾನೇ ಬರೆದಿದ್ದರೆ ಓದಿ ನೋಡಿಕೊಂಡು,

ಅಥವಾ ಬೇರೆಯವರು ಬರೆದಿದ್ದರೆ ಅದನ್ನು ಸ್ವತಃ ಪರಿಶೀಲಿಸಿ, ಅಥವಾ ಓದಿಸಿ, ಕೇಳಿ, ಅದಕ್ಕೆ ತನ್ನ ರುಜುವನ್ನು ಅಥವಾ ಅನಕ್ಷರಸ್ಥರಾಗಿದ್ದರೆ ಹೆಬ್ಬೆಟ್ಟಿನ ಗುರುತನ್ನು ಹಾಕಬೇಕು. ಈ ಸಮಯದಲ್ಲಿ ಇಬ್ಬರು ಸಾಕ್ಷಿಗಳು ಕಡ್ಡಾಯವಾಗಿ ಹಾಜರಿರಬೇಕು.

ಮೃತ್ಯು ಪತ್ರಕ್ಕೆ ಅದರ ಕರ್ತೃ ಸಹಿ ಹಾಕಿದ್ದನ್ನು ಇಬ್ಬರು ಸಾಕ್ಷಿಗಳು ನೋಡಬೇಕು. ಇಬ್ಬರು ಸಾಕ್ಷಿಗಳು ರುಜು ಹಾಕುವುದನ್ನು ಆ ಪತ್ರದ ಕರ್ತೃ ಮತ್ತು ಇನ್ನೊಬ್ಬರು ಸಾಕ್ಷಿ ನೋಡಬೇಕು. ಈ ರೀತಿ ಬರೆದ ಪತ್ರವನ್ನು ಸುಭದ್ರವಾಗಿ, ಪತ್ರದ ಫಲವು ತನ್ನ ಮರಣಾನಂತರ ಬಳುವಳಿದಾರರಿಗೆ ಅದು ಸಿಗುವಂತೆ ವ್ಯವಸ್ಥೆ ಮಾಡಿ ಇಡಬೇಕು. ಅದನ್ನು ನೋಂದಾಯಿಸುವುದು ಕಡ್ಡಾಯವಿಲ್ಲದಿದ್ದರೂ, ಅದನ್ನು ನೋಂದಾಯಿಸಿದರೆ ಒಳ್ಳೆಯದು. ಏಕೆಂದರೆ, ಅಸಲು ಪತ್ರವು ಕಳೆದುಹೋದರೆ ಪ್ರಮಾಣಿತ ಪ್ರತಿಯನ್ನು ಉಪ ನೋಂದಣಾಧಿಕಾರಿಗಳ ಕಛೇರಿಯಿಂದ ಪಡೆಯಬಹುದು.

ಮೃತ್ಯು ಪತ್ರದ ಮೂಲಕ ಲಾಭ ಪಡೆಯುವವರು, ಆ ಪತ್ರದ ರಚನೆಯ ಕಾಲದಲ್ಲಿ ಯಾವುದೇ ಪಾತ್ರ ವಹಿಸದಿರುವುದು ಉತ್ತಮ. ಇಲ್ಲದಿದ್ದರೆ ಅನ್ಯಥಾ ಸಂದೇಹಕ್ಕೆ ಅವಕಾಶವಾಗುತ್ತದೆ.

ಮೃತ್ಯು ಪತ್ರದ ಕರ್ತೃವು ತನ್ನ ಜೀವಿತ ಕಾಲದಲ್ಲಿ ಯಾವುದೇ ಸಮಯದಲ್ಲಾದರೂ ಅದನ್ನು ರದ್ದುಪಡಿಸಬಹುದು, ಹೊಸ ಪತ್ರವನ್ನು ರಚಿಸಬಹುದು, ಅಥವಾ ಅದರಲ್ಲಿ ಬದಲಾವಣೆಗಳನ್ನು ಮಾಡಬಹುದು. ಮೃತ್ಯು ಪತ್ರದ ಮೂಲಕ ಆಸ್ತಿಯು ಬಳುವಳಿದಾರರಿಗೆ ಅದರ ಕರ್ತೃವಿನ ಮರಣಾ ನಂತರವೇ ಸಿಗುತ್ತದೆಯಾದ್ದರಿಂದ, ಕರ್ತೃವಿನ ಜೀವಿತ ಕಾಲದಲ್ಲಿ ಬಳುವಳಿದಾರರಿಗೆ ಆ ಆಸ್ತಿಯ ಮೇಲೆ ಯಾವುದೇ ಹಕ್ಕು ಉಂಟಾಗುವುದಿಲ್ಲ.

ಮೃತ್ಯು ಪತ್ರವನ್ನು ಅದರ ಕರ್ತೃವಿನ ಜೀವಿತಾವಧಿಯಲ್ಲಿ ನೋಂದಾಯಿಸದೇ ಇದ್ದರೆ, ಅವರ ಮರಣಾ ನಂತರ, ಅದನ್ನು ಜಾರಿಗೊಳಿಸುವ ಅಧಿಕಾರ ಇರುವವರು ಇಷ್ಟವಿದ್ದಲ್ಲಿ ಅದನ್ನು ನೋಂದಾಯಿಸಬಹುದು.

ಮೃತ್ಯು ಪತ್ರವನ್ನು ನೋಂದಾಯಿಸಿದರೆ, ಅದನ್ನು ಲಕೋಟೆಯಲ್ಲಿಟ್ಟು ಮೊಹರು ಬಂದ್ ಮಾಡಿ, ಅದನ್ನು ಉಪ ನೋಂದಣಾಧಿಕಾರಿಗಳ ಕಛೇರಿಯಲ್ಲಿ ಠೇವಣಿ ಇಡಬೇಕು. ಮೃತ್ಯು ಪತ್ರದ ಕರ್ತೃವು ತನ್ನ ಜೀವಿತ ಕಾಲದಲ್ಲಿ ಅದನ್ನು ಹಿಂತೆಗೆದುಕೊಳ್ಳಬಹುದು, ಅಥವಾ ಆತನ ಮರಣಾನಂತರ ಬಳುವಳಿದಾರರು ಅರ್ಜಿಯನ್ನು ಕೊಟ್ಟು ಆ ಪತ್ರವನ್ನು ಪಡೆಯಬಹುದು.

ಅಧ್ಯಾಯ - ಎಂಟು

ನಮ್ಮ ಜಿಲ್ಲಾ ತಾಲ್ಲೂಕು, ವಗೈರೆ ರಚನೆ

ಕಂದಾಯ ವಿಷಯವಾಗಿ ಜನರು ಹಲವಾರು ಬಾರಿ ಜಿಲ್ಲಾ ಸ್ಥಳಗಳಿಗೆ ಭೇಟಿ ನೀಡುವ ಸಂದರ್ಭ ಬರುತ್ತಿರುತ್ತದೆ. ಇದರಿಂದ ಜಿಲ್ಲಾ ಸ್ಥಳಗಳು ತಾಲ್ಲೂಕು ಸ್ಥಳಗಳಿಗೆ ಸಮೀಪದಲ್ಲಿದ್ದರೆ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದವರು ಹೆಚ್.ಟಿ. ಹುಂಡೇಕಾರ್ ಸಮಿತಿ ಮತ್ತು ಪಿ.ಸಿ. ಗದ್ದಿಗೌಡರ ಸಮಿತಿಯ ವರದಿಗಳ ಆಧಾರದ ಮೇಲೆ ಒಂಭತ್ತು ಹೊಸ ಜಿಲ್ಲೆಗಳನ್ನು ರೂಪಿಸಿದೆ. ಈ ವರ್ಷಾಂತ್ಯದೊಳಗೆ ಈ ಹೊಸ ಜಿಲ್ಲೆಗಳು ಅಸ್ತಿತ್ವಕ್ಕೆ ಬರಲಿವೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಮೂಲೆಯವರು ಬೆಳಗಾವಿಗೆ ಹೋಗಲೂ ಸುಮಾರು ೨೦೦ ಕಿ.ಮೀ. ಅಂತರ ಕ್ರಮಿಸಬೇಕು. ಅಂತೆಯೇ ಬಿಜಾಪುರ ಜಿಲ್ಲೆಯ ದಕ್ಷಿಣ ತುದಿಯವರು ಸುಮಾರು ೧೩೦ ಕಿ.ಮೀ. ಕ್ರಮಿಸಿ ಜಿಲ್ಲಾ ಸ್ಥಳವನ್ನು ತಲುಪಬೇಕು. ಈ ಸಂದರ್ಭಗಳಲ್ಲಿ ಆಗುತ್ತಿದ್ದ ಅನಾನುಕೂಲಗಳು ಹೊಸ ಜಿಲ್ಲೆಗಳ ರಚನೆಯಿಂದಾಗಿ ನೀಗಲಿವೆ.

ಆದ್ದರಿಂದ, ನಮ್ಮ ರಾಜ್ಯದಲ್ಲಿ ಈಗ ಇರುವ ವಿಭಾಗಗಳೆಷ್ಟು, ಅವುಗಳ ಅನುಕೂಲಗಳೇನು ಎಂಬುದನ್ನು ತಿಳಿಯುವುದು ಸೂಕ್ತವಾಗಿದೆ.

೧೯೬೪ರ ಕರ್ನಾಟಕ ಭೂ ಕಂದಾಯ ಕಾಯ್ದೆಯ ಪ್ರಕಾರ ರಾಜ್ಯ ಸರ್ಕಾರವು ಈ ರಾಜ್ಯದ ಭೂಮಿ ಮತ್ತು ಭೂ ಕಂದಾಯದ ಆಡಳಿತಕ್ಕೆ ಸಂಬಂಧಿಸಿದ ವಿಷಯದಲ್ಲಿ ಮುಖ್ಯ ನಿಯಂತ್ರಣಾಧಿಕಾರವನ್ನು ಹೊಂದಿರುತ್ತದೆ. ರಾಜ್ಯ ಸರ್ಕಾರವು ಆಡಳಿತದ ಅನುಕೂಲಕ್ಕಾಗಿ ವಿಭಾಗ, ಉಪವಿಭಾಗ, ಜಿಲ್ಲೆ, ತಾಲ್ಲೂಕು, ಕಂದಾಯ ವೃತ್ತ ಮತ್ತು ಗ್ರಾಮಗಳನ್ನಾಗಿ ರಾಜ್ಯವನ್ನು ವಿಭಾಗಿಸಿದೆ.

ಈಗ ನಮ್ಮ ರಾಜ್ಯದಲ್ಲಿ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ಎಂಬ ನಾಲ್ಕು ವಿಭಾಗಗಳಿವೆ. ಅಲ್ಲದೆ ಇಪ್ಪತ್ತು ಜಿಲ್ಲೆಗಳು ಮತ್ತು ಹೊಸದಾಗಿ ರಚಿತವಾದ ಏಳು ಜಿಲ್ಲೆಗಳು (ಇನ್ನೂ ನಿರ್ಧಾರವಾಗದ ಎರಡು ಜಿಲ್ಲೆಗಳನ್ನು ಹೊರತುಪಡಿಸಿ) ಇವೆ. ಒಟ್ಟು ೧೭೫ ತಾಲ್ಲೂಕುಗಳಿವೆ. ಪ್ರತಿ ತಾಲ್ಲೂಕಿನಲ್ಲಿ ಗ್ರಾಮಗಳು ಮತ್ತು ಹಲವು ಗ್ರಾಮಗಳು ಸೇರಿದ ಕಂದಾಯ ವೃತ್ತಗಳು ಇವೆ.

ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು

ತಹಸೀಲ್ದಾರರು, ಕ್ರಮವಾಗಿ ವಿಭಾಗ, ಜಿಲ್ಲೆ, ಉಪವಿಭಾಗ ಮತ್ತು ತಾಲ್ಲೂಕಿನ ಕಂದಾಯ ಮುಖ್ಯಸ್ಥರಾಗಿರುತ್ತಾರೆ.

ತಾಲ್ಲೂಕಿನಲ್ಲಿ ಕಂದಾಯ ಆಡಳಿತದ ಅನುಕೂಲಕ್ಕಾಗಿ ಕಂದಾಯ ನಿರೀಕ್ಷಕರನ್ನು ಮತ್ತು ಗ್ರಾಮ ಲೆಕ್ಕಿಗರನ್ನು ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಯವರ ಮತ್ತು ಸರ್ಕಾರದ ಸಾಮಾನ್ಯ ಆದೇಶಕ್ಕೊಳಪಟ್ಟು ನೇಮಿಸುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯೂ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ಸಂಪರ್ಕವನ್ನು ಮಾಡುವ ಸಂದರ್ಭ ಒಂದಲ್ಲ ಒಂದು ಕಾರಣದಿಂದ ಅನಿವಾರ್ಯವಾಗುತ್ತದೆ. ಜಮೀನಿನ ವಿಷಯಗಳಲ್ಲಿ ಮಾಲೀಕರು ತಮ್ಮ ಆಸ್ತಿಯ ತಕರಾರು, ತಂಟೆ, ಖಾತೆ ವರ್ಗಾವಣೆ, ವಗೈರೆಗಳಲ್ಲಿ ಈ ಅಧಿಕಾರಿಗಳನ್ನು ಸಂಪರ್ಕಿಸುವುದು ಅನಿವಾರ್ಯ.

ಸರ್ಕಾರವು ಕೃಷಿ ಜಮೀನಿನ ಕಂದಾಯವನ್ನು ನಿರ್ಧರಿಸಲು, ಪುನರ್ ವಿಮರ್ಶಿಸಲು ಅಧಿಕಾರವನ್ನು ಹೊಂದಿದೆ. ಒಮ್ಮೆ ನಿರ್ಧರಿಸಿದ ಕಂದಾಯವು ಮೂವತ್ತು ವರ್ಷಗಳವರೆಗೆ ಜಾರಿಯಲ್ಲಿರುತ್ತದೆ. ಈ ಮಧ್ಯೆ ಸರ್ಕಾರವು ಉಚಿತವೆನಿಸಿದರೆ ಕಂದಾಯವನ್ನು ಪುನರ್ ವಿಮರ್ಶಿಸಬಹುದು. ಕಂದಾಯವನ್ನು ನಿರ್ಧರಿಸುವಾಗ ಜಮೀನಿರುವ ಪ್ರದೇಶ, ಹವಾಗುಣ, ಮಳೆ, ಆ ಜಮೀನಿನಲ್ಲಿ ಬೆಳೆಯಬಹುದಾದ ಬೆಳೆ, ಅವುಗಳ ಬೆಲೆ, ಮಾರುಕಟ್ಟೆಯ ಸಂಪರ್ಕ, ಸಾರಿಗೆ ಸಂಪರ್ಕ, ಅಲ್ಲಿ ಸಿಗುವಂತಹ ಕೂಲಿಗಳ ಲಭ್ಯತೆ, ವಗೈರೆ ಅಂಶಗಳು ಗಣನೆಗೆ ಬರುತ್ತವೆ.

ಸಾಮಾನ್ಯವಾಗಿ ಜಮೀನಿನ ಪಹಣಿ ಮತ್ತು ಹಕ್ಕಿನ ಪತ್ರಗಳು ಜಮೀನಿನ ಮಾಲಿಕತ್ವ ಮತ್ತು ಸ್ವಾಧೀನವನ್ನು ತೋರಿಸುವ ಮಹತ್ವದ ದಾಖಲೆಗಳಾಗಿವೆ. ಇವುಗಳಲ್ಲಿ ಜಮೀನಿನ ಮಾಲೀಕರು ಅಥವಾ ಸ್ವಾಧೀನದಲ್ಲಿ ಇರುವವರು, ಸಾಗುವಳಿ - ಈ ಬಗ್ಗೆ ವಿವರಗಳನ್ನು ನಮೂದಿಸಿರುತ್ತಾರೆ.

ಯಾವುದೇ ಒಬ್ಬ ವ್ಯಕ್ತಿ ಜಮೀನುಗಳ ಬಗ್ಗೆ ವಾರಸಾ, ಕುಟುಂಬದಲ್ಲಿ ವಿಭಾಗ, ಕ್ರಯ, ಅಡಮಾನ, ದಾನ, ಅಥವಾ ಯಾವುದೇ ಆಸ್ತಿಯಲ್ಲಿ ಹಕ್ಕನ್ನು ಪಡೆದುಕೊಂಡ ಅದನ್ನು ಸಂಬಂಧಪಟ್ಟ ಗ್ರಾಮ ಲೆಕ್ಕಿಗರಿಗೆ ಮೂರು ತಿಂಗಳ ಒಳಗೆ ವರದಿ ಮಾಡಬೇಕು. ಒಂದು ವೇಳೆ ಇಂತಹ ಹಕ್ಕನ್ನು ನೋಂದಾಯಿತ ದಾಖಲೆಯ ಮೂಲಕ ಪಡೆದಿದ್ದರೆ, ಅದನ್ನು ವರದಿ ಮಾಡುವುದಕ್ಕೆ ಅವಧಿಯ ವಿನಾಯಿತಿ ಇದೆ. ನಂತರ, ಅವುಗಳನ್ನು ಗ್ರಾಮ ಲೆಕ್ಕಿಗರು ಸರ್ಕಾರದ ನಿಗದಿತ ದಾಖಲೆಯಲ್ಲಿ ನಮೂದಿಸಿ, ಅಂತಹ ಹಕ್ಕುಗಳ ವರ್ಗಾವಣೆಗೆ ಯಾವುದೇ ತಕರಾರು ಇಲ್ಲದಿದ್ದರೆ ಅವುಗಳನ್ನು ನಮೂದಿಸಿ ಕಂದಾಯ ನಿರೀಕ್ಷಕರಿಂದ ಪ್ರಮಾಣಿತಗೊಳಿಸುತ್ತಾರೆ. ಒಂದು ವೇಳೆ ತಕರಾರು ಇದ್ದರೆ, ಅವುಗಳನ್ನು ವಿವಾದಿತ ಪ್ರಕರಣಗಳ ಪುಸ್ತಕದಲ್ಲಿ ನಮೂದಿಸಿ ವಿಚಾರಣೆಗೆ ಒಳಪಡಿಸುತ್ತಾರೆ. ಈ ವಿಚಾರಣೆಯಿಂದ ಬರುವ ಆದೇಶದಿಂದ ಬಾಧಿತನಾದ ವ್ಯಕ್ತಿಯು ಜಿಲ್ಲಾಧಿಕಾರಿಗಳಿಗೆ ಅರುವತ್ತು ದಿನಗಳ ಒಳಗೆ ಮೇಲ್ಮನವಿ ಸಲ್ಲಿಸಬಹುದು.

ಅಧ್ಯಾಯ - ಒಂಬತ್ತು

ಪಾಲಕರ ಮತ್ತು ಪೋಷಿತರ ಕಾನೂನು

ಅಲ್ಪವಯಿ ಮಕ್ಕಳ ರಕ್ಷಣೆ ವಿಷಯದಲ್ಲಿ ಸಾಮಾನ್ಯ ಸಂದರ್ಭಗಳಲ್ಲಿ ಅಥವಾ ತಂಟೆಗಳು ಬಂದ ಸಂದರ್ಭಗಳಲ್ಲಿ ಯಾರು ಪಾಲನ ಕರ್ತರಾಗಬೇಕು ಎನ್ನುವ ಬಗ್ಗೆ ೧೮೯೦ನೇ ಇಸವಿಯ ಪಾಲಕರ ಮತ್ತು ಪೋಷಿತರ ಕಾನೂನಿನಲ್ಲಿ ಉಲ್ಲೇಖಿಸಿದ್ದಾರೆ. ಈ ಕಾನೂನು ಎಲ್ಲಾ ಧರ್ಮ, ಜಾತಿಯ ಅಲ್ಪವಯಿ ಮಕ್ಕಳಿಗೆ ಅನ್ವಯಿಸುತ್ತದೆ.

ಈ ಅಲ್ಪವಯಿ ಮಕ್ಕಳು ಎಂದರೆ ಯಾರು? - ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ೧೮೭೫ನೇ ಇಸವಿಯ ಭಾರತೀಯ ಪ್ರಾಪ್ತ ವಯಸ್ಕತೆಯ ಕಾನೂನಿನ ಅಡಿಯಲ್ಲಿ, ಯಾರು ೧೮ ವರ್ಷಗಳನ್ನು ಪೂರೈಸಿರುವುದಿಲ್ಲವೋ ಅವರು ಅಲ್ಪವಯಿಗಳೆಂದು ಹೇಳಲಾಗಿದೆ. ಇದರಿಂದ ಇಂತಹ ಅಲ್ಪವಯಿಗಳ ಜೊತೆ ಯಾವುದೇ ವ್ಯವಹಾರವನ್ನು ಮಾಡಿದರೂ ಅದು ಅಸಿಂಧುವಾಗುತ್ತದೆ. ಈ ಅಲ್ಪವಯಿಗಳ ಪರವಾಗಿ ಒಬ್ಬ ಕಾನೂನು ಸಂರಕ್ಷಣಾದಾರರು ವ್ಯವಹಾರ ಮಾಡಬಹುದು ಮತ್ತು ಅವರ ರಕ್ಷಣೆಯನ್ನು ಮಾಡಬಹುದು. ಈ ಸಂರಕ್ಷಣಾದಾರರು ಅಲ್ಪ ವಯಿಗಳ ಹಿತಾಸಕ್ತಿಯನ್ನು ಮಹತ್ವದ್ದೆಂದು ಗಣಿಸಿ ಅಂತಹ ಹಿತಾಸಕ್ತಿಯ ರಕ್ಷಣೆಗೆ ಮಾಡುವ ಎಲ್ಲಾ ವ್ಯವಹಾರಗಳೂ ಅಲ್ಪವಯಿಯ ಮೇಲೆ ಬಂಧನಕಾರಕವಾಗುತ್ತವೆ. ಸಂರಕ್ಷಣಾದಾರರು ಆ ಹಿತಾಸಕ್ತಿಯನ್ನು ಕಡೆಗಣಿಸಿ ಯಾವುದೇ ವ್ಯವಹಾರವನ್ನು ಮಾಡಿದರೂ ಅದು ಅಲ್ಪ ವಯಿಯ ಮೇಲೆ ಬಂಧನಕಾರಕವಾಗುವುದಿಲ್ಲ. ಅಲ್ಪವಯಿಯು ಪ್ರಾಪ್ತ ವಯಸ್ಕನಾದ ನಂತರ ಸಂರಕ್ಷಣಾದಾರರ ಯಾವುದೇ ವ್ಯವಹಾರದಿಂದ ಬಾಧಿತರಾಗಿದ್ದರೆ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು.

ಹಿಂದೂ ಕಾನೂನಿನ ಪ್ರಕಾರ ಪಾಲನ ಕರ್ತನಾಗುವ ಅಧಿಕಾರ

ಹಿಂದೂ ಕಾನೂನಿನ ಪ್ರಕಾರ ತಂದೆಯೇ ಅಲ್ಪವಯಿ ಮಕ್ಕಳ ಕಾನೂನುಬದ್ಧ ಸಂರಕ್ಷಕನಾಗುತ್ತಾನೆ. ಆದರೆ ಅಂತಹ ತಂದೆಯನ್ನು ಸಂರಕ್ಷಣೆದಾರರಾಗಲು ಅನರ್ಹರೆಂದು ಘೋಷಿಸಿದ್ದರೆ, ಆಗ ಅವರಿಗೆ ಸಂರಕ್ಷಣೆಯ ಅಧಿಕಾರ ಇರುವುದಿಲ್ಲ. ತಂದೆ ಇಲ್ಲದ

ಸಂದರ್ಭದಲ್ಲಿ ತಾಯಿ, ತಾಯಿಯೂ ಇಲ್ಲದ ಸಂದರ್ಭದಲ್ಲಿ ಅಜ್ಜ, ಪಾಲನ ಕರ್ತರಾಗುತ್ತಾರೆ.

ಮುಸ್ಲಿಂ ಕಾನೂನಿನ ಪ್ರಕಾರ

ಮುಸ್ಲಿಂ ಕಾನೂನಿನ ಪ್ರಕಾರ ಅಲ್ಪವಯಿಗೆ ತಂದೆಯೇ ಏಕೈಕ ಸಂರಕ್ಷಕನಾಗುತ್ತಾನೆ. ತಾಯಿಗೆ ಕೇವಲ ಮಗುವನ್ನು ಬೆಳೆಸುವ ಅಧಿಕಾರ ಮಾತ್ರ ಇದೆ. ಹನಫಿ ಪಂಗಡದಲ್ಲಿ ತಾಯಿಗೆ ಏಳು ವರ್ಷಗಳವರೆಗಿನ ಮಗನನ್ನು ಮತ್ತು ಋತುಮತಿಯಾಗುವವರೆಗಿನ ಮಗಳನ್ನು ತನ್ನ ಸಂರಕ್ಷಣೆಯಲ್ಲಿಟ್ಟುಕೊಳ್ಳುವ ಅಧಿಕಾರ ಇದೆ. ಷಿಯಾ ಪಂಗಡದಲ್ಲಿ ತಾಯಿಗೆ ಎರಡು ವರ್ಷಗಳವರೆಗಿನ ಮಗನನ್ನು ಏಳು ವರ್ಷಗಳವರೆಗಿನ ಮಗಳನ್ನು ತನ್ನ ರಕ್ಷಣೆಯಲ್ಲಿಟ್ಟುಕೊಳ್ಳುವ ಅಧಿಕಾರ ಇದೆ.

ಈ ಕಾನೂನಿನ ಅಡಿಯಲ್ಲಿ ವಿವಾದಿತ ಪ್ರಕರಣಗಳನ್ನು ಜಿಲ್ಲಾ ನ್ಯಾಯಾಲಯ ಅಥವಾ ಅಧಿಸೂಚಿತಗೊಳಿಸಿದ ಬೇರೆ ನ್ಯಾಯಾಲಯವು ವಿಚಾರಣೆ ಮಾಡಬಹುದಾಗಿದೆ. ಈಗ ಕರ್ನಾಟಕದಲ್ಲಿ ಹಿರಿಯ ವಿಭಾಗದ ಸಿವಿಲ್ ನ್ಯಾಯಾಧೀಶರಿಗೆ ಇಂತಹ ಪ್ರಕರಣಗಳನ್ನು ವಿಚಾರಣೆ ಮಾಡುವ ಅಧಿಕಾರವನ್ನು ನೀಡಲಾಗಿದೆ. ಇಂತಹ ನ್ಯಾಯಾಲಯಗಳು ಅಲ್ಪವಯಿ ಮಕ್ಕಳ ಸಂರಕ್ಷಣೆಗೆ ಅಥವಾ ಅವರ ಆಸ್ತಿಯ ರಕ್ಷಣೆಗೆ ಪಾಲನ ಕರ್ತರನ್ನು ನೇಮಿಸಬಹುದಾಗಿದೆ. ಮೃತ್ಯು ಪತ್ರದ ಮೂಲಕವೂ ಪಾಲನ ಕರ್ತರನ್ನು ನೇಮಿಸಬಹುದಾಗಿದೆ.

ಅಲ್ಪವಯಿಯ ಹಿತ ರಕ್ಷಣೆ ಮಾಡಲು ಬಯಸುವ ವ್ಯಕ್ತಿ ಅಥವಾ ಆತನ ಬಂಧು ಅಥವಾ ಸ್ನೇಹಿತರು ಅಥವಾ ಜಿಲ್ಲಾಧಿಕಾರಿಗಳು ಅಲ್ಪವಯಿಯ ಪಾಲನ ಕರ್ತನೆಂದು ನೇಮಕಗೊಳ್ಳಲು ಸಂಬಂಧಪಟ್ಟ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಅಲ್ಪ ವಯಿಯ ಸಂರಕ್ಷಣೆಯ ಬಗ್ಗೆ ಅರ್ಜಿಗಳನ್ನು ಅಂತಹ ವ್ಯಕ್ತಿಯು ಸಾಮಾನ್ಯವಾಗಿ ಎಲ್ಲಿ ವಾಸಿಸುತ್ತಿದ್ದಾರೋ ಅಲ್ಲಿ ಇರುವ ನ್ಯಾಯಾಲಯಕ್ಕೆ ಕೊಡಬೇಕು. ಅಲ್ಪವಯಿಯ ಆಸ್ತಿಯ ಬಗ್ಗೆ ಅರ್ಜಿಗಳನ್ನು, ಎಲ್ಲಿ ಆ ವ್ಯಕ್ತಿ ವಾಸಿಸುತ್ತಿದ್ದಾರೋ ಅಥವಾ ಎಲ್ಲಿ ಆ ಆಸ್ತಿ ಇದೆಯೋ ಅಲ್ಲಿಯ ನ್ಯಾಯಾಲಯಕ್ಕೆ ಸಲ್ಲಿಸಬೇಕು. ಇಂತಹ ಅರ್ಜಿಗಳಲ್ಲಿ ಅಲ್ಪ ವಯಿಯ ವಯಸ್ಸು, ಧರ್ಮ, ಅವರು ವಾಸಿಸುವ ಸ್ಥಳ, ವೈವಾಹಿಕ ಸ್ಥಾನ ಮಾನ, ಯಾರ ಸಂರಕ್ಷಣೆಯಲ್ಲಿ ಆ ಅಲ್ಪವಯಿ ಇದ್ದಾರೆ, ಮತ್ತು ಅರ್ಜಿಯನ್ನು ಕೊಡಬೇಕಾಗಿ ಬಂದ ಸಂದರ್ಭಗಳು, ವಗೈರೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಇಂತಹ ಅರ್ಜಿಗಳನ್ನು ಸ್ವೀಕರಿಸಿದ ಮೇಲೆ ನ್ಯಾಯಾಲಯವು ಎದುರು ಪಕ್ಷದವರನ್ನು ಕರೆಸಿ ವಿಚಾರಣೆ ಮಾಡಿ ಸೂಕ್ತ ಆದೇಶವನ್ನು ಮಾಡುತ್ತದೆ. ಉಚಿತವೆಂದು ಕಂಡುಬಂದ ಸಂದರ್ಭ ಗಳಲ್ಲಿ ನ್ಯಾಯಾಲಯವು ಅರ್ಜಿದಾರರಿಗೆ ಅಲ್ಪವಯಿಯ ಅಥವಾ ಅವರ ಆಸ್ತಿಯ ಜವಾಬ್ದಾರಿಯನ್ನು ಮಧ್ಯಂತರ ಸ್ವಾಧೀನಕ್ಕೆ ಕೊಡಲು ಆದೇಶಿಸಬಹುದು.

ನ್ಯಾಯಾಲಯವು ಅಲ್ಪವಯಿಯ ಹಿತಾಸಕ್ತಿಯನ್ನೇ ಪರಮೋಚ್ಚವೆಂದು ಗಣಿಸಿ ಅವರ ಶ್ರೇಯಸ್ಸನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ವ್ಯಕ್ತಿಯನ್ನು ಪಾಲನ ಕರ್ತನನ್ನಾಗಿ ನೇಮಿಸಬಹುದು.

ಅಲ್ಪವಯಿಯು ವಾಸವಿರುವ ಮತ್ತು ಅವರ ಆಸ್ತಿ ಇರುವ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಕೆಲವು ಸಂದರ್ಭಗಳಲ್ಲಿ ನ್ಯಾಯಾಲವು ಪಾಲನ ಕರ್ತನೆಂದು ನೇಮಿಸಬಹುದಾಗಿದೆ. ಆ ಸಂದರ್ಭಗಳಲ್ಲಿ ಜಿಲ್ಲಾಧಿಕಾರಿಯು ಸಂಬಂಧಪಟ್ಟ ಅಲ್ಪವಯಿಯ ಮತ್ತು ಅವರ ಆಸ್ತಿಯ ಸ್ವಾಧೀನಪಡೆದು ಅವರ ರಕ್ಷಣೆಯನ್ನು ಅವರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಅಲ್ಪ ವಯಿಯ ಪಾಲಿನ ಕರ್ತರಾದರವರು ಅವರ ಆರೋಗ್ಯ, ವಿದ್ಯೆ ಮತ್ತು ಅವರ ಸಂರಕ್ಷಣೆಗೆ ಅಗತ್ಯವಿರುವ ಎಲ್ಲಾ ಕರ್ತವ್ಯಗಳನ್ನು ಒಪ್ಪಿ ವಿವೇಚನಾಯುತನಾದ ವ್ಯಕ್ತಿಯಂತೆ ಮಾಡುವುದು ಅಗತ್ಯ. ಯಾವುದೇ ಅಲ್ಪವಯಿಯು ಸಂರಕ್ಷಣಾದಾರರನ್ನು ಬಿಟ್ಟುಹೋದರೆ, ಅಥವಾ ಬೇರೆಯವರು ಅವರನ್ನು ವಿನಾ ಕಾರಣ ಕರೆದುಕೊಂಡು ಹೋಗಿ ತಮ್ಮ ರಕ್ಷಣೆಯಲ್ಲಿಟ್ಟುಕೊಂಡರೆ, ಅಂತಹ ಅಲ್ಪ ವಯಿಯ ಮರು ಸ್ವಾಧೀನ ಪಡೆಯಲು ಪಾಲನ ಕರ್ತನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ಅರ್ಜಿಯನ್ನು ಕೊಟ್ಟು ಪರಿಹಾರ ಪಡೆಯಬಹುದಾಗಿದೆ.

ಅಧ್ಯಾಯ - ಹತ್ತು

ಕರ್ನಾಟಕ ಪೋಲೀಸ್ ವ್ಯವಸ್ಥೆಯ ರಚನೆ

ಇಡೀ ಕರ್ನಾಟಕ ರಾಜ್ಯಕ್ಕೆ ನ್ಯಾಯಾಲಯಗಳಿಂದ ಮತ್ತು ಸರ್ಕಾರದಿಂದ ನಿಯಂತ್ರಣವನ್ನು ಹೊಂದಿರುವ ಪೋಲೀಸ್ ವ್ಯವಸ್ಥೆಯನ್ನು ೧೯೬೩ರ ಪೋಲೀಸ್ ಕಾಯ್ದೆಯ ಅನ್ವಯ ರಚಿಸಲಾಗಿದೆ. ಇದರಲ್ಲಿ ರಾಜ್ಯದ ಪೋಲೀಸ್ ವ್ಯವಸ್ಥೆಯ ಮುಖ್ಯಸ್ಥರಾಗಿ ಪೋಲೀಸ್ ಮಹಾ ನಿರ್ದೇಶಕರಿದ್ದಾರೆ. ನಂತರ, ಪೋಲೀಸ್ ಮಹಾ ನಿರೀಕ್ಷಕರು, ಆಯುಕ್ತರು, ಉಪ ಪೋಲೀಸ್ ಮಹಾ ನಿರೀಕ್ಷಕರು, ಉಪ ಆಯುಕ್ತರು, ಅಧೀಕ್ಷಕರು, ಅವರ ಅಧೀಕ್ಷಕರು, ಸಹಾಯಕ ಅಧೀಕ್ಷಕರು, ಉಪ ಅಧೀಕ್ಷಕರು, ವೃತ್ತ ನಿರೀಕ್ಷಕರು, ಉಪ ನಿರೀಕ್ಷಕರು, ಸಹಾಯಕ ಉಪ ನಿರೀಕ್ಷಕರು, ಮುಖ್ಯ ಪೇದೆ ಮತ್ತು ಪೋಲೀಸ್ ಪೇದೆಗಳಿದ್ದಾರೆ. ಈ ಪೋಲೀಸ್ ವ್ಯವಸ್ಥೆಯಲ್ಲಿ ರಾಜ್ಯ ಮೀಸಲು ಪಡೆಯೂ ಸೇರಿದೆ.

ಪೋಲೀಸ್ ಆಯುಕ್ತರು ಅಥವಾ ಅಧೀಕ್ಷಕರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿ ಸಾರ್ವಜನಿಕರು ಮೆರವಣಿಗೆ, ಸಭೆ, ವಗೈರೆಗಳನ್ನು ನಡೆಸಲು ಸೂಕ್ತವಾದ ಮಾರ್ಗ ಮತ್ತು ಸಮಯವನ್ನು ನಿಗದಿಪಡಿಸಲು ಸೂಚಿಸುವ ಅಧಿಕಾರವನ್ನು ಹೊಂದಿದ್ದಾರೆ. ಅಲ್ಲದೇ, ಸಂಗೀತ, ಗಾಯನ, ಇತರೆ ವಾದ್ಯಗಳನ್ನು ಉಪಯೋಗಿಸುವ ಬಗ್ಗೆ ಸೂಕ್ತ ನಿಯಂತ್ರಣಾಧಿಕಾರವನ್ನು ಹೊಂದಿದ್ದಾರೆ. ಇದಲ್ಲದೇ ಆಯುಕ್ತರು ಅಥವಾ ಜಿಲ್ಲಾಧಿಕಾರಿಗಳು ಅಶಾಂತಿ ಉಂಟಾಗಬಹುದಾದಂಥ ಸಂದರ್ಭಗಳನ್ನು ತಡೆಗಟ್ಟಲು ಪ್ರತಿಬಂಧಕಾಜ್ಞೆಗಳನ್ನು ಸಂಬಂಧಪಟ್ಟ ಸ್ಥಳಗಳಲ್ಲಿ ವಿಧಿಸಿ, ಸಭೆ, ಮೆರವಣಿಗೆ, ಶಸ್ತ್ರಗಳನ್ನು ಒಯ್ಯುವುದು, ಗುಂಪಾಗಿ ಗಲಭೆ ಮಾಡುವುದು, ಇವುಗಳನ್ನು ನಿಯಂತ್ರಿಸಬಹುದಾಗಿದೆ.

ನಾಗರಿಕರಿಗೆ ವಾಕ್ ಸ್ವಾತಂತ್ರ್ಯ ಇದೆಯಾದರೂ ಅದಕ್ಕೆ ಹಲವು ನಿರ್ಬಂಧಗಳೂ ಇವೆ. ಧ್ವನಿವರ್ಧಕಗಳು ಮತ್ತು ಇತರೆ ಸಂಗೀತದ ಅಥವಾ ಬೇರೆ ಪರಿಕರಗಳನ್ನು ಉಪಯೋಗಿಸುವಾಗ ಅವುಗಳ ಶಬ್ದದ ವ್ಯಾಪ್ತಿ ಎಷ್ಟಿರಬೇಕು ಎನ್ನುವುದನ್ನು ತಿಳಿದುಕೊಳ್ಳುವುದು ಅಗತ್ಯ. ಇಂತಹ ಧ್ವನಿವರ್ಧಕ ಮತ್ತು ವಾದ್ಯಗಳನ್ನು ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕ ಕಟ್ಟಡದಲ್ಲಿ ಉಪಯೋಗಿಸಲು ಪೋಲೀಸರ ಅನುಮತಿಯನ್ನು ಪಡೆಯಬೇಕು. ಯಾವುದೇ ಕಟ್ಟಡದಲ್ಲಿ ಅವುಗಳನ್ನು ಉಪಯೋಗಿಸಿದರೆ,

ಅವುಗಳ ಶಬ್ದವು ಕಟ್ಟಡದಿಂದ ಐವತ್ತು ಅಡಿ ಆಚೆಗೆ ಕೇಳಿಸಬಾರದು ; ಬಯಲು ಪ್ರದೇಶದಲ್ಲಿ ಆ ಶಬ್ದವು ಇನ್ನೂರು ಅಡಿಗಳ ಆಚೆ ಕೇಳಿಸಬಾರದು ಎನ್ನುವ ನಿಯಂತ್ರಣಕ್ಕೆ ಒಳಪಟ್ಟು ಅನುಮತಿಯನ್ನು ಕೊಡುತ್ತಾರೆ.

ಗೊಂದಲ, ಗಲಭೆ, ಅಶಾಂತಿಯನ್ನುಂಟುಮಾಡುವ ಅಥವಾ ಅಪರಾಧಗಳನ್ನು ಮಾಡಬಹುದಾದ ವ್ಯಕ್ತಿ ಅಥವಾ ಗುಂಪನ್ನು ಗಡೀಪಾರು ಮಾಡಲು ಪೋಲೀಸರು ಸಂಬಂಧಪಟ್ಟ ದಂಡಾಧಿಕಾರಿಗಳಲ್ಲಿ ವಿನಂತಿಸಬಹುದಾಗಿದೆ.

ಸಾರ್ವಜನಿಕ ಪ್ರದೇಶದಲ್ಲಿ ಜೂಜು, ಮಟ್ಕಾ, ಇಸ್ಪೀಟ್ ಆಟ, ವಗೈರೆಗಳನ್ನು ಆಡುವ ವ್ಯಕ್ತಿಗಳನ್ನು ಪೋಲೀಸರು ವಾರಂಟ್ ಇಲ್ಲದೆ ಬಂಧಿಸಬಹುದಾಗಿದೆ. ಯಾವುದೇ ಜೂಜಿನ ಮನೆಯಲ್ಲಿ ಸಾಮೂಹಿಕವಾಗಿ ಜೂಜಾಟ ಆಡಿದರೆ ಅಲ್ಲಿಗೆ ಸಂಬಂಧಪಟ್ಟ ಮೇಲಧಿಕಾರಿಯಿಂದ ವಾರಂಟ್ ಪಡೆದು ದಾಳಿ ಮಾಡಬಹುದಾಗಿದೆ. ಇಸ್ಪೀಟ್ ಆಟದಲ್ಲಿ 'ರಮ್ಮೀ' ಎನ್ನುವ ಆಟ 'ಆಕಸ್ಮಿಕದ' ಆಟವಾಗಿರದೇ 'ಬುದ್ಧಿಕೌಶಲ್ಯದ' ಆಟವಾಗಿರುವುದರಿಂದ, ಅದು ಕಾನೂನಿನ ಪ್ರಕಾರ ಅಪರಾಧ ಅಲ್ಲವೆಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದವರು "ಅನಂತಸ್ವಾಮಿ ಅಯ್ಯರ್ ವಿರುದ್ಧ ರಾಜ್ಯ" (೧೯೮೨ (೧) ಕೆ.ಎಲ್.ಜೆ ೪೦೦) ಎಂಬ ಪ್ರಕರಣದಲ್ಲಿ ತೀರ್ಮಾನಿಸಿದ್ದಾರೆ.

ದೀಪವಿಲ್ಲದೆ ಕತ್ತಲಲ್ಲಿ ವಾಹನವನ್ನು ನಡೆಸುವುದು, ರಸ್ತೆಯಲ್ಲಿ ವಾಹನವನ್ನು ನಿಲ್ಲಿಸಿ ಸಂಚಾರಕ್ಕೆ ಅಡ್ಡಿ ಮಾಡುವುದು, ಜನರಿಗೆ ತೊಂದರೆಯನ್ನು ಮಾಡಬಹುದಾದಂಥ ಪ್ರಾಣಿಗಳನ್ನು ಸೂಕ್ತ ರೀತಿಯಲ್ಲಿ ಕಟ್ಟದೇ ಇರುವುದು, ಬೀದಿಯಲ್ಲಿ ಕೂಗಿ ಗಲಾಟೆ ಮಾಡುವುದು, ಅಸಭ್ಯವಾಗಿ ವರ್ತಿಸಿ ಅಂಗ ಪ್ರದರ್ಶನ ಮಾಡುವುದು, ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಆರು ಗಂಟೆಯೊಳಗೆ ಧ್ವನಿವರ್ಧಕ ಅಥವಾ ಇತರ ವಾದ್ಯೋಪಕರಣಗಳನ್ನು ಬಳಸುವುದು, ಇತ್ಯಾದಿಗಳನ್ನು ಅಪರಾಧವೆಂದು ಈ ಕಾಯ್ದೆಯಲ್ಲಿ ಪರಿಗಣಿಸಲಾಗಿದೆ. ಇಂತಹ ಅಪರಾಧಗಳು ರುಜುವಾತು ಆದಲ್ಲಿ, ಅವುಗಳಿಗೆ ಗರಿಷ್ಠ ರೂ. ನೂರರವರೆಗಿನ ದಂಡವನ್ನು ವಿಧಿಸಬಹುದಾಗಿದೆ. ಯಾವುದೇ ವ್ಯಕ್ತಿಯು ಸಂಶಯಾಸ್ಪದ ರೀತಿಯಲ್ಲಿ ಅಪಾಯಕಾರಿ ವಸ್ತುವನ್ನು ಅಪರಾಧ ಮಾಡುವ ಉದ್ದೇಶದಿಂದ, ಮುಖವನ್ನು ಮರೆಮಾಚಿ ಒಯ್ಯುವಾಗ, ಅಂತಹವರನ್ನು ಬಂಧಿಸಿ ಮೂರು ತಿಂಗಳ ಕಾರಾಗೃಹ ವಾಸವನ್ನು ವಿಧಿಸಬಹುದಾಗಿದೆ. ಯಾವುದೇ ವ್ಯಕ್ತಿಯು ತನ್ನ ಸ್ವಾಧೀನದಲ್ಲಿ ಇರತಕ್ಕಂಥ ಯಾವುದೇ ಆಸ್ತಿಯ ಬಗ್ಗೆ ಸರಿಯಾದ ವಿವರಣೆಯನ್ನು ದಂಡಾಧಿಕಾರಿಗೆ ಕೊಡದೇ ಇದ್ದ ಪಕ್ಷದಲ್ಲಿ, ಅಂತಹ ಅಪರಾಧಕ್ಕೆ ಮೂರು ತಿಂಗಳ ಕಾರಾಗೃಹ ವಾಸವನ್ನು ಈ ಕಾಯ್ದೆಯ ಪ್ರಕಾರ ವಿಧಿಸಬಹುದಾಗಿದೆ. ಹದಿನಾಲ್ಕು ವರ್ಷಗಳೊಳಗಿನ ಬಾಲಕ ಅಥವಾ ಬಾಲಕಿಯಿಂದ ವಸ್ತುಗಳನ್ನು ಅಡ ಇಟ್ಟುಕೊಳ್ಳುವುದು, ಸಾಲ ವಗೈರೆಗಳನ್ನು ಕೊಡುವುದು, ಇತ್ಯಾದಿಗಳು ಈ

ಕಾನೂನಿನನ್ವಯ ಅಪರಾಧಗಳಾಗುತ್ತವೆ. ಅದಕ್ಕೆ ಗರಿಷ್ಠ ರೂ. ನೂರರವರೆಗೆ ದಂಡವನ್ನು ವಿಧಿಸಬಹುದಾಗಿದೆ.

ಪೋಲೀಸರು ವಿನಾ ಕಾರಣ ಶೋಧನೆ, ಅಥವಾ ವ್ಯಕ್ತಿಗಳ ಬಂಧನವನ್ನು ಉದ್ದೇಶಪೂರ್ವಕ ಮಾಡಿದರೂ ಅದಕ್ಕೆ ಆರು ತಿಂಗಳವರೆಗಿನ ಕಾರಾಗೃಹ ವಾಸವನ್ನು ಮತ್ತು ರೂ. ಐನೂರರವರೆಗಿನ ದಂಡವನ್ನು ವಿಧಿಸಬಹುದಾಗಿದೆ. ಪೋಲೀಸರು ಬಂಧಿಸಿದ ಆರೋಪಿಗಳನ್ನು ಸಮೀಪದ ನ್ಯಾಯಾಲಯದಲ್ಲಿ ದಂಡಾಧಿಕಾರಿಗಳ ಮುಂದೆ ಕಾನೂನಿನಲ್ಲಿ ನಿಗದಿಯಾದ ಅವಧಿಯೊಳಗೆ ಹಾಜರುಪಡಿಸದೇ ಇದ್ದರೆ ಅಂತಹ ಅಪರಾಧಕ್ಕೆ ಆರು ತಿಂಗಳ ಸೆರೆಮನೆ ವಾಸವನ್ನು ಮತ್ತು ರೂ. ಐನೂರರವರೆಗಿನ ದಂಡವನ್ನು ವಿಧಿಸಬಹುದಾಗಿದೆ.

ಒಟ್ಟಾರೆ, ಸಾರ್ವಜನಿಕರ ಹಿತರಕ್ಷಣೆಯನ್ನು ಮಾಡಲು ಪೋಲೀಸರು ಸದಾ ಕಾಲ ಜಾಗರೂಕರಾಗಿ ಸೂಕ್ತಕ್ರಮಗಳನ್ನು ಕೈಗೊಳ್ಳುವುದು ಈ ಕಾನೂನಿನ್ವಯ ಅವರ ಆದ್ಯ ಕರ್ತವ್ಯವಾಗಿದೆ. ಸಾರ್ವಜನಿಕರಿಗೆ ಸಹಾಯ ನೀಡುವುದು ಕೂಡ ಅವರ ಪರಮ ಕರ್ತವ್ಯವಾಗಿದೆ.

ಅಧ್ಯಾಯ - ಹನ್ನೊಂದು

ಜೀವನಾಂಶವನ್ನು ಪಡೆಯುವ ಬಗ್ಗೆ

ಧರ್ಮ ಮತ್ತು ಕಾನೂನು, ತಮ್ಮನ್ನು ತಾವು ಸಾಕಿಕೊಳ್ಳಲು ಅಸಮರ್ಥರಾದ ಕೆಲವು ವ್ಯಕ್ತಿಗಳನ್ನು ಸಾಕುವ ಹೊಣೆಯನ್ನು ಬೇರೊಬ್ಬರ ಮೇಲೆ ಹಾಕಿವೆ. ಎಲ್ಲಾ ಧರ್ಮಗಳಲ್ಲಿಯೂ, ಈ ರೀತಿ ಅಸಮರ್ಥರನ್ನು ಸಾಕುವ ಹೊಣೆಗಾರಿಕೆಯ ಬಗ್ಗೆ ಹೇಳಲಾಗಿದೆ. ಅದೇ ರೀತಿ ಕಾನೂನಿನಲ್ಲಿ ಕೂಡ ಹೇಳಲಾಗಿದೆ. ಯಾವುದೇ ಧರ್ಮ, ಜಾತಿಯ ಭೇದವಿಲ್ಲದೆ ಎಲ್ಲರಿಗೂ ಅನ್ವಯವಾಗುವಂತಹ ಜೀವನಾಂಶದ ಹೊಣೆಗಾರಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ವಿವರಿಸಿದ್ದಾರೆ. ಈ ಕಾನೂನಿನನ್ವಯ ಜೀವನಾಂಶವನ್ನು ಪಡೆಯುವ ಇಚ್ಛೆಯುಳ್ಳವರು ಯಾವುದೇ ಧರ್ಮದ ಕಟ್ಟುಪಾಡಿಗೆ ಒಳಪಟ್ಟಿರಬೇಕಿಲ್ಲ. ಆದರೂ, ಈ ಕಾನೂನಿನ ಪ್ರಯೋಜನವನ್ನು ಗಂಡನಿಂದ ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರು ಪಡೆಯುವಂತಿಲ್ಲ. ಏಕೆಂದರೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು 'ಶಹಬಾನು' ಪ್ರಕರಣದಲ್ಲಿ ವಿವಾಹ ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರು ಜೀವನಾಂಶವನ್ನು ಪಡೆಯಲು ಅರ್ಹಳು ಎಂದು ಹೇಳಿದ ಮೇಲೆ ೧೯೮೬ರಲ್ಲಿ ದಂಡ ಪ್ರಕ್ರಿಯಾ ಸಂಹಿತೆಯಲ್ಲಿರುವ ಜೀವನಾಂಶದ ಕಲಂ ಅನ್ನು ಅಂತಹ ಮಹಿಳೆಯರಿಗೆ ಅನ್ವಯಿಸದಂತೆ ಸಂಸತ್ತಿನಲ್ಲಿ ಒಂದು ಕಾನೂನನ್ನು ರಚಿಸಿದ್ದಾರೆ. ಆದರೆ ಈ ಕಾನೂನಿನ ಪ್ರಕಾರ ವಿಚ್ಛೇದನ ನೀಡಿದ ಮಹಿಳೆಯ ಗಂಡ ಈ ಕಾನೂನಿನ ಕಲಂಗಳನ್ವಯ ಜೀವನಾಂಶ ಕೊಡಲು ಒಪ್ಪಿದರೆ ಮಾತ್ರ ಆತನ ವಿರುದ್ಧ ಪ್ರಕರಣವನ್ನು ಹೂಡಬಹುದು.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೧೨೫ರ ಅನ್ವಯ ತಮ್ಮನ್ನು ತಾವು ಸಾಕಿಕೊಳ್ಳಲು ಅಸಮರ್ಥರಿರುವ ಹೆಂಡತಿ, ಅಲ್ಪವಯಿ ಮಕ್ಕಳು, ಅಥವಾ ವಯಸ್ಕರಾಗಿದ್ದರೂ ದೈಹಿಕವಾಗಿ ಅಥವಾ ಮಾನಸಿಕ ದೌರ್ಬಲ್ಯದ ಕಾರಣದಿಂದ ಅಸಮರ್ಥರಾದ ಮಕ್ಕಳು, ತಂದೆ ಮತ್ತು ತಾಯಿ, ಇವರುಗಳ ಜೀವನಾಂಶವನ್ನು ಗಂಡ, ತಂದೆ ಅಥವಾ ಮಕ್ಕಳಿಂದ ಪಡೆಯಲು ಅರ್ಹರಿದ್ದಾರೆ. ಈ ಮಕ್ಕಳಲ್ಲಿ ಜಾರ ಸಂತಾನವೂ ಕೂಡ ಅಡಕವಾಗಿದೆ.

ಜೀವನಾಂಶವನ್ನು ಪಡೆಯಲು ಇಚ್ಛಿಸುವವರು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರಿಗೆ ಅರ್ಜಿಯನ್ನು ಸಲ್ಲಿಸಬೇಕು. ಅವರು ವಿಚಾರಣೆಯನ್ನು ನಡೆಸಿ, ಸೂಕ್ತವೆಂದು ಕಂಡರೆ, ಪ್ರತಿ ಅರ್ಜಿದಾರರಿಗೆ ಮಾಸಿಕ ರೂ. ಐನೂರರವರೆಗಿನ ಗರಿಷ್ಠ ಜೀವನಾಂಶವನ್ನು ನೀಡುವಂತೆ ಆದೇಶಿಸಬಹುದು. ಸ್ವಸ್ಥ ಆರೋಗ್ಯದ ಅಲ್ಪವಯಿ ಮಕ್ಕಳು ವಯಸ್ಕರಾಗುವವರೆಗೆ, ಅಂದರೆ, ಹದಿನೆಂಟು ವರ್ಷಗಳವರೆಗೆ ಜೀವನಾಂಶವನ್ನು ಪಡೆಯಲು ಅರ್ಹರಾಗಿರುತ್ತಾರೆ. ಜೀವನಾಂಶವನ್ನು ಅರ್ಜಿಯ ದಿನಾಂಕದಿಂದ ಅಥವಾ ಆ ನ್ಯಾಯಾಲಯದ ಆದೇಶದ ದಿನಾಂಕದಿಂದ ಕೊಡುವಂತೆ ಆದೇಶಿಸ ಬಹುದಾಗಿದೆ.

ಅರ್ಜಿಯ ವಿಚಾರಣೆಯ ಅವಧಿಯಲ್ಲಿ ಮಧ್ಯಂತರ ಜೀವನಾಂಶವನ್ನು ನೀಡಲು ನ್ಯಾಯಾಲಯವು ಸೂಕ್ತ ಸಂದರ್ಭಗಳಲ್ಲಿ ಆದೇಶಿಸಬಹುದು. ಗಂಡನಿಂದ ವಿಚ್ಛೇದನವನ್ನು ಪಡೆದ ಮಹಿಳೆಯು ಮರು ಮದುವೆ ಆಗದೇ ಇರುವವರರೆಗೆ ಜೀವನಾಂಶವನ್ನು ಪಡೆಯಬಹುದು. ಈ ಕಾನೂನಿನ ಅನ್ವಯ ಸಾಕಷ್ಟು ಆದಾಯವಿರುವ ಹೆಂಡತಿ, ಮಕ್ಕಳು, ತಂದೆ ಅಥವಾ ತಾಯಿ ಜೀವನಾಂಶವನ್ನು ಪಡೆಯಲು ಅರ್ಹರಲ್ಲ. ಗಂಡನು ಎರಡನೇ ಮದುವೆಯನ್ನು ಮಾಡಿಕೊಂಡಿದ್ದರೆ, ಆಗ ಮೊದಲ ಹೆಂಡತಿಯು ಗಂಡನಿಂದ ಬೇರೆ ಇದ್ದು ಜೀವನಾಂಶವನ್ನು ಪಡೆಯಲು ಅರ್ಹಳಾಗುತ್ತಾಳೆ. ಆದರೆ, ವಿನಾ ಕಾರಣ ಗಂಡನ ಜೊತೆಗೆ ವಾಸಿಸಲು ನಿರಾಕರಿಸುವ ಹೆಂಡತಿಗೆ, ಅಥವಾ ವ್ಯಭಿಚಾರದಲ್ಲಿ ತೊಡಗಿದ್ದವಳಿಗೆ, ಅಥವಾ ಪರಸ್ಪರ ಒಪ್ಪಂದದ ಮೇಲೆ ಪ್ರತ್ಯೇಕವಾಗಿ ವಾಸಿಸುತ್ತಿದ್ದರೆ, ಅಂತಹವರಿಗೆ ಜೀವನಾಂಶವನ್ನು ಪಡೆಯುವ ಹಕ್ಕು ಇರುವುದಿಲ್ಲ. ಜೀವನಾಂಶದ ಆದೇಶವನ್ನು ಪಡೆದ ನಂತರ ವ್ಯಭಿಚಾರದಲ್ಲಿ ತೊಡಗಿರುವುದು ಕಂಡು ಬಂದರೆ, ಅಂತಹ ಆದೇಶವನ್ನು ರದ್ದುಪಡಿಸಬಹುದಾಗಿದೆ.

ಇಂತಹ ಅರ್ಜಿಗಳನ್ನು ಜೀವನಾಂಶವನ್ನು ಕೊಡಬೇಕಾದ ವ್ಯಕ್ತಿಯು ವಾಸ ಮಾಡುತ್ತಿರುವ ಅಥವಾ ಜೀವನಾಂಶವನ್ನು ಪಡೆಯಬೇಕಾದ ವ್ಯಕ್ತಿಯು ವಾಸಿಸುತ್ತಿರುವ ಅಥವಾ ಹಿಂದೆ ಗಂಡ ಹೆಂಡತಿ ವಾಸಿಸುತ್ತಿದ್ದ ಸ್ಥಳದ ವ್ಯಾಪ್ತಿಯಲ್ಲಿ ಬರುವ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಸಲ್ಲಿಸಬಹುದು.

ಜೀವನಾಂಶವನ್ನು ನಿಗದಿಪಡಿಸುವ ಸಂದರ್ಭದಲ್ಲಿ ಪಕ್ಷಗಾರರ ಸಾಮಾಜಿಕ ಸ್ಥಿತಿ, ಕೊಡಬೇಕಾದ ವ್ಯಕ್ತಿಯ ಆದಾಯದ ಮೊತ್ತ, ಅರ್ಜಿದಾರರ ಅವಶ್ಯಕತೆ, ಇವುಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಜೀವನಾಂಶದ ಆದೇಶವನ್ನು ಪಾಲಿಸದಿದ್ದಾಗ, ಆದೇಶವನ್ನು ನೀಡಿದ್ದ ನ್ಯಾಯಾಲಯಕ್ಕೆ ಅರ್ಜಿಯನ್ನು ಕೊಟ್ಟು ವಸೂಲು ಮಾಡಿಕೊಳ್ಳಬಹುದು. ಜೀವನಾಂಶವನ್ನು ಕೊಡದೇ ಇದ್ದ ಸಂದರ್ಭದಲ್ಲಿ ಒಂದು ತಿಂಗಳ ಜೀವನಾಂಶಕ್ಕೆ ಒಂದು ತಿಂಗಳ ಕಾರಾಗೃಹ ವಾಸದ ಶಿಕ್ಷೆಯನ್ನು ಜೀವನಾಂಶವನ್ನು ಕೊಡಲು ವಿಫಲನಾದ ವ್ಯಕ್ತಿಗೆ ವಿಧಿಸಬಹುದು.

ಹಿಂದೂ ಕಾನೂನಿನಲ್ಲಿ ಜೀವನಾಂಶ

ಈ ಕಾನೂನಿನನ್ವಯ ಜೀವನಾಂಶವನ್ನು ಪಡೆಯುವವರು ಮತ್ತು ಜೀವನಾಂಶವನ್ನು ಕೊಡುವವರು, ಇಬ್ಬರೂ ಹಿಂದೂಗಳಾಗಿರಬೇಕು. ಈ ಕಾನೂನಿನನ್ವಯ ಹಿಂದೂ ಹೆಂಡತಿ ಅಥವಾ ವಿಧವೆಯಾದ ಸೊಸೆ, ಗಂಡ ಅಥವಾ ಮಾವನಿಂದ ಜೀವನಾಂಶವನ್ನು ಪಡೆಯಲು ಅರ್ಹರಿದ್ದಾರೆ. ಗಂಡನು ಹೆಂಡತಿಯನ್ನು ವಿನಾ ಕಾರಣ ತ್ಯಜಿಸಿದರೆ, ಪ್ರಾಣಕ್ಕೆ ಅಪಾಯವಾಗುವಂತಹ ಹಿಂಸೆಯನ್ನು ನೀಡಿದರೆ, ಗಂಡನು ಕುಷ್ಠ ರೋಗಿಯಾಗಿದ್ದರೆ, ಅಥವಾ ಗಂಡನು ಮತ್ತೊಬ್ಬಳನ್ನು ಇಟ್ಟುಕೊಂಡಿದ್ದರೆ, ಅವನು ಹಿಂದೂ ಧರ್ಮವನ್ನು ತ್ಯಜಿಸಿದ್ದರೆ, ಅಥವಾ ಇತರೆ ಕಾರಣಗಳಿಗಾಗಿ ಹೆಂಡತಿಯು ಗಂಡನಿಂದ ಬೇರೆಯಾಗಿದ್ದರೆ, ಆಗ ಆಕೆಯು ಜೀವನಾಂಶವನ್ನು ಪಡೆಯಬಹುದು.

ಮಕ್ಕಳನ್ನು ಮತ್ತು ಮುಪ್ಪಿನ ತಂದೆ ತಾಯಿಗಳನ್ನು ಕೂಡ ಹಿಂದೂ ವ್ಯಕ್ತಿಯು ಪೋಷಿಸಬೇಕು. ಮಕ್ಕಳಲ್ಲಿ ಜಾರ ಸಂತಾನವೂ ಸೇರುತ್ತದೆ. ಮೃತ ಹಿಂದೂ ವ್ಯಕ್ತಿಯ ಅವಲಂಬಿತರಾದ ತಂದೆ, ತಾಯಿ, ವಿಧವೆ, ಅವರ ಅಲ್ಪವಯಿ ಮಕ್ಕಳು, ಮುಂತಾದುವರನ್ನು ಮೃತ ವ್ಯಕ್ತಿಯ ಆಸ್ತಿಯ ಆದಾಯದಿಂದ ಸಾಕಬೇಕಾಗುತ್ತದೆ. ಯಾವುದೇ ಅವಲಂಬಿತರಿಗೆ ಜೀವನಾಂಶವನ್ನು ಪಡೆಯಲು ಅಂತಹ ಆಸ್ತಿಯಲ್ಲಿ ಹಕ್ಕಿದ್ದರೂ, ಆ ಹಕ್ಕು ಆ ಆಸ್ತಿಯ ಮೇಲಿನ ಹೊಣೆಯಾಗಿರುತ್ತದೆ.

ಹಿಂದೂ ಕಾನೂನಿನನಡಿಯಲ್ಲಿ ಜೀವನಾಂಶವನ್ನು ಪಡೆಯಲು ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಹಾಕಿ ಒಂದು ವರ್ಷಕ್ಕೆ ಕೇಳುವ ಜೀವನಾಂಶದ ಮೊತ್ತದ ಮೇಲೆ ನ್ಯಾಯಾಲಯದ ಶುಲ್ಕವನ್ನು ಕೊಡಬೇಕಾಗುತ್ತದೆ ಮತ್ತು ಆ ದಾವೆಯಲ್ಲಿ ಆಗುವ ಆದೇಶವು ಜೀವನಾಂಶಕ್ಕೆ ಬದ್ಧವಾಗಿ ಆಸ್ತಿಯ ಮೇಲಿನ ಹೊಣೆಗಾರಿಕೆಯನ್ನು ನಿಗದಿಪಡಿಸುತ್ತದೆ. ಮೂರು ವರ್ಷಗಳವರೆಗಿನ ಬಾಕಿ ಜೀವನಾಂಶವನ್ನು ಕೂಡ ನ್ಯಾಯಾಲಯದ ಶುಲ್ಕವನ್ನು ಕೊಟ್ಟು ಕೇಳಬಹುದು.

ಅಧ್ಯಾಯ - ಹನ್ನೆರಡು

ಹಿಂದೂ ದತ್ತಕ ಕಾನೂನು

ಈ ಕಾನೂನಿನನ್ವಯ ಅರ್ಹ ಹಿಂದೂ ದಂಪತಿಗಳು ಅಥವಾ ಪುರುಷ ಅಥವಾ ಮಹಿಳೆಯು ಮಗ ಅಥವಾ ಮಗಳನ್ನು ದತ್ತು ತೆಗೆದುಕೊಳ್ಳಬಹುದು. ಸ್ವಸ್ಥ ಮನಸ್ಸಿನ ಪ್ರಾಪ್ತ ವಯಸ್ಕನಾದ ಹಿಂದೂ ಪುರುಷನು ಮಗ ಅಥವಾ ಮಗಳನ್ನು ದತ್ತು ತೆಗೆದುಕೊಳ್ಳ ಬಹುದು. ಅಂತಹವರಿಗೆ ಜೀವಂತ ಹೆಂಡತಿಯಿದ್ದರೆ ಆಕೆಯ ಪೂರ್ವಾನುಮತಿಯೊಂದಿಗೆ ಮಗುವನ್ನು ದತ್ತು ತೆಗೆದುಕೊಳ್ಳಬೇಕು. ಒಂದು ವೇಳೆ ಹೆಂಡತಿಯು ಗಂಡನನ್ನು ತ್ಯಜಿಸಿದ್ದರೆ ಅಥವಾ ಅಸ್ವಸ್ಥ ಮನಸ್ಸಿನವರೆಂದು ಸಕ್ಷಮ ನ್ಯಾಯಾಲಯವು ಘೋಷಿಸಿದ್ದರೆ, ಅವರ ಅನುಮತಿ ಬೇಕಾಗಿಲ್ಲ. ಒಬ್ಬಳಿಗಿಂತ ಹೆಚ್ಚು ಮಂದಿ ಪತ್ನಿಯರಿದ್ದರೆ ಅವರೆಲ್ಲರ ಅನುಮತಿಯು ಅಗತ್ಯ.

ಒಬ್ಬ ಹಿಂದೂ ಸ್ವಸ್ಥ ಮನಸ್ಸಿನ ಪ್ರಾಪ್ತ ವಯಸ್ಕ ಅವಿವಾಹಿತ ಅಥವಾ ವಿಚ್ಛೇದಿತ ಅಥವಾ ಮದುವೆಯಾದ ಮೇಲೆ ಗಂಡ ಸಂಸಾರವನ್ನು ತ್ಯಜಿಸಿದ್ದರೆ, ಅಂತಹ ಮಹಿಳೆಯರು ಮಗ ಅಥವಾ ಮಗಳನ್ನು ದತ್ತು ತೆಗೆದುಕೊಳ್ಳಬಹುದು. ಮಗುವಿನ ತಂದೆ, ತಾಯಿ ಅಥವಾ ಪಾಲಕರನ್ನು ಬಿಟ್ಟು ಬೇರೆ ಯಾರಿಗೂ ಆ ಮಗುವನ್ನು ದತ್ತು ಕೊಡುವ ಅಧಿಕಾರ ಇಲ್ಲ. ತಂದೆಯು ದತ್ತಕ್ಕೆ ಕೊಡುವ ಸಂದರ್ಭದಲ್ಲಿ ಆ ಮಗುವನ್ನು ತಾಯಿಯ ಅನುಮತಿ ಯೊಂದಿಗೆ ಕೊಡಬೇಕು. ತಂದೆ ಸತ್ತಿದ್ದರೆ ಅಥವಾ ಸಂಸಾರವನ್ನು ತ್ಯಜಿಸಿದ್ದರೆ ಅಥವಾ ಮಾನಸಿಕವಾಗಿ ಅಸ್ವಸ್ಥನೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿಸಲ್ಪಟ್ಟಿದರೆ, ತಾಯಿಯೊಬ್ಬಳಿಗೇ ಆ ಮಗುವನ್ನು ದತ್ತಕ್ಕೆ ಕೊಡುವ ಅಧಿಕಾರವಿದೆ. ತಂದೆ ಅಥವಾ ತಾಯಿ ಇಬ್ಬರೂ ಸತ್ತಿದ್ದರೆ, ಅಥವಾ ಸಂಸಾರವನ್ನು ತ್ಯಜಿಸಿದ್ದರೆ, ಅಥವಾ ಸಕ್ಷಮ ನ್ಯಾಯಾಲಯದಿಂದ ಅಸ್ವಸ್ಥ ಮನಸ್ಸಿನವರೆಂದು ಘೋಷಿಸಲ್ಪಟ್ಟಿದರೆ, ಆಗ ಮಗುವಿನ ಪಾಲಕರು ನ್ಯಾಯಾಲಯದ ಅನುಮತಿಯೊಂದಿಗೆ ಅದನ್ನು ದತ್ತಕ್ಕೆ ಕೊಡಬಹುದು.

ದತ್ತಕ್ಕೆ ಕೊಡುವ ವ್ಯಕ್ತಿಯು ಹಿಂದೂ ಆಗಿರಬೇಕು, ಮೊದಲು ಯಾರಿಗೂ ಆ ಮಗುವನ್ನು ದತ್ತಕ್ಕೆ ಕೊಟ್ಟಿರಬಾರದು, ಮದುವೆ ಆಗಿರಬಾರದು, (ಸಂಬಂಧಪಟ್ಟ ಸಮಾಜದ ರೂಢಿ, ಪದ್ಧತಿಯಲ್ಲಿ ವಿವಾಹಿತರನ್ನು ದತ್ತಕ್ಕೆ ಪಡೆಯಲು ಅವಕಾಶ ಇದ್ದರೆ ಹಾಗೆ ಪಡೆಯಬಹುದು), ಹದಿನೈದು ವರ್ಷಗಳಿಗಿಂತ ಹೆಚ್ಚು ವಯಸ್ಸಾಗಿರಬಾರದು (ಸಮಾಜದ

ರೂಢಿ, ಅಥವಾ ಪದ್ಧತಿಯಲ್ಲಿ ಹದಿನೈದು ವರ್ಷಗಳಿಗಿಂತ ಹೆಚ್ಚು ವಯಸ್ಸಿನವರನ್ನು ದತ್ತಕ್ಕೆ ಪಡೆಯಲು ಅವಕಾಶ ಇದ್ದರೆ ಹಾಗೆ ಪಡೆಯಬಹುದು.)

ದತ್ತಕ ಊರ್ಜಿತವಾಗಲು ಇರುವ ಇತರ ಷರತ್ತುಗಳು

೧. ಮಗನನ್ನು ದತ್ತು ಪಡೆಯುವ ಉದ್ದೇಶದ ತಂದೆಗೆ ಅಥವಾ ತಾಯಿಗೆ, ಮಗ, ಮಗನ ಮಗ ಅಥವಾ ಮಗನ ಮಗನ ಮಗ ಇರಬಾರದು:

೨. ಮಗಳನ್ನು ದತ್ತು ಪಡೆಯಬೇಕೆಂದಿರುವ ತಂದೆ ಅಥವಾ ತಾಯಿಗೆ, ಮಗಳಾಗಲೀ ಅಥವಾ ಮಗನ ಮಗಳಾಗಲೀ ಇರಬಾರದು :

೩. ದತ್ತಕ್ಕೆ ಪಡೆಯಲಿಚ್ಛಿಸುವ ತಂದೆ ಅಥವಾ ತಾಯಿಗೆ ಮತ್ತು ದತ್ತಕ್ಕೆ ಮಾಡಿಕೊಳ್ಳ ಬೇಕಾದ ಮಗ ಅಥವಾ ಮಗಳಿಗೆ ೨೧ ವರ್ಷಗಳ ಅಂತರ ಇರಬೇಕು.

೪. ಒಂದೇ ಮಗುವನ್ನು ಏಕ ಕಾಲಕ್ಕೆ ಇಬ್ಬರು ಅಥವಾ ಮೂವರು ದತ್ತು ಪಡೆಯುವಂತಿಲ್ಲ.

೫. ದತ್ತು ಕೊಡಬೇಕಾದ ಮಗುವನ್ನು ದತ್ತು ಹೋಗಬೇಕಾದ ಕುಟುಂಬಕ್ಕೆ ವಾಸ್ತವಿಕವಾಗಿ ದತ್ತು ಕೊಡಬೇಕೆನ್ನುವ ಉದ್ದೇಶದಿಂದ ವರ್ಗಾಯಿಸಬೇಕು ; ಹಾಗೂ

೬. ವಿಧಿಬದ್ಧವಾಗಿ ದತ್ತಕ್ಕೆ ಕೊಟ್ಟ ಮೇಲೆ ಆ ಮಗುವು ಎಲ್ಲಾ ಉದ್ದೇಶಗಳಿಗೂ ದತ್ತು ಹೋದ ತಂದೆ, ತಾಯಿಯ ವಾರಸುದಾರನಾಗಿ ಮುಂದುವರಿಯುತ್ತದೆ ಮತ್ತು ಆ ದಿನಾಂಕದಿಂದ ಜನ್ಮವಿತ್ತ ಕುಟುಂಬದಿಂದ ಪ್ರತ್ಯೇಕಿಸಲ್ಪಡುತ್ತದೆ. ಪರಂತು, ಮೂಲ ಕುಟುಂಬದಲ್ಲಿ ಮುಂದುವರೆದಿದ್ದರೆ ಆ ಮಗುವು ಯಾರನ್ನು ಮದುವೆಯಾಗುವಂತಿರಲಿಲ್ಲವೋ, ಅಂತಹವರನ್ನು ದತ್ತಕದ ಕಾರಣದಿಂದ ಮದುವೆಯಾಗುವಂತಿಲ್ಲ, ಮತ್ತು ದತ್ತಾಗುವ ಮೊದಲು ಆಸ್ತಿಯಲ್ಲಿ ಇದ್ದಂತಹ ಹಕ್ಕುಗಳು ದತ್ತಕವಾದ ಮೇಲೆಯೂ ಮುಂದುವರೆಯುತ್ತವೆ. ಮುಖ್ಯವಾಗಿ, ದತ್ತು ತೆಗೆದುಕೊಂಡ ಕುಟುಂಬದ ಆಸ್ತಿಯಲ್ಲಿ ಆ ಮಗುವಿಗೆ ಯಾವುದೇ ಹಕ್ಕು ಇಲ್ಲ. ಅಲ್ಲದೇ, ದತ್ತಕವಾದ ನಂತರವೂ ದತ್ತು ತಂದೆ, ತಾಯಿಗಳು ತಮ್ಮ ಆಸ್ತಿಯನ್ನು ವಿಲೇ ಮಾಡುವ ಹಕ್ಕನ್ನು ಕಳೆದುಕೊಳ್ಳುವುದಿಲ್ಲ.

ವಿಧ್ಯುಕ್ತವಾಗಿ ನಡೆದ ದತ್ತಕವನ್ನು ತಂದೆ ಅಥವಾ ತಾಯಿ ಅಥವಾ ದತ್ತು ಹೋದ ಮಗುವು ರದ್ದುಪಡಿಸಲು ಆಗುವುದಿಲ್ಲ. ದತ್ತಕದ ಬಗ್ಗೆ ನೋಂದಣಿ ಆದ ಕಾಗದವು ವಿಧಿಬದ್ಧವಾಗಿ ದತ್ತಕ ಮಾಡಿದೆ ಎಂಬ ಪೂರ್ವಗ್ರಹಿಕೆಯನ್ನು ಹೊಂದಿರುತ್ತದೆ. ದತ್ತಕ್ಕೆ ಕೊಡುವ ಸಲುವಾಗಿ ಯಾವುದೇ ರೀತಿ ಹಣ, ಆಸ್ತಿ ವಗೈರೆಗಳನ್ನು ಕೊಡುವಂತಿಲ್ಲ.

ಅಧ್ಯಾಯ - ಹದಿಮೂರು

ಬ್ಯಾಂಕ್ ವ್ಯವಹಾರ : ಚೆಕ್ಕುಗಳ ಬಗ್ಗೆ ತಿಳುವಳಿಕೆ

ಬ್ಯಾಂಕಿನ ವ್ಯವಹಾರ ಮಾಡುವಲ್ಲಿ ಚೆಕ್ಕುಗಳ ಪಾತ್ರ ಮಹತ್ವದ್ದಾಗಿದ್ದು, ಇಲ್ಲಿ ಚೆಕ್ಕುಗಳ ಮೂಲಕ ಹಣ ಕೊಡುವುದು ಮತ್ತು ಪಡೆಯುವುದು ಒಂದು ಸಾಮಾನ್ಯ ಕ್ರಮವಾಗಿದೆ. ಆದರೆ, ಚೆಕ್ಕುಗಳನ್ನು ಕೊಡುವ ಖಾತೆದಾರರು ತಾವು ಇನ್ನೊಬ್ಬರಿಗೆ ಕೊಡಬೇಕಾದ ಸಾಲ ಅಥವಾ ಹೊಣೆಗಾರಿಕೆ ತೀರಿಸುವ ಸಲುವಾಗಿ ಚೆಕ್ಕು ಕೊಟ್ಟಾಗ ತಮ್ಮ ಖಾತೆಯಲ್ಲಿ ಆ ಚೆಕ್ಕು ನಗದಾಗುವಷ್ಟು ಹಣ ಇರುವ ಬಗ್ಗೆ ಖಾತ್ರಿ ಮಾಡಿಕೊಳ್ಳಬೇಕು, ಅಥವಾ ಆ ಚೆಕ್ಕು ಪಾವತಿ ಆಗುವಂತೆ ಬ್ಯಾಂಕಿನಲ್ಲಿ ವ್ಯವಸ್ಥೆ ಮಾಡಬೇಕು. ಒಂದು ವೇಳೆ ಚೆಕ್ಕು ನಗದಾಗುವಷ್ಟು ಹಣ ಖಾತೆಯಲ್ಲಿ ಇಲ್ಲದಿದ್ದರೆ, ಅಥವಾ ಆ ಬಗ್ಗೆ ಖಾತೆದಾರ ಬ್ಯಾಂಕಿನಲ್ಲಿ ವ್ಯವಸ್ಥೆ ಮಾಡಿರದಿದ್ದರೆ, ಅದು ಅಮಾನ್ಯವಾಗಿ ಹಿಂತಿರುಗುತ್ತದೆ. ಆ ರೀತಿ ಚೆಕ್ಕುಗಳು ಹಿಂತಿರುಗಿ ಬಂದಾಗ, ಅವುಗಳ ಬಗ್ಗೆ ನೇರಕ್ರಮ ಜರುಗಿಸಲು ದಿನಾಂಕ ೧.೪.೧೯೮೯ರಿಂದ ಜಾರಿಗೆ ಬರುವಂತೆ ವರ್ಗಾವಣೆಯ ಲಿಖಿತಗಳ ಕಾಯ್ದೆಗೆ ತಿದ್ದುಪಡಿಯನ್ನು ಮಾಡಿದ್ದಾರೆ.

ಈ ತಿದ್ದುಪಡಿ ಅಧಿನಿಯಮದ ಕಲಂ ೧೩೮ರಲ್ಲಿ, ಚೆಕ್ಕು ಕೊಟ್ಟವರ ಖಾತೆಯಲ್ಲಿ ಅದು ನಗದಾಗಲು ಸಾಕಷ್ಟು ಹಣ ಇಲ್ಲವೆಂದಾಗಲೀ, ಅಥವಾ ಬ್ಯಾಂಕಿನ ಜೊತೆ ಇರುವ ಒಪ್ಪಂದದ ಪ್ರಕಾರ ಅದು ಕೊಡಬೇಕಾದ ಮೊತ್ತಕ್ಕಿಂತ ಚೆಕ್ಕು ಹೆಚ್ಚಿನ ಮೊತ್ತದ್ದಾಗಿದೆ ಎಂದಾಗಲೀ, ಹಿಂತಿರುಗಿ ಬಂದರೆ, ಅದು ಒಂದು ತಾಂತ್ರಿಕ ಅಪರಾಧವಾಗುತ್ತದೆ. ಇಲ್ಲಿ ಅಪರಾಧದ ಉದ್ದೇಶ ಮುಖ್ಯವಲ್ಲ. ಆದರೆ, ಆ ಚೆಕ್ಕನ್ನು ಯಾವುದೇ ವಿಧಿಬದ್ಧವಾಗಿ ವಸೂಲು ಮಾಡಬಹುದಾದ ಸಾಲ ಅಥವಾ ಹೊಣೆಗಾರಿಕೆಯನ್ನು ತೀರಿಸುವ ಸಲುವಾಗಿ ಕೊಟ್ಟಿರಬೇಕು. ಅಂದರೆ, ಅವಧಿ ಮೀರಿದ ಸಾಲ ಅಥವಾ ಹೊಣೆಗಾರಿಕೆ ವಿಮೋಚನೆಗಾಗಿ ನಗದಾಗದೇ ಬಂದರೆ, ಅದನ್ನು ಈ ಕಾಯ್ದೆಯಡಿಯಲ್ಲಿ ಅಪರಾಧವೆಂದು ಗಣಿಸಲಾಗದು.

ಅಪರಾಧ ಪೂರ್ತಿಯಾಗಲು ಅವಶ್ಯವಾದ ಪೂರ್ವ ಷರತ್ತುಗಳು

೧. ಚೆಕ್ಕನ್ನು ಕೊಟ್ಟ ಅಥವಾ ಅದು ಚಾಲ್ತಿ ಇರುವ ಅವಧಿಯಲ್ಲಿ ಯಾವ ತಾರೀಖಿಗೆ ಆರು ತಿಂಗಳು ಅವಧಿ ಮೊದಲು ಆಗುವುದೋ, ಆ ಅವಧಿಯಲ್ಲಿ ಅದನ್ನು ಬ್ಯಾಂಕಿಗೆ ಹಾಜರುಪಡಿಸಬೇಕು.

೨. ಚೆಕ್ಕು ಈ ಮೇಲೆ ಹೇಳಿದ ಎರಡರಲ್ಲೊಂದು ಕಾರಣದಿಂದ ಅಮಾನ್ಯವಾಗಿರಬೇಕು. ಅಂದರೆ, ಚೆಕ್ಕು ಕೊಟ್ಟವರ ಖಾತೆಯಲ್ಲಿ ಆ ಚೆಕ್ಕು ನಗದಾಗುವಷ್ಟು ಹಣ ಇಲ್ಲ ಅಥವಾ ಬ್ಯಾಂಕ್ ಮತ್ತು ಖಾತೆದಾರರ ಮಧ್ಯೆ ಇರುವ ಒಪ್ಪಂದದಂತೆ ಕೊಡಬೇಕಾದ ಮೊತ್ತಕ್ಕಿಂತ ಚೆಕ್ ಮೊತ್ತ ಹೆಚ್ಚಿದೆ ಎಂದು ಚೆಕ್ಕು ಅಮಾನ್ಯವಾಗಿರಬೇಕು.

೩. ಹೀಗೆ ಚೆಕ್ಕು ಅಮಾನ್ಯವಾಗಿ ಬಂದ ಮಾಹಿತಿ ತಿಳಿದ ೧೫ ದಿವಸಗಳಲ್ಲಿ ಚೆಕ್ಕು ಪಡೆದವ ಅಥವಾ ಯಥಾಕ್ರಮಧಾರಕ (ಹೋಲ್ಡರ್ ಇನ್ ಡ್ಯೂ ಕೋರ್ಸ್) ಚೆಕ್ಕು ಕೊಟ್ಟವರಿಗೆ ಆ ಚೆಕ್ಕಿನ ಮೊತ್ತ ಪಾವತಿ ಮಾಡಲು ಕೋರಿ ಲಿಖಿತ ನೋಟೀಸು ಕೊಟ್ಟಿರಬೇಕು.

೪. ಚೆಕ್ಕು ಕೊಟ್ಟವರು, ಹಣ ಪಾವತಿ ಮಾಡಲು ಕೊಟ್ಟ ನೋಟೀಸು ಮುಟ್ಟಿದ ೧೫ ದಿವಸಗಳಲ್ಲಿ, ಚೆಕ್ಕು ಪಡೆದವರಿಗೆ ಅಥವಾ ಯಥಾಕ್ರಮಧಾರಕರಿಗೆ ಸದರಿ ಚೆಕ್ ಮೊತ್ತ ಪಾವತಿ ಮಾಡಲು ವಿಫಲರಾಗಿರಬೇಕು.

ಈ ಮೇಲಿನ ಎಲ್ಲಾ ಷರತ್ತುಗಳನ್ನು ಪೂರೈಸಿದರೆ ಮಾತ್ರ ಈ ಅಪರಾಧ ಪೂರ್ತಿಯಾಗುತ್ತದೆ. ಈ ಮೇಲಿನ ಯಾವುದೇ ಒಂದು ಷರತ್ತು ಪೂರೈಸದಿದ್ದರೂ ಈ ತಾಂತ್ರಿಕ ಅಪರಾಧ ಪೂರ್ತಿಯಾಗುವುದಿಲ್ಲ. ಆಗ ದೂರು ನೀಡಲು ಅವಕಾಶ ಇರುವುದಿಲ್ಲ.

ಷರತ್ತು ಪೂರೈಸಿದ ಮೇಲೆ ದೂರು ನೀಡುವ ಅವಧಿ

ಚೆಕ್ಕನ್ನು ಪಡೆದವರು ಅದರ ವಿಧಿಬದ್ಧ ಅವಧಿಯಲ್ಲಿ ಚೆಕ್ಕನ್ನು ಹಾಜರುಪಡಿಸಿದಾಗ ಅದು ನಗದಾಗದೇ ಬಂದ ೧೫ ದಿವಸಗಳಲ್ಲಿ ಚೆಕ್ಕನ್ನು ಕೊಟ್ಟವರಿಗೆ ಸದರಿ ಚೆಕ್ಕಿನ ಮೊತ್ತ ಪಾವತಿಸಲು ಕೊಟ್ಟ ನೋಟೀಸು ಜಾರಿ ಆದ ನಂತರ ೧೫ ದಿವಸಗಳಲ್ಲಿ ಅವರು ಹಣ ಪಾವತಿ ಮಾಡದಿದ್ದರೆ, ೧೬ನೇ ದಿವಸದಿಂದ ಒಂದು ತಿಂಗಳ ಅವಧಿಯೊಳಗೆ ಅವರು ದೂರು ನೀಡಬೇಕು.

ದೂರನ್ನು ವಿಚಾರಣೆ ಮಾಡುವ ಸಕ್ಷಮ ನ್ಯಾಯಾಲಯ ಮತ್ತು ಸಂಜ್ಞಾನ

ಈ ತಿದ್ದುಪಡಿ ಅಧಿನಿಯಮದ ಕಲಂ ೧೪೨ರಲ್ಲಿ ಮಹಾ ನಗರ ದಂಡಾಧಿಕಾರಿ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಕ್ಕಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯ ಈ ಅಪರಾಧದ ಬಗ್ಗೆ ವಿಚಾರಣೆ ಮಾಡುವಂತಿಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಈ ಅಪರಾಧದ ಬಗ್ಗೆ ಸಂಜ್ಞಾನವನ್ನು (ಕಾಗ್ನಿಸೆನ್ಸ್) ಬಾಧಿತನ ಲಿಖಿತ ದೂರನ್ನು ಹೊರತುಪಡಿಸಿ ಯಾವ ವಿಧದಿಂದಲೂ ನ್ಯಾಯಾಲಯವು ಪಡೆದು ವಿಚಾರಣೆ ನಡೆಸುವಂತಿಲ್ಲ. ಈ ಬಗ್ಗೆ ನ್ಯಾಯಾಲಯಕ್ಕೆ ದೂರನ್ನು ನೀಡಿದರೆ, ಆಗ ನ್ಯಾಯಾಲಯವೇ ಸ್ವತಃ ಸಂಜ್ಞಾನಕ್ಕೆ ತೆಗೆದುಕೊಂಡು ವಿಚಾರಣೆಯನ್ನು ನಡೆಸುತ್ತದೆ.

ದೂರನ್ನು ನೀಡುವ ಸ್ಥಳ

ಈ ಚೆಕ್ ಅಮಾನ್ಯತೆಯ ಅಪರಾಧದ ಬಗ್ಗೆ ಯಾವುದೇ ದೂರನ್ನು ಯಾವ ಸ್ಥಳದಲ್ಲಿ ಚೆಕ್ಕು ಕೊಡಲಾಗಿದೆಯೋ, ಎಲ್ಲಿ ಚೆಕ್ಕನ್ನು ನಗದೀಕರಿಸಲು ಕೊಡಲಾಗಿದೆಯೋ ಅಥವಾ ಎಲ್ಲಿ ನಗದಾಗದೇ ಹಿಂತಿರುಗಿ ಬಂದಿದೆಯೋ, ಈ ಮೂರು ಸ್ಥಳಗಳಲ್ಲಿ ದೂರನ್ನು ಕೊಡಬಹುದು. ಈ ಬಗ್ಗೆ ದಂಡಪ್ರಕ್ರಿಯಾ ಸಂಹಿತೆಯ ಕಲಂ ೧೭೯ನ್ನು ಕೂಡ ಉಲ್ಲೇಖಿಸಬಹುದು. ಈ ಕಲಮಿನ ಪ್ರಕಾರ, ಎಲ್ಲಿ ಅಪರಾಧ ನಡೆದಿದೆಯೋ, ಅಥವಾ ಎಲ್ಲಿ ಅಪರಾಧದ ಪರಿಣಾಮ ಉಂಟಾಗಿದೆಯೋ, ಆ ಎಲ್ಲ ಸ್ಥಳಗಳಲ್ಲಿ ವ್ಯಾಪ್ತಿ ಹೊಂದಿದ ನ್ಯಾಯಾಲಯವು ಸದರಿ ಅಪರಾಧಗಳ ಬಗ್ಗೆ ವಿಚಾರಣೆ ಮಾಡಬಹುದು. ಈ ಅಪರಾಧವು ಸಾಬೀತಾದಲ್ಲಿ ಗರಿಷ್ಠ ಒಂದು ವರ್ಷದವರೆಗಿನ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಬಹುದಾಗಿದೆ.

ಜಾಮೀನು ಮತ್ತು ರಾಜಿ

ದಂಡ ಪ್ರಕ್ರಿಯಾ ಸಂಹಿತೆಯ ಮೊದಲನೇ ಪರಿಶಿಷ್ಟದ ಎರಡನೇ ಭಾಗದ ಪ್ರಕಾರ ಈ ಚೆಕ್ಕು ಅಮಾನ್ಯತೆಯ ಅಪರಾಧವು ಜಾಮೀನೀಯವಾಗಿದೆ.

ಇದು ಪರಸ್ಪರ ವ್ಯಕ್ತಿಗಳ ಮಧ್ಯೆ ನಡೆಯುವ ತಾಂತ್ರಿಕ ಅಪರಾಧವಾದ್ದರಿಂದಲೂ, ತಿದ್ದುಪಡಿ ಅಧಿನಿಯಮದಲ್ಲಿ ರಾಜಿಯ ಬಗ್ಗೆ ಯಾವುದೇ ನಿರ್ಬಂಧವಿಲ್ಲದಿರುವುದ ರಿಂದಲೂ, ಫಿರ್ಯಾದಿಯು ಇಂತಹ ಪ್ರಕರಣದಲ್ಲಿ ಆರೋಪಿಯೊಡನೆ ರಾಜಿ ಮಾಡಿಕೊಳ್ಳಬಹುದು.

ದಂಡ ಪ್ರಕ್ರಿಯಾ ಸಂಹಿತೆಯ ೨೦ನೇ ಅಧ್ಯಾಯದಲ್ಲಿರುವ ಕಲಂ ೨೫೭ರ ಅನ್ವಯ ಇಂತಹ ಪ್ರಕರಣದಲ್ಲಿ ನ್ಯಾಯಾಲಯದ ಅಂತಿಮ ಆದೇಶದ ಮೊದಲು, ಯಾವುದೇ ಹಂತದಲ್ಲಿ ಫಿರ್ಯಾದಿಯು ದೂರನ್ನು ಹಿಂಪಡೆಯಬಹುದು. ಈ ಮೂಲಕವೂ ರಾಜಿಯನ್ನು ಕಾರ್ಯಗತಗೊಳಿಸಬಹುದು.

ಅಧ್ಯಾಯ - ಹದಿನಾಲ್ಕು

ಆತ್ಮರಕ್ಷಣೆ ಅಥವಾ ಸ್ವಯಂ ರಕ್ಷಣೆಯ ಹಕ್ಕು

ಪ್ರತಿಯೊಬ್ಬನಿಗೂ ಜೀವಿಸುವ ಹಕ್ಕನ್ನು ಕಾನೂನು ನೀಡಿದೆ. ಅದೇ ರೀತಿ ಪ್ರತಿಯೊಬ್ಬ ವ್ಯಕ್ತಿಯೂ ಯಾವುದೇ ಸಂದರ್ಭದಲ್ಲಿ ಹಲ್ಲೆಗೆ ಒಳಗಾದಾಗ ಅಥವಾ ತನ್ನನ್ನು ಅಥವಾ ತನ್ನ ಆಸ್ತಿಯನ್ನು ರಕ್ಷಿಸಿಕೊಳ್ಳಲು ಹಲ್ಲೆಕೋರರ ವಿರುದ್ಧ ಚಲಾಯಿಸಬಹುದಾದ ಹಕ್ಕಿಗೆ 'ಆತ್ಮ ರಕ್ಷಣೆಯ ಹಕ್ಕು' ಎನ್ನುತ್ತಾರೆ. ಈ ರೀತಿ ಆತ್ಮ ರಕ್ಷಣೆಯ ಹಕ್ಕನ್ನು ಚಲಾಯಿಸುವಾಗ ಯಾವುದೇ ಅಪರಾಧ ಘಟಿಸಿದರೆ ಅದು ಅಪರಾಧವಾಗುವುದಿಲ್ಲ ಎಂದು ಭಾರತೀಯ ದಂಡ ಸಂಹಿತೆಯ ಕಲಂ ೯೬ರಲ್ಲಿ ಹೇಳಲಾಗಿದೆ. ಒಬ್ಬ ವ್ಯಕ್ತಿಯು ಹಲ್ಲೆಗೊಳಗಾಗುವ ಸಂದರ್ಭ ಬಂದಾಗ ಹಲ್ಲೇಕೋರರನ್ನು ಎದುರಿಸುವ ಸಾಧ್ಯತೆ ಇದ್ದರೆ ಹಾಗೆ ಮಾಡಲು ಅವನನ್ನು ಪ್ರೋತ್ಸಾಹಿಸುವ ಹಕ್ಕು ಇದಾಗಿದೆ. ಹಲ್ಲೆಕೋರರಿಗೆ ಹೆದರಿ, ಓಡಿಹೋಗಿ, ಕಾನೂನಿನ ಸಹಾಯವನ್ನೇ ಕೋರಬೇಕು ಎಂದು ಕಾನೂನು ನಿರೀಕ್ಷಿಸುವುದಿಲ್ಲ ; ಅಥವಾ ಹಲ್ಲೆಗೆ ಒಳಗಾಗಿ ಗಾಯಗೊಂಡು ನಂತರ ಕಾನೂನಿನ ಸಹಾಯವನ್ನು ಪಡೆಯಬೇಕೆಂದು ಸಹ ಕಾನೂನು ನಿರೀಕ್ಷಿಸುವುದಿಲ್ಲ. ಆತ್ಮ ರಕ್ಷಣೆಯ ಹಕ್ಕು ಒಂದು 'ಪ್ರತಿ ರಕ್ಷಣೆ'ಯ ಮಹತ್ವದ ಹಕ್ಕಾಗಿದೆ.

ಒಬ್ಬ ವ್ಯಕ್ತಿಯು ತನ್ನ ಆಸ್ತಿಯ ರಕ್ಷಣೆಯನ್ನು ಮಾಡಿಕೊಳ್ಳುವ ಸಲುವಾಗಿ ಅಥವಾ ಇತರರ ಆಸ್ತಿಯ ರಕ್ಷಣೆಯನ್ನು ಮಾಡುವ ಸಲುವಾಗಿ ಅಥವಾ ಮತ್ತೊಬ್ಬರನ್ನು ಹಲ್ಲೆಯಿಂದ ರಕ್ಷಿಸುವ ಸಲುವಾಗಿ ಕೂಡ ಈ ಆತ್ಮರಕ್ಷಣೆಯ ಹಕ್ಕನ್ನು ಚಲಾಯಿಸಬಹುದಾಗಿದೆ. ಆಸ್ತಿಯನ್ನು ದರೋಡೆಕೋರರಿಂದ, ಅತಿಕ್ರಮಣ ನಡೆಸುವವರಿಂದ, ಕಳ್ಳರಿಂದ ರಕ್ಷಿಸಿಕೊಳ್ಳಲು ಈ ರೀತಿ ಆತ್ಮರಕ್ಷಣೆಯ ಹಕ್ಕನ್ನು ಚಲಾಯಿಸಬಹುದು. ಇದರ ಅರ್ಥವೇನೆಂದರೆ, ಅತಿಕ್ರಮಣ ಮಾಡುವವರು ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವ ಸಮಯದಲ್ಲಿ ಆ ಆಸ್ತಿಯ ಮಾಲೀಕರು ಸುಮ್ಮನೆ ನಿಂತು, ಅದನ್ನು ನೋಡಿ, ನಂತರ ಅವರು ದಾವೆಯನ್ನು ಹಾಕಿ ಅದನ್ನು ವಾಪಸ್ ಪಡೆಯಬೇಕೆಂದಲ್ಲ. ಯಾವುದೇ ಸಂದರ್ಭದಲ್ಲಿ ಅಪರಾಧಿಕ ಕೃತ್ಯಗಳಿಂದ ಆಸ್ತಿಯು ಪರರ ವಶವಾಗುವ ಸಂಭವವಿದ್ದಾಗ ಅದನ್ನು ರಕ್ಷಿಸಿಕೊಳ್ಳಲು ಈ ಹಕ್ಕನ್ನು ಚಲಾಸಿಬಹುದಾಗಿದೆ.

ಆತ್ಮರಕ್ಷಣೆಯ ಹಕ್ಕನ್ನು ಚಲಾಯಿಸುವ ಸಂದರ್ಭದಲ್ಲಿ ಎದುರಾಳಿಗೆ

ಮರಣವುಂಟಾದರೂ ಅದು ಅಪರಾಧವಾಗುವುದಿಲ್ಲ. ಅಂತಹ ಹಲವು ಸಂದರ್ಭಗಳು ಹೀಗಿವೆ :

ಹಲ್ಲೆಕೋರರಿಂದ ಮರಣವುಂಟಾಗಬಹುದೆಂಬ ಭಯ ಮೂಡಿದಾಗ, ಗಂಭೀರ ಸ್ವರೂಪದ ಗಾಯಗಳಾಗಬಹುದಾದ ಸಂದರ್ಭಗಳಲ್ಲಿ, ಬಲಾತ್ಕಾರ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದಾಗ ಅನೈಸರ್ಗಿಕ ಲೈಂಗಿಕ ಕೃತ್ಯದಲ್ಲಿ ತೊಡಗುವ ಉದ್ದೇಶದಿಂದ ಹಲ್ಲೆ ಮಾಡಿದಾಗ, ವ್ಯಕ್ತಿಯನ್ನು ಅಪಹರಿಸುವ ಸಂದರ್ಭದಲ್ಲಿ ಅಥವಾ ಒಬ್ಬ ವ್ಯಕ್ತಿಯನ್ನು ಅಕ್ರಮವಾಗಿ ಬಂಧನದಲ್ಲಿಟ್ಟು ಆತನಿಗೆ ಬಿಡುಗಡೆಗೆ ಯಾವುದೇ ದಾರಿ ಸಿಗದಂತೆ ಮಾಡಿದ ಸನ್ನಿವೇಶದಲ್ಲಿ, ದರೋಡೆ, ರಾತ್ರಿ ಹೊತ್ತಿನಲ್ಲಿ ಮನೆಗೆ ಕನ್ನ ಹಾಕುವಾಗ, ಯಾವುದೇ ಆಸ್ತಿಗೆ ಬೆಂಕಿಯಿಂದ ಹಾನಿ ಮಾಡುವಾಗ, ಮನೆಯಲ್ಲಿ ಅತಿಕ್ರಮಣ ಮಾಡಿ, ಮರಣ ಅಥವಾ ಗಂಭೀರ ಗಾಯಗಳನ್ನು ಉಂಟು ಮಾಡಬಹುದಾದ ಸಂದರ್ಭಗಳಲ್ಲಿ, ಬಾಧಿತ ವ್ಯಕ್ತಿಯು ಹಲ್ಲೆಕೋರರ ಮೇಲೆ ಪ್ರತಿದಾಳಿ ಮಾಡಿ ಅವರಿಗೆ ಮರಣವನ್ನುಂಟು ಮಾಡಿದರೂ ಅದು ಅಪರಾಧವಾಗುವುದಿಲ್ಲ.

ಇಂತಹ ಹಕ್ಕನ್ನು ಚಲಾಯಿಸುವ ವ್ಯಕ್ತಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ, ಆ ರೀತಿ ಹಕ್ಕನ್ನು ಚಲಾಚಯಿಸದೇ ಇದ್ದಿದ್ದರೆ ತನಗೆ ಅಥವಾ ತನ್ನ ಆಸ್ತಿಗೆ ಅತೀವ ಹಾನಿಯಾಗುತ್ತಿತ್ತು ಎನ್ನುವುದನ್ನು ಸಾಬೀತುಪಡಿಸಬೇಕಾಗುತ್ತದೆ. ಪ್ರಾಣ ಅಥವಾ ಆಸ್ತಿಯನ್ನು ಉಳಿಸಿಕೊಳ್ಳಲು ಎಷ್ಟು ಪ್ರಮಾಣದ ಬಲ ಪ್ರಯೋಗ ಅವಶ್ಯವೋ ಅಷ್ಟನ್ನು ಮಾತ್ರ ಈ ಹಕ್ಕಿನನ್ವಯ ಮಾಡಬಹುದಾಗಿದೆ. ಮಾನಸಿಕವಾಗಿ ಅಸ್ವಸ್ಥನಾದ ವ್ಯಕ್ತಿ ಅಥವಾ ಪಾನಮತ್ತನಾಗಿ ನಶೆಯಲ್ಲಿರುವಂತಹ ವ್ಯಕ್ತಿಯು ಹಲ್ಲೆ ಮಾಡಿದಾಗ ಕೂಡ ಇಂತಹ ಹಕ್ಕನ್ನು ಚಲಾಯಿಸಬಹುದಾಗಿದೆ.

ಅಧ್ಯಾಯ - ಹದಿನೈದು

ಮಾನವ ಹಕ್ಕುಗಳು

ನಮ್ಮ ದೇಶದ ಸಂವಿಧಾನದಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಗೌರವಯುತವಾಗಿ ಸಮಾನತೆ ಮತ್ತು ಘನತೆಗಳಿಂದ ಜೀವಿಸುವ ಹಕ್ಕನ್ನು ಕೊಡಲಾಗಿದೆ. ಆದ್ದರಿಂದ, ಮಾನವ ಹಕ್ಕುಗಳು ಎಂದರೆ ಏನು ಮತ್ತು ಇದರ ಬಗ್ಗೆ ಇರುವ ಕಾನೂನು ಯಾವುದು ಎಂಬುದನ್ನು ತಿಳಿಯುವುದು ಅಗತ್ಯ.

ಯಾವುದೇ ವ್ಯಕ್ತಿಯ ಮೇಲೆ ಯಾವುದೇ ವಿಧದ ದೌರ್ಜನ್ಯ ಖಾಸಗಿ ವ್ಯಕ್ತಿಗಳಿಂದಾಗಲೀ ಅಥವಾ ಕಾನೂನನ್ನು ಜಾರಿಗೊಳಿಸುವ ಸರ್ಕಾರಿ ಅಧಿಕಾರಿಗಳಿಂದಾಗಲೀ ನಡೆದಾಗ ಅದು ಅಮಾನವೀಯ ಘಟನೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಯಾಗುತ್ತದೆ. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಕೂಡ ಇಂತಹ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಆದ ಕಾರಣ, ಜಾಗತಿಕವಾಗಿ ಕೈಗೊಳ್ಳಲಾದ ಮಾನವ ಹಕ್ಕುಗಳ ರಕ್ಷಣೆಯ ಅಂತರ್ರಾಷ್ಟ್ರೀಯ ಒಪ್ಪಂದಕ್ಕೆ ನಮ್ಮ ದೇಶವೂ ಕೂಡ ಬದ್ಧವಾಗಿದೆ. ಈ ದಿಶೆಯಲ್ಲಿ, ಭಾರತ ಸರ್ಕಾರವು ಮಾನವ ಹಕ್ಕುಗಳ ರಕ್ಷಣೆಯ ಕಾನೂನನ್ನು ೨೮-೦೯-೧೯೯೩ರಿಂದ ಜಾರಿಗೆ ತಂದಿದೆ.

ಈ ಕಾಯ್ದೆಯ ಎರಡನೇ ಕಲಮಿನ ಪ್ರಕಾರ, ಭಾರತದ ಸಂವಿಧಾನದಲ್ಲಿ ಹೇಳಿದಂತಹ ಮತ್ತು, ಅಥವಾ ಅಂತರ್ರಾಷ್ಟ್ರೀಯ ಒಪ್ಪಂದದಲ್ಲಿ ಸೇರ್ಪಡೆ ಆದಂತಹ ಮತ್ತು ಭಾರತದ ನ್ಯಾಯಾಲಯಗಳ ಮೂಲಕ ಜಾರಿಗಳಿಸಬಹುದಾದ ಪ್ರಾಣ, ಸ್ವಾತಂತ್ರ್ಯ, ಸಮಾನತೆ ಮತ್ತು ವ್ಯಕ್ತಿಯ ಘನತೆಗೆ ಸಂಬಂಧಿಸಿದಂತಹ ಹಕ್ಕುಗಳನ್ನು ಮಾನವ ಹಕ್ಕುಗಳೆಂದು ಹೇಳಲಾಗುತ್ತದೆ.

ಭಾರತ ಸಂವಿಧಾನದ ೨೧ನೇ ಅನುಚ್ಛೇದದ ಪ್ರಕಾರ ಪ್ರತಿಯೊಬ್ಬ ನಾಗರಿಕನಿಗೂ ಗೌರವಯುತವಾಗಿ ಜೀವಿಸುವ ಹಕ್ಕಿದೆ. ಕಾನೂನನ್ನು ಜಾರಿಗೊಳಿಸುವಂತಹ ಸರ್ಕಾರಿ ಸಂಸ್ಥೆಗಳಾದ ಪೋಲೀಸರು ಮತ್ತು ಇತರ ಇಲಾಖೆಯ ಅಧಿಕಾರಿಗಳು ನಾಗರಿಕರಿಗೆ ಹಿಂಸೆಯನ್ನು ನೀಡಿದಾಗ ; ಪೋಲೀಸ್ ವಶದಲ್ಲಿ ಸಾವು, ಮಾನಭಂಗ,ಹಿಂಸೆಯ ಪ್ರಕರಣಗಳು ನಡೆದಾಗ ; ವಿಚಾರಣಾಧೀನ ಕೈದಿಗಳಿಗೆ ಅಥವಾ ನ್ಯಾಯಾಲಯದಿಂದ

ಶಿಕ್ಷೆಗೆ ಒಳಗಾದ ಕೈದಿಗಳಿಗೆ ಕಾನೂನುಬದ್ಧವಾದ ರೀತಿಯಲ್ಲಿ ಸೌಲಭ್ಯಗಳನ್ನು ಕೊಡದೆ ಹಿಂಸೆಗೆ ಒಳಪಡಿಸಿದಾಗ ; ಇಂತಹ ಸಂದರ್ಭಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಇವುಗಳ ಬಗ್ಗೆ ದೂರು ಬಂದಾಗ ಮಾನವ ಹಕ್ಕುಗಳ ರಕ್ಷಣೆಯ ಆಯೋಗವು ಹೇಗೆ ಕ್ರಮ ಕೈಗೊಳ್ಳುತ್ತದೆಂಬುದನ್ನು ಈ ಕೆಳಗಿನ ಕೆಲುವು ಪ್ರಕರಣಗಳಿಂದಾಗಿ ತಿಳಿಯಬಹುದು :

(ಅ) ಕಿಶೋರರ ಬಟ್ಟೆಯನ್ನು ಕಿತ್ತೆಸೆದ ಪೋಲೀಸರು

ಸಾರಾಯಿ ಅಂಗಡಿಗಳನ್ನು ತೆರೆಯಬಾರದು ಎಂದು ವಿರೋಧಿಸಿ ಏಳು ಜನ ಬುಡಕಟ್ಟಿನ ಜನಾಂಗದ ವಿದ್ಯಾರ್ಥಿಗಳು ಚಳುವಳಿ ಮಾಡುತ್ತಿದ್ದಾಗ, ಕೇರಳದ ವೈನಾಡ್ ಜಿಲ್ಲೆಯ ತಿರುನೆಲ್ಲ ಪೋಲೀಸರು ಅವರನ್ನು ಬಂಧಿಸಿ, ಅವರ ಬಟ್ಟೆ ಬಿಚ್ಚಿ ಎರಡು ದಿನ ಪೋಲೀಸ್ ಲಾಕಪ್ಪಿನಲ್ಲಿ ಕೊಳೆಯುವಂತೆ ಮಾಡಿದ ವಿಷಯ ; ಮತ್ತು ಕೇರಳ ಸರ್ಕಾರವು ಸಾರಾಯಿ ಅಂಗಡಿಯನ್ನು ತೆರೆಯುವುದರ ವಿರುದ್ಧ ಕೆಲವು ಹುಡುಗರು ಮತ್ತು ಹುಡುಗಿಯರು ಚಳುವಳಿ ಮಾಡುತ್ತಿದ್ದಾಗ ಪೋಲೀಸರು ಅವರ ಜೊತೆಗೆ ದುರ್ವರ್ತನೆ ಮಾಡಿದ್ದಾರೆ ಎನ್ನುವ ವಿಷಯಗಳು ಪತ್ರಿಕಾ ವರದಿಗಳ ಮುಖಾಂತರ ಆಯೋಗದ ಗಮನಕ್ಕೆ ಬಂದಾಗ, ಆಯೋಗವು ಕೇರಳ ಸರ್ಕಾರಕ್ಕೆ ನೋಟೀಸ್ ನೀಡಿತ್ತು. ಅದರ ಪರಿಣಾಮವಾಗಿ, ಕೇರಳ ಸರ್ಕಾರವು ಆ ಆರೋಪಗಳನ್ನು ಒಪ್ಪಿಕೊಂಡು, ಸಂಬಂಧಪಟ್ಟ ನಾಲ್ವರು ಪೋಲೀಸ್ ಸಿಬ್ಬಂದಿಯನ್ನು ಅಮಾನತ್ತಿನಲ್ಲಿರಿಸಿ, ಅವರ ವಿರುದ್ಧ ವಿಚಾರಣೆಗೆ ಆದೇಶಿಸಿತ್ತು. ಸರ್ಕಾರದ ಈ ವರದಿಯನ್ನು ಪಡೆದ ಆಯೋಗವು, ಪ್ರತಿಯೊಬ್ಬ ನೊಂದ ಹುಡುಗನಿಗೆ ತಲಾ ರೂ. ಹತ್ತು ಸಾವಿರವನ್ನು ಪರಿಹಾರ ರೂಪದಲ್ಲಿ ಆರೋಪಿ ಅಧಿಕಾರಿಗಳಿಂದ ವಸೂಲು ಮಾಡಲು ಆದೇಶಿಸಿ, ಆ ಮೊತ್ತವನ್ನು ಸರ್ಕಾರದಿಂದ ಕೊಡಿಸಿತು.

ಈ ಮೇಲಿನ ಅಮಾನವೀಯ ಘಟನೆಯ ಬಗ್ಗೆ ಕೇರಳದ ಹರಿಜನ ಸಮಾಜ ಮಾನವ ಹಕ್ಕುಗಳ ಕೇಂದ್ರ, ಕಾನೂನು ನೆರವು ಕೇಂದ್ರ ಮತ್ತು ಮಧ್ಯ ಪ್ರದೇಶದ ಯುವ ಸಂಘಟನೆ, ಮುಂತಾದ ಸರ್ಕಾರೇತರ ಸಂಘಟನೆಗಳು ಆಯೋಗಕ್ಕೆ ದೂರನ್ನು ಸಲ್ಲಿಸಿದ್ದವು. ಇದರಿಂದಾಗಿ, ಆಯೋಗಕ್ಕೆ ಸರ್ಕಾರೇತರ ವ್ಯಕ್ತಿಗಳು, ಸಂಘಟನೆಗಳು ಕೂಡ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಮಾಹಿತಿ ನೀಡಬಹುದು ಎನ್ನುವುದನ್ನು ತಿಳಿಯಬಹುದು.

(ಆ) ರಾಬಿನ್ ಪಾಲ್‌ರಿಗೆ ಪೋಲೀಸ್ ಆತಿಥ್ಯ

ಕಲ್ಕತ್ತಾದ ನ್ಯೂ ರೆಡ್ ಬ್ಯಾಂಕ್ ಚಹಾ ಕಂಪನಿಗೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಬಿನ್ ಪಾಲ್‌ರವರಿಗೆ ದಿನಾಂಕ ೩೦.೦೪.೧೯೯೫ ಕರಾಳ ದಿನವಾಗಿತ್ತು. ಅಂದು, ಜಾಧವ್‌ಪುರದ ಪೋಲೀಸ್ ಠಾಣೆಯ ನಿರೀಕ್ಷಕರು ಪಾಲ್‌ರವರ ಮನೆಯನ್ನು ಪ್ರವೇಶಿಸಿ, ಅವರ ಮತ್ತು ಅವರ ಕುಟುಂಬದವರ ಮೇಲೆ ದೌರ್ಜನ್ಯ ಮಾಡಿ, ಅಸಭ್ಯ ಭಾಷೆಯಿಂದ ಬೈದು, ಮನೆಯ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡಿ, ನಂತರ

ಪಾಲ್‌ರವರನ್ನು ಪೋಲೀಸ್ ಠಾಣೆಗೆ ಎಳೆದೊಯ್ದು, ಡಾ. ಬಿಸ್ವಜೀತ್ ಬಿಸ್ವಾಸ್‌ರವರ ಮೇಲೆ ನಡೆದ ಹಲ್ಲೆಯ ಪ್ರಕರಣದ ವಿಚಾರಣೆಗಾಗಿ ಅವರನ್ನು ಕರೆತಂದಿದ್ದಾಗಿ ತಿಳಿಸಿದರು.

ಆಗ, ಪಾಲ್ ಅವರು, ತಮಗೂ, ಡಾ. ಬಿಸ್ವಾಸ್‌ರವರ ಮೇಲಿನ ಹಲ್ಲೆಗೂ ಯಾವುದೇ ಸಂಬಂಧವಿಲ್ಲವೆಂದು ಹೇಳಿದರೂ, ಪೋಲೀಸರು ನಂಬದೆ "ತಾವು ಆ ಘಟನೆಯಲ್ಲಿ ಷಾಮೀಲಾಗಿದ್ದಾಗಿ ಒಪ್ಪಿಕೊಂಡಂತೆ" ಬರೆದ ಕಾಗದಗಳ ಮೇಲೆ ರುಜು ಮಾಡುವಂತೆ ಒತ್ತಾಯಿಸಿದರು. ಕೊನೆಗೆ ಅವರನ್ನು ನ್ಯಾಯಾಲಯದ ಮುಂದೆಯೂ ಹಾಜರುಪಡಿಸಿದರು. ಇದರಿಂದ ಅವರಿಗೆ ದೈಹಿಕ ಹಾಗೂ ಮಾನಸಿಕ ನೋವು, ವೇದನೆ ಉಂಟಾಯಿತು.

ಈ ಘಟನೆಯಲ್ಲಿ ಪೋಲೀಸರೊಡನೆ ತಮ್ಮ ವ್ಯವಹಾರದಲ್ಲಿ ವಿರೋಧಿಗಳಾಗಿರುವ ಕೆಲವರು ಷಾಮೀಲಾಗಿರಬಹುದೆಂಬ ಸಂದೇಹದಿಂದಾಗಿ, ಪಾಲ್‌ರವರು ದಿನಾಂಕ ೨೬.೦೫.೧೯೯೬ರಂದು ಮಾನವ ಹಕ್ಕುಗಳ ಆಯೋಗಕ್ಕೆ ದೂರನ್ನು ಸಲ್ಲಿಸಿದರು. ಆ ದೂರಿನ ಬಗ್ಗೆ ವಿವರವನ್ನು ನೀಡಲು ಪಶ್ಚಿಮ ಬಂಗಾಳ ಸರ್ಕಾರಕ್ಕೆ ಆಯೋಗವು ನೋಟೀಸನ್ನು ನೀಡಿತು. ಪರಗಣ ಜಿಲ್ಲೆಯ ಪೋಲೀಸರು ದೂರಿನ ಆರೋಪಗಳನ್ನು ನಿರಾಕರಿಸಿದರು. ಯಾವ ಪೋಲೀಸ್ ಅಧೀಕ್ಷಕರ ಮೇಲೆ ದೂರನ್ನು ಕೊಡಲಾಗಿತ್ತೋ ಆ ಅಧಿಕಾರಿಯೇ ವರದಿಯನ್ನು ಕಳುಹಿಸಿದ್ದರಿಂದ, ಆಯೋಗವು ಈ ಪ್ರಕರಣದ ತನಿಖೆಯನ್ನು ರಾಜ್ಯ ಸಿಐಡಿ ಪೋಲೀಸರ ಮೂಲಕ ಮಾಡಿಸಿತು. ಆ ತನಿಖೆಯಿಂದಾಗಿ ಪಾಲ್‌ರವರು ನೀಡಿದ ದೂರಿನ ಆರೋಪಗಳು ಸಾಬೀತಾದುವು. ಹಿರಿಯ ಪೋಲೀಸ್ ಅಧಿಕಾರಿಯು ತನ್ನ ಅಧೀನ ಅಧಿಕಾರಿಗಳು ಅಕ್ರಮ ಕೆಲಸಗಳನ್ನು ಮಾಡದಂತೆ ತಡೆಯುವ ಬದಲು ಅವರನ್ನು ಸಮರ್ಥಿಸಿದ್ದಕ್ಕಾಗಿ ಆಯೋಗವು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿ, ಸಂಬಂಧಪಟ್ಟ ಪೋಲೀಸರ ವಿರುದ್ಧ ಕ್ರಮವನ್ನು ಕೈಗೊಳ್ಳಲು ಆದೇಶಿಸಿದೆ.

(೯) ಪೋಲೀಸ್ ದೌರ್ಜನ್ಯ

"ಕರ್ನಾಟಕದ ಬೆಳಗಾಂ ಜಿಲ್ಲೆಯ ಬೆಳಗಾವಿ ಹತ್ತಿರದ ಮಣ್ಣಿಕೇರಿ ಗ್ರಾಮದ ಜನರ ಮೇಲೆ ದಿನಾಂಕ ೩೧.೧೦.೧೯೯೫ ಮತ್ತು ೧.೧೧.೧೯೯೫ರಂದು ಪೋಲೀಸರು ದೌರ್ಜನ್ಯ ಮಾಡಿದ್ದರಿಂದಾಗಿ ಗ್ರಾಮಸ್ಥರು ಊರು ಬಿಟ್ಟು ಹೋಗಿದ್ದಾರೆ"- ಎನ್ನುವ ದೂರನ್ನು ಕರ್ನಾಟಕದ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್.ಕೆ. ಪಾಟೀಲ್‌ರವರು ಪತ್ರ ಮುಖೇನ ತಿಳಿಸಿದಾಗ, ಆಯೋಗವು ರಾಜ್ಯ ಪೋಲೀಸ್ ನಿರ್ದೇಶಕರಿಗೆ ಮತ್ತು ಸಂಬಂಧಪಟ್ಟ ಜಿಲ್ಲಾ ಪೋಲೀಸ್ ಅಧೀಕ್ಷಕರಿಗೆ ಸ್ಥಳ ಪರಿಶೀಲನೆ ಮಾಡಲು ನಿರ್ದೇಶನವನ್ನು ನೀಡಿ, ಅವರ ವರದಿಗಳು ಬಂದ ನಂತರ, ಪೋಲೀಸರ ದೌರ್ಜನ್ಯ ಮತ್ತು ಅತಿರೇಕವು ನಡೆದಿದ್ದು ದೃಢೀಕೃತವಾಗಿದ್ದರಿಂದ, ಆ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಲು ನಿರ್ದೇಶಿಸಿದ್ದನ್ನು ರಾಜ್ಯ ಸರ್ಕಾರವು ಪಾಲಿಸಿ,

ಮುಂದೆ ಇಂತಹ ಘಟನೆಗಳು ಪುನರಾವೃತ್ತಿಯಾಗುವುದಿಲ್ಲ ಎನ್ನುವ ಭರವಸೆಯನ್ನೂ ನೀಡಿದೆ.

ಮಾನವ ಹಕ್ಕುಗಳ ರಕ್ಷಣಾ ಆಯೋಗದ ರಚನೆ

ಈ ಆಯೋಗಕ್ಕೆ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದವರು ಅಧ್ಯಕ್ಷರಾಗಿಯೂ, ಒಬ್ಬರು ಸರ್ವೋಚ್ಚ ನ್ಯಾಯಾಲಯದ ಹಾಲಿ ಅಥವಾ ಮಾಜಿ ನ್ಯಾಯಾಧೀಶರು, ಒಬ್ಬರು ಉಚ್ಚ ನ್ಯಾಯಾಲಯದ ಹಾಲಿ ಅಥವಾ ಮಾಜಿ ಮುಖ್ಯ ನ್ಯಾಯಾಧೀಶರು, ಇಬ್ಬರು ವಿವಿಧ ರಂಗಗಳಲ್ಲಿ ಮಾನವ ಹಕ್ಕುಗಳ ವಿಷಯದ ಬಗ್ಗೆ ಜ್ಞಾನವನ್ನು ಹೊಂದಿದ ವ್ಯಕ್ತಿಗಳು, ಅಲ್ಪ ಸಂಖ್ಯಾತ ಆಯೋಗದ ರಾಷ್ಟ್ರೀಯ ಅಧ್ಯಕ್ಷರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಆಯೋಗದ ಅಧ್ಯಕ್ಷರು, ಹಾಗೂ ಮಹಿಳಾ ಆಯೋಗದ ಅಧ್ಯಕ್ಷರು ಸದಸ್ಯರಾಗಿರುತ್ತಾರೆ. ಈಗ ಈ ಆಯೋಗದಲ್ಲಿ ಕರ್ನಾಟಕದವರೇ ಆದ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಮಾನ್ಯ ಶ್ರೀ ಎಂ.ಎನ್. ವೆಂಕಟಾಚಲಯ್ಯನವರು ಅಧ್ಯಕ್ಷರಾಗಿಯೂ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಮಾನ್ಯ ಶ್ರೀ ವಿ.ಎಸ್. ಮಳೀಮಠ್‌ರವರು ಸದಸ್ಯರಾಗಿಯೂ ಇದ್ದಾರೆ.

ಈ ಆಯೋಗದ ಕಾರ್ಯಗಳು

ಯಾವುದೇ ಬಾಧಿತ ವ್ಯಕ್ತಿಯು ಮಾನವ ಹಕ್ಕು ಉಲ್ಲಂಘನೆಯಾಗಿದೆ ಎಂದಾಗಲೀ ಅಥವಾ ಅಂತಹ ಸಮಯದಲ್ಲಿ ಸರ್ಕಾರಿ ಅಧಿಕಾರಿಗಳು ಅದನ್ನು ತಡೆಯಲು ವಿಫಲರಾಗಿದ್ದಾರೆ ಎಂದಾಗಲೀ ದೂರನ್ನು ನೀಡಿದರೆ ಅಥವಾ ಅಂತಹ ವಿಷಯಗಳು ಆಯೋಗದ ಗಮನಕ್ಕೆ ಬಂದರೆ, ಅವುಗಳ ಬಗ್ಗೆ ವಿಚಾರಣೆಯನ್ನು ನಡೆಸುವುದು. ಯಾವುದೇ ನ್ಯಾಯಾಲಯದ ಮುಂದೆ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ನಡವಳಿಕೆಗಳು ನಡೆಯುತ್ತಿದ್ದರೆ ಅಲ್ಲಿಯೂ ಕೂಡ ಆಯೋಗವು ಮಧ್ಯೆ ಪ್ರವೇಶಿಸಬಹುದುದ. ಜೈಲುಗಳಿಗೆ ಭೇಟಿಕೊಟ್ಟು ಅಲ್ಲಿಯ ಸ್ಥಿತಿ ಗತಿಯ ಬಗ್ಗೆ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಸಲಹೆ ನೀಡುವುದು, ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಇತರ ಪ್ರಕರಣಗಳ ತನಿಖೆ ಮಾಡುವುದು, ಇವೆಲ್ಲವೂ ಆಯೋಗದ ಕಾರ್ಯಗಳಲ್ಲಿ ಸೇರಿವೆ.

ಈ ಆಯೋಗಕ್ಕೆ ತನ್ನದೇ ಆದ ತನಿಖಾ ಸಿಬ್ಬಂದಿಯೂ ಇದೆ. ಅಲ್ಲದೇ ಸರ್ಕಾರದ ಇತರೆ ಸಂಸ್ಥೆಗಳ ಸಹಾಯವನ್ನೂ ಕೂಡ ಆಯೋಗವು ತನಿಖೆಗಾಗಿ ಪಡೆಯಬಹುದಾಗಿದೆ.

ಆಯೋಗದ ತನಿಖೆಯು ಮುಗಿದ ಮೇಲೆ, ಮಾನವ ಹಕ್ಕುಗಳ ಉಲ್ಲಂಘನೆ ಯಾಗಿದ್ದರೆ, ಸಂಬಂಧಪಟ್ಟ ವ್ಯಕ್ತಿ ಅಥವಾ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳಲು ಸಂಬಂಧಪಟ್ಟ ಸರ್ಕಾರಕ್ಕೆ ನಿರ್ದೇಶನ ನೀಡುತ್ತದೆ. ಈ ವರದಿಗಳ ಉದ್ದೇಶವನ್ನು

ಈಡೇರಿಸಲು ನಿರ್ದೇಶನ ಪಡೆಯಬೇಕಾದಂತಹ ಸಂದರ್ಭಗಳಲ್ಲಿ ಆಯೋಗವು ಸರ್ವೋಚ್ಚ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯಗಳಿಗೆ ರಿಟ್ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಅಲ್ಲದೇ, ಸಂಬಂಧಪಟ್ಟ ಸರ್ಕಾರ ಅಥವಾ ಪ್ರಾಧಿಕಾರಕ್ಕೆ ಈ ಆಯೋಗವು ಬಾಧಿತ ವ್ಯಕ್ತಿ ಅಥವಾ ಕುಟುಂಬಗಳಿಗೆ ತಕ್ಷಣ ಮಧ್ಯಂತರ ಪರಿಹಾರವನ್ನು ಕೊಡುವಂತೆಯೂ ಆದೇಶಿಸಬಹುದಾಗಿದೆ.

ಈ ಆಯೋಗಕ್ಕೆ ಭಾರತ ದೇಶದ ಯಾವುದೇ ಭಾಷೆಯಲ್ಲಿ ದೂರನ್ನು ಸಲ್ಲಿಸಬಹುದಾಗಿದೆ. ಆಯೋಗದ ಕಛೇರಿಯ ವಿಳಾಸ ಹೀಗಿದೆ :

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ,
ಸರ್ದಾರ್ ಪಟೇಲ್ ಭವನ, ಸಂಸದ್ ಮಾರ್ಗ,
ನವದೆಹಲಿ - ೧೧೦ ೦೦೧.
ದೂರವಾಣಿಸಂಖ್ಯೆ : ೩೧೧೫೬೦, ೩೩೪೮೪೭೭.
ಫ್ಯಾಕ್ಸ್ ಸಂಖ್ಯೆ : ೩೩೪೦೦೧೬.

ದೂರನ್ನು ಘಟನೆ ನಡೆದ ಒಂದು ವರ್ಷದೊಳಗೆ ಸಲ್ಲಿಸಬೇಕು.

ದೂರನ್ನು ಸ್ವೀಕರಿಸಿದ ಮೇಲೆ ಆಯೋಗವು ಸಂಬಂಧಪಟ್ಟ ಸರ್ಕಾರದಿಂದ, ಪ್ರಾಧಿಕಾರದಿಂದ ಅಥವಾ ಸಂಸ್ಥೆಯಿಂದ ಮಾಹಿತಿಯನ್ನು ತರಿಸಿಕೊಂಡು ಅದರ ಅಧ್ಯಯನ ಮಾಡಿ ಮುಂದಿನ ಸೂಕ್ತ ಕ್ರಮವನ್ನು ಕೈಗೊಳ್ಳುವುದು.

ಆಯೋಗವು ತನಿಖೆಗೆ ತೆಗೆದುಕೊಳ್ಳಲು ಆಗದ ದೂರುಗಳು

೧. ಒಂದು ವರ್ಷಕ್ಕಿಂತ ಮೊದಲು ನಡೆದ ಘಟನೆಗಳು.

೨. ಯಾವುದೇ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯ.

೩. ಅಸ್ಪಷ್ಟವಾದ, ಅನಾಮಧೇಯ ದೂರುಗಳು.

೪. ಸುಳ್ಳು ಸ್ವರೂಪದ ದೂರುಗಳು.

೫. ಈ ಆಯೋಗದ ವ್ಯಾಪ್ತಿಯ ಹೊರಗಿರುವ ವಿಷಯಗಳು ; ಮತ್ತು

೬. ನೌಕರಿಗೆ, ಸೇವೆಗೆ ಸಂಬಂಧಿಸಿದ ವಿಷಯಗಳು.

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೭ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ – ಕನ್ನಡಿಗ – ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಬೆಂಗಳೂರಿನಲ್ಲಿ ನಡೆಯುತ್ತಿರುವ ೭೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು–೫೬೦೦೧೮